ಸಂಪುಟ 20 ಸಂಚಿಕೆ 32
ಆಗಸ್ಟ್ 8, 1999 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ




'ಆಪರೇಷನ್ ವಿಜಯ್' ವೀರ ಸೈನಿಕರದ್ದು




ಬಿಜೆಪಿ ಸರ್ಕಾರದ್ದು ಆಪರೇಷನ್ 'ಕಣ್ಣಿಗೆ ಮಣ್ಣು'

ಕರ್ನಾಟಕದ ಜನತೆಗೆ ಮಹಾದ್ರೋಹ



ತ್ಯಾಗಮಯಿ ವಿಮಲಾರಣದಿವೆ ಇನ್ನಿಲ್ಲ



ಕರ್ನಾಟಕದಲ್ಲಿ ಕೋಮುವಾದಿ ಶಕ್ತಿಗಳನ್ನು ಸೋಲಿಸಿ

ಸಿಪಿಐ(ಎಂ) ರಾಜ್ಯ ಸಮಿತಿಯ ಕರೆ

ಇಡೀ ದೇಶದೊಂದಿಗೆ ನಮ್ಮ ರಾಜ್ಯ 13 ನೇ ಲೋಕಸಭೆ, ಆದರ ಜೊತೆಗೆ ತನ್ನ ವಿಧಾನ ಸಭೆ ಚುನಾವಣೆಗಳಿಗೆ ಸಜ್ಜು ಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಿಪಿಐ(ಎಂ)ನ ಕರ್ನಾಟಕ ರಾಜ್ಯ ಸಮಿತಿ ಜುಲೈ 30 ಹಾಗೂ 31 ರಂದು ಸಭೆ ಸೇರಿ ಪ್ರಸಕ್ತ ರಾಜಕೀಯದ ಪರಿಸ್ಥಿತಿಯನ್ನು ಚರ್ಚಿಸಿತು. ಸಭೆಯಲ್ಲಿ ಈ ಕುರಿತು ಅಂಗೀಕರಿಸಿದ ನಿರ್ಣಯವನ್ನು ಇಲ್ಲಿ ಕೊಡಲಾಗಿದೆ.

ರಾಜ್ಯದಲ್ಲಿ ಕಾಂಗ್ರೆಸ್ ವಿರೋಧಿ ಜಾತ್ಯಾತೀತ ಪಕ್ಷವಾಗಿದ್ದು ಕರ್ನಾಟಕದ ರಾಜಕಾರಣದಲ್ಲಿ ಜಾತ್ಯಾತೀತ ಶಕ್ತಿಗಳ ಪ್ರಾಬಲ್ಯಕ್ಕೆ ದೊಡ್ಡ ಕಾಣಿಕೆ ನೀಡಿದ್ದ ಜನತಾದಳವನ್ನು ಒಡೆಯಲು ಹಾಗೂ ಅದನ್ನು ಭಾರತೀಯ ಜನತಾ ಪಕ್ಷದ ಸಹಚರನನ್ನಾಗಿ ಮಾಡಿಕೊಳ್ಳಲು ನಿರಂತರವಾಗಿ ಶ್ರಮಿಸುತ್ತಿದ್ದ ರಾಮಕೃಷ್ಣ ಹೆಗ್ಗಡೆಯವರು, ಜೊತೆಗೆ ಜಾರ್ಜ್ ಫರ್ನಾಂಡಿಸ್ ಹಾಗೂ ಪ್ರಧಾನಿ ವಾಜಪೇಯಿಯವರ ಕೂಟ ಈ ಒಳಸಂಚಿನಲ್ಲಿ ಕೈ ಜೋಡಿಸಿದ ಮೇಲೆ ಯಶಸ್ವಿಯಾಗಿದ್ದಾರೆ.

ಹಿಂದಿನ ದಿನ (ಜು-14 ರಂದು) "ಬಿ.ಜೆ.ಪಿ. ಒಂದು ಕ್ಯಾನ್ಸರ್" ಹಂಗಿನರಮನೆಗಿಂತ ವಿಂಗಡದ ಗುಡಿ ಲೇಸು ಎಂದು ಕರೆದು ಮರುದಿನ ಜನತಾದಳದ ಯಾರೊಂದಿಗೂ ಸಮಾಲೋಚನೆ ಕೂಡ ಮಾಡದೇ ದಿಢೀರನೆ ಜನತಾದಳವನ್ನು ಕೋಮುವಾದಿ ಹಾಗೂ ಫ್ಯಾಸಿಸ್ಟ್ ಸ್ವರೂಪದ ಬಿಜೆಪಿ ಕೂಟದ ಅಡಿಯಾಳಾಗಿಸುವ ಘೋಷಣೆ ಮಾಡಿದ್ದು, ಜನತಾ ದಳದ ರಾಜಕೀಯ ವ್ಯವಹಾರಗಳ ಸಮಿತಿಯ ತೀರ್ಮಾನಕ್ಕೆ ಬದ್ಧನಾಗಿ ನಡೆಯುತ್ತೇನೆಂದು ಸಾರಿ ನಂತರ ರಾಜಕೀಯ ವ್ಯವಹಾರಗಳ ಸಮಿತಿಯ ತೀರ್ಮಾನವನ್ನು ಉಲ್ಲಂಘಿಸಿ ಜನತಾದಳವನ್ನು ಒಡೆದದ್ದು ಅನೈತಿಕ ರಾಜಕೀಯ ಹಾಗೂ ಜಾತ್ಯಾತೀತ ತತ್ವದ ಬೆನ್ನಿಗೆ ಚೂರಿ ಇರಿದಂತೆ ಎಂದು ಪರಿಗಣಿಸುತ್ತದೆ. ಮುಖ್ಯಮಂತ್ರಿಯಾಗಿ ತಮ್ಮನ್ನು ಆಯ್ಕೆಯಾಗಲು ಅವಕಾಶ ನೀಡಿದ ಕರ್ನಾಟಕದ ಜನತೆಗೆ ಮಾಡುತ್ತಿರುವ ದ್ರೋಹದ ತುತ್ತ ತುದಿಗೆ ಅವರು ಈ ಮೂಲಕ ಏರಿದ್ದಾರೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಪರಿಗಣಿಸುತ್ತದೆ.

ಎನ್.ಡಿ.ಎಯನ್ನೇ ಜಾತ್ಯಾತೀತವನ್ನಾಗಿ ಮಾಡುತ್ತೇವೆಂದು ಜನರಲ್ಲಿ ಭ್ರಮೆ ಬಿತ್ತಿ ಕೋಮುವಾದದ ಬೆಳವಣಿಗೆಗೆ ಅವಕಾಶ ಮಾಡಿಕೊಡುತ್ತಿದ್ದಾರೆ.

ಬಿ.ಜೆ.ಪಿ. ಕೂಟಕ್ಕೆ ಸೇರುವ ವಿರುದ್ಧ ನಿಲುವು ತಳೆದು ಜಾತ್ಯಾತೀತ ತತ್ವವನ್ನು ಎತ್ತಿಹಿಡಿದ ಜನತಾದಳದ ರಾಜ್ಯ ನಾಯಕರು ಹಾಗೂ ಜನತಾದಳ ರಾಜಕೀಯ ವ್ಯವಹಾರಗಳ ಸಮಿತಿಯ ಬಹುಮಂದಿ ಸದಸ್ಯರ ನಿಲುವನ್ನು ಸಿಪಿಐ(ಎಂ) ರಾಜ್ಯ ಸಮಿತಿ ಶ್ಲಾಘಿಸುತ್ತದೆ. ಇದು ಕರ್ನಾಟಕದಲ್ಲಿ ಜಾತ್ಯಾತೀತ ಶಕ್ತಿಗಳ ಮುಂದಿನ ಬೆಳವಣಿಗೆಗೆ ನೀಡಿದ ಪ್ರಮುಖ ಕಾಣಿಕೆ ಎಂದು ಪರಿಗಣಿಸುತ್ತದೆ.

ಜವತಾದಳದ ಒಡಕು ಜಾತ್ಯಾತೀತ ಶಕ್ತಿಗಳಿಗೆ ಹಿನ್ನಡೆ ಎನ್ನುವುದು ವಾಸ್ತವವಾದರೂ ಇದು ಬಿಜೆಪಿ ಪಕ್ಷಕ್ಕೆ ನುಂಗಲಾರದ ಬಿಸಿ ತುಪ್ಪವಾಗಿ ಪರಿಣಮಿಸಿದೆ. ರಾಜ್ಯದಲ್ಲಿ ತನ್ನದೇ ಏಕಪಕ್ಷ ಸರ್ಕಾರವನ್ನು ರಚಿಸುವ ಕನಸಿಗೆ ಭಂಗ ತರುವುದೆಂದು ಹಾಗೂ ಜನತೆಯಿಂದ ನಿರಾಕರಿಸಲ್ಪಟ್ಟ ಹಾಗೂ ತಾವು ನಿರಂತರವಾಗಿ ದೂಷಿಸುತ್ತಿದ್ದ ಜನತಾದಳದ ಸರ್ಕಾರಿ ಬಣದೊಂದಿಗೆ ಸೇರುವುದು ಜನರನ್ನು ತಮ್ಮಿಂದ ದೂರ ಸರಿಸುವುದೆಂದು ಅವರು ಆತಂಕಗೊಂಡಿದ್ದಾರೆ. ಇದು ಬಿ.ಜೆ.ಪಿ. ಪಕ್ಷದೊಳಗಿನ ಹಾಗೂ ಅವರ ಕೂಟದೊಳಗಿನ ತಿಕ್ಕಾಟವನ್ನು ತೀವ್ರಗೊಳಿಸಿದೆ. ಚುನಾವಣೆಗಳಿಗೆ ಕೆಲವೇ ದಿನಗಳ ಮೊದಲು ಹಠಾತ್ ಬೆಳವಣಿಗೆಯಾಗಿ ಬಂದ ಘಟನೆ ರಾಜ್ಯದಲ್ಲಿ ಬಿಜೆಪಿ ಕೂಟದಲ್ಲಿ ಸಾಕಷ್ಟು ಗೊಂದಲ ಹಾಗೂ ಅನಿಶ್ಚಿತತೆಯನ್ನು ಮೂಡಿಸಿದೆ.


ಒಟ್ಟಾರೆಯಾಗಿ ಈ ಬೆಳವಣಿಗೆಯಿಂದ ಕಾಂಗ್ರೆಸ್ ಪಕ್ಷ ಇನ್ನಷ್ಟು ಹೆಚ್ಚು ಬಲಗೊಳ್ಳಲು ನೆರವಾಗಿದೆ ಎಂಬುದು ಇಂದಿನ ಪರಿಸ್ಥಿತಿಯಲ್ಲಿ ಎದ್ದು ಕಾಣುವ ಅಂಶ.

ಇದೇ ಸಂದರ್ಭದಲ್ಲಿ ರಾಜ್ಯದ ಅತ್ಯಂತ ಪ್ರತಿಗಾಮಿ ವರ್ಗವಾದ ಅರೆಪಾಳೆಯಗಾರಿ ಭೂಮಾಲಿಕ ವರ್ಗ ಬಿ.ಜೆ.ಪಿ ಕೂಟದಲ್ಲಿ ಕೇಂದ್ರೀಕೃತವಾಗಿರುವುದನ್ನು ಗಮನಿಸಬೇಕು.

ಇಂತಹ ಸಂದರ್ಭದಲ್ಲಿ

1. ರಾಜ್ಯದಲ್ಲಿ ಎಡಶಕ್ತಿಗಳ ಶಕ್ತಿ ಹೆಚ್ಚುವುದು ಅತ್ಯಗತ್ಯವಾಗಿದೆ. ಜಾತ್ಯಾತೀತ ತತ್ವಕ್ಕಾಗಿ ಕೋಮುವಾದದ ವಿರುದ್ಧ ರಾಜಿಯಿಲ್ಲದೆ ಸೆಣಸಾಟ ನಡೆಸಿರುವ ಹಾಗೂ ಹೊಸ ಆರ್ಥಿಕ ನೀತಿಯ ವಿರುದ್ಧ ಬಿಜೆಪಿ ಸರ್ಕಾರದ 13 ತಿಂಗಳ ವಿನಾಶಕಾರಿ ಆಡಳಿತದ ವಿರುದ್ಧ ನಿರಂತರ ಹೋರಾಟದಲ್ಲಿರುವ ಸಿಪಿಐ(ಎಂ) ಒಂದು ಲೋಕಸಭೆ, 10 ವಿಧಾನಸಭೆ ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಈ ಕ್ಷೇತ್ರಗಳಲ್ಲಿ ಎಲ್ಲ ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳು ಬೆಂಬಲಿಸಬೇಕೆಂದು ವಿನಂತಿಸುತ್ತದೆ.

2. ಜಾತ್ಯಾತೀತ ತತ್ವವನ್ನು ಎತ್ತಿಹಿಡಿದು ಬಿಜೆಪಿ ಕೂಟದ ದುಷ್ಟ ಸಂಚಿನ ವಿರುದ್ಧ ಸೆಣಸುತ್ತಿರುವ ಜನತಾದಳ ಬಣಕ್ಕೆ ಜನತಾದಳದೊಳಗಿನ ಜಾತ್ಯಾತೀತ ಮನೋಭಾವದ ಎಲ್ಲ ಶಕ್ತಿ ವ್ಯಕ್ತಿಗಳು ಹಾಗೂ ರಾಜ್ಯದ ಜನತೆ ಬೆಂಬಲಿಸಬೇಕೆಂದು ಕರೆ ನೀಡುತ್ತದೆ. ಸಿಪಿಐ(ಎಂ) ಈ ಬಣದೊಡಗೂಡಿ ಕೋಮುವಾದಿ ಶಕ್ತಿಗಳ ಸೋಲಿಗೆ ಶ್ರಮಿಸುತ್ತದೆ.



ನಿಮ್ಮ ಪ್ರಶ್ನೆ ? ನಮ್ಮ ಉತ್ತರ

ತಮಿಳುನಾಡಿನ ಅಣ್ಣಾ ಡಿ.ಎಂ.ಕೆ.ಯ ಜಯಲಲಿತ ಹಾಗೂ ಬಿಹಾರದ ಲಾಲೂ ಪ್ರಸಾದ್ ಎಷ್ಟು ಭ್ರಷ್ಟರು ಎಂಬುದು ಭಾರತಕ್ಕೆಲ್ಲಾ ತಿಳಿದಿದೆ. ಈ ಭ್ರಷ್ಟಾಚಾರದ ವಿರುದ್ಧ ಎಡ ಪಕ್ಷಗಳು ತೀವ್ರ ಹೋರಾಟಗಳನ್ನು ನಡೆಸಿವೆ. ಆದರೆ ಮುಂದೆ ಬರಲಿರುವ ಲೋಕಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಮತ್ತು ಇತರ ಎಡ ಪಕ್ಷಗಳು ಈ ಪಕ್ಷಗಳೊಂದಿಗೆ ಚುನಾವಣಾ ಮೈತ್ರಿ ಮಾಡಿಕೊಂಡಿವೆ ಎಂಬ ಸುದ್ದಿ ಓದಿ ನಮಗೆ ಬಹಳ ವಿಷಾದ ಉಂಟಾಯಿತು. ಇಂಥ ಭ್ರಷ್ಟರ ಜೊತೆಯಲ್ಲಿ ಚುನಾವಣಾ ಮೈತ್ರಿಯನ್ನು ತಪ್ಪಿಸಲು ಸಾಧ್ಯವಿಲ್ಲವೆ?.

- ರಾಯಚೂರಿನ ಸಂಗಾತಿಗಳು

ಜಯಲಲಿತ ತಾವು ಮುಖ್ಯ ಮಂತ್ರಿಯಾಗಿದ್ದಾಗ ಹಲವು ಹತ್ತು ಭ್ರಷ್ಟಾಚಾರ ಹಗರಣಗಳಲ್ಲಿ ಸಿಲುಕಿಕೊಂಡಿರುವುದು ಆ ಬಗ್ಗೆ ಅನೇಕ ಕೇಸುಗಳು ನ್ಯಾಯಾಲಯಗಳಲ್ಲಿ ನಡೆಯುತ್ತಿರುವುದು ಕೂಡ ಸತ್ಯ.

ತಮ್ಮ ದತ್ತು ಪುತ್ರನ ಮದುವೆಯಲ್ಲಿ ಭ್ರಷ್ಟಾಚಾರದಿಂದ ಬಂದ ಹಣವನ್ನು ಅಸಹ್ಯಕರವಾಗಿ ಮೆರೆಸಿರುವುದು ಜನರಲ್ಲಿ ಕೆಟ್ಟ ಭಾವನೆಯನ್ನು ತಂದಿದೆ. ಅದೇ ರೀತಿ ಲಾಲೂ ಪ್ರಸಾದ್ ಯಾದವ್‌ರವರ ಮೇಲಿನ ಹಗರಣವೂ ಕೂಡ. ಈ ಭ್ರಷ್ಟಾಚಾರದ ಹಗರಣಗಳ ಸಂದರ್ಭದಲ್ಲಿ ಸಿಪಿಐ(ಎಂ), ಇತರ ಎಡ ಪಕ್ಷಗಳು ಎರಡು ರಾಜ್ಯಗಳಲ್ಲಿ ತೀವ್ರ ಹೋರಾಟ ನಡೆಸಿವೆ. ಬಿಹಾರದಲ್ಲಿ ಹಲವು ರಾಜ್ಯವ್ಯಾಪಿ ಬಂದ್‌ಗಳನ್ನು ಸಂಘಟಿಸಿ ದವು. ಆದರೂ ಕೂಡ ಮುಂದಿನ ಚುನಾವಣೆ ಗಳಲ್ಲಿ ಎಡ ಪಕ್ಷಗಳು ಎರಡು ರಾಜ್ಯಗಳಲ್ಲಿ ಈ ಪಕ್ಷಗಳೊಡನೆ ಚುನಾವಣಾ ಹೊಂದಾಣಿಕೆ ಮಾಡಿಕೊಂಡಿವೆ. ಇದು ಕೇವಲ ಸ್ಪರ್ಧಿಸುವ ಸ್ಥಾನಗಳ ಹಂಚಿಕೆ ಮಾತ್ರ. ಈ ಪಕ್ಷಗಳೊಡನೆ ಒಂದೇ ವೇದಿಕೆಯಿಂದ ಚುನಾವಣಾ ಪ್ರಚಾರವಾಗಲಿ ಅಥವಾ ಒಂದು ಚುನಾವಣಾ ರಂಗವನ್ನು ರಚಿಸಿಕೊಂಡು ಒಟ್ಟಿಗೆ ಸ್ಪರ್ಧೆ ಮಾಡುವುದಾಗಲಿ ಇಲ್ಲ.

ಸಿಪಿಐ(ಎಂ) ಭ್ರಷ್ಟಾಚಾರದ ತೀವ್ರ ವಿರೋಧಿ. ತಮ್ಮ ಪಕ್ಷದೊಳಗೆ ಯಾರು ಭ್ರಷ್ಟಾಚಾರದಲ್ಲಿ ತೊಡಗಿದರೂ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಶಿಸ್ತು ಕ್ರಮಗಳನ್ನು ಕೈಗೊಳ್ಳುವ ಪಕ್ಷ. ನೂರಾರು ಜನ ಪಕ್ಷದ ಸದಸ್ಯರನ್ನು ಅವರು ಪಂಚಾಯತ್ ಸದಸ್ಯರಾಗಿರಲಿ, ಮೇಲಿನ ಹಂತದ ಪುರಸಭೆ, ವಿಧಾನಸಭೆ, ಸಂಸತ್ತುಗಳ ಸದಸ್ಯರಾಗಲಿ, ಮತ್ಯಾವುದೇ ಚುನಾಯಿತ ಸದಸ್ಯರಾಗಲಿ ನಿರ್ದಾಕ್ಷಿಣ್ಯವಾಗಿ ಕಿತ್ತು ಬಿಸುಡುವ ಪಕ್ಷ ಸಿಪಿಐ(ಎಂ). ಕೇವಲ ಹಣದ ರೂಪದ ಭ್ರಷ್ಟಚಾರ ಮಾತ್ರವೇ ಅಲ್ಲದೆ ಉಳಿದ ಅನೇಕ ಅನೈತಿಕ ಸಾಮಾಜಿಕ ವರ್ತನೆಗಳನ್ನು ತೀವ್ರವಾಗಿ ಪರಿಗಣಿಸುವ, ನಿರ್ದಾಕ್ಷಿಣ್ಯವಾಗಿ ಹೊರಹಾಕುವ ಪಕ್ಷ ಭಾರತದಲ್ಲಿ ಬೇರೆ ಯಾವುದೂ ಕಾಣುವುದಿಲ್ಲ.

ಹೀಗೆ ತನ್ನೊಳಗೆ ಭ್ರಷ್ಟಾಚಾರದ ವಿರುದ್ಧ ತೀವ್ರವಾಗಿ ಸೆಣಸುವ ಮತ್ತು ಅತೀವ ಎಚ್ಚರಿಕೆಯನ್ನು ವಹಿಸುವ ಪಕ್ಷವಾಗಿ ಸಮಾಜದಲ್ಲಿ ಭ್ರಷ್ಟಾಚಾರದ ವಿರುದ್ಧ ಅದರಲ್ಲಿಯೂ ರಾಜಕಾರಣದ ಉನ್ನತ ಹಂತಗಳಲ್ಲಿರುವವರ ಭ್ರಷ್ಟಾಚಾರದ ವಿರುದ್ಧ ತೀವ್ರವಾಗಿ ಪ್ರತಿರೋಧ ಸಂಘಟಿಸಿದೆ.

ಆದರೂ ಈ ಬಾರಿ ಚುನಾವಣೆಯಲ್ಲಿ ಯಾರ ಭ್ರಷ್ಟಾಚಾರದ ವಿರುದ್ಧ ಹೋರಾಟಗಳನ್ನು ನಡೆಸಲಾಗಿದೆಯೋ ಅಂತಹ ಶಕ್ತಿಗಳು, ಪಕ್ಷಗಳ ಜೊತೆಯಲ್ಲಿಯೇ ಚುನಾವಣಾ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲು ಪ್ರಯತ್ನಿಸಿರುವುದು ಈ ಚುನಾವಣೆಗಳ ವಿಶಿಷ್ಟ ಪ್ರಾಮುಖ್ಯತೆಯನ್ನು ಎತ್ತಿತೋರಿಸುತ್ತದೆ. 99 ರ ಲೋಕ ಸಭಾ ಚುನಾವಣೆಗಳ ಅತ್ಯಂತ ಪ್ರಮುಖ ವಿಷಯ ಭಾರತದ ಸ್ವಾತಂತ್ರ್ಯ ಚಳುವಳಿಯ ಪ್ರಮುಖ ಆಶಯವೊಂದನ್ನು - ಮತೀಯ, ಧಾರ್ಮಿಕ ವಿಚಾರಗಳು ಸಾರ್ವಜನಿಕ ಜೀವನದಲ್ಲಿ ರಾಜಕೀಯ ಆಡಳಿತದಲ್ಲಿ ಪ್ರವೇಶಿಸಬಾರದು, ಭಾರತ ಧರ್ಮನಿರಪೇಕ್ಷವಾಗಿ ಇರಬೇಕು - ಎಂಬುದನ್ನು ಉಳಿಸಿಕೊಳ್ಳವುದು. ಈ ಮಹಾನ್ ಉದ್ದೇಶದ ಹೋರಾಟದಲ್ಲಿ ನೆರವಾಗಬಲ್ಲ ಎಲ್ಲರ ಜೊತೆ ಸೇರಿ ಈ ಹೋರಾಟವನ್ನು ಸಾಧಿಸಬೇಕಾಗಿದೆ. ಆದುದರಿಂದ ಕೋಮುವಾದದ ವಿರುದ್ಧ ಹೋರಾಟವೇ ಇಂದಿನ ಪ್ರಧಾನ ಹೋರಾಟ ಮತ್ತು ಕೋಮುವಾದಿಗಳು ಇಡೀ ದೇಶದಲ್ಲಿ ಹಿಂಸಾಚಾರ, ಅನೈಕ್ಯತೆ ದೇಶವನ್ನೇ ಒಡೆಯುವ ಮತೀಯ ಭೇದಗಳು ಇವುಗಳು ಅನೇಕವನ್ನು ಬೆಳೆಸುತ್ತಾ ದೇಶದ ಜನಗಳ ಪ್ರಧಾನ ವೈರಿಗಳಾಗಿರುವಾಗಲೇ, ಈ ಕೋಮುವಾದದ ಮುಸುಕಿನಲ್ಲಿ ಅತ್ಯಂತ ದೊಡ್ಡ ಭ್ರಷ್ಟಾಚಾರಿಗಳು ಕೂಡ ಆಗಿದ್ದಾರೆ ಎನ್ನುವುದನ್ನು ದೆಹಲಿಯಲ್ಲಿ ಒಂದು ವರ್ಷದ ಆಡಳಿತ ಹಾಗೂ ಅನೇಕ ರಾಜ್ಯಗಳಲ್ಲಿ ಅವರ ಆಡಳಿತ ಹಾಗೂ ಆಡಳಿತಕ್ಕೂ ಮೊದಲಿನ ಅವರ ನಡವಳಿಕೆ ಎತ್ತಿ ತೋರುತ್ತದೆ.

ಸುಖರಾಂ ಎಸಗಿದ ಟೆಲಿಕಾಂ ಹಗರಣ ದಷ್ಟೇ ವ್ಯಾಪಕವಾದ ಹಾಗೂ ಕುಖ್ಯಾತಿಯಾದ ಇತ್ತೀಚಿನ ಟೆಲಿಕಾಂ ಹಗರಣ, ಮೋಹನ್ ಗುರುಸ್ವಾಮಿ ಬಯಲಿಗೆಳೆದ ಉಕ್ಕಿನ ಬೆಲೆ ಹಗರಣ, ಐ.ಟಿ.ಸಿ ಕಂಪನಿಯ ಶೇರುಗಳ ಬೆಲೆ ಹಗರಣ ಹಾಗೂ ವಿಷ್ಣು ಭಾಗವತ್ ಬಯಲಿಗೆಳೆದ ಶಸ್ತ್ರಗಳ ಕೊಳ್ಳುವಿಕೆಯಲ್ಲಿ ಹಗರಣ, ಈ ಮಾತನ್ನು ನಿರೂಪಿಸುತ್ತದೆ. ಇವುಗಳಲ್ಲಿ ಟೆಲಿಕಾಂ ಹಗರಣವನ್ನು ಬಿಜೆಪಿಯವರೇ ಆದ ಮಂತ್ರಿ ಜಗಮೋಹನ್ ಬಯಲಿಗೆಳೆದಿದ್ದಾರೆ ಹಾಗೂ ಮೋಹನ್ ಗುರುಸ್ವಾಮಿಯವರು ಆರ್.ಎಸ್.ಎಸ್. ನ ಕಾರ್ಯಕರ್ತ ಎಂಬುದನ್ನು ಗಮನಿಸಬೇಕು. ಇವುಗಳೆಲ್ಲಾ ಸಾವಿರಾರು ಕೋಟಿ ರೂಗಳ ವ್ಯವಹಾರ ಎಂಬುದನ್ನು ಕೆಲವು ಹಗರಣಗಳು ಬಿಜೆಪಿ ಕೂಟದ ಹದಿಮೂರು ತಿಂಗಳ ಆಡಳಿತ ದಲ್ಲಿ ಹುದುಗಿರವಂತೆ ಕಂಡು ಬರುತ್ತದೆ. ಜಯಲಲಿತ, ಲಲ್ಲೂ ಪ್ರಸಾದ್ ಯಾದವರ ಭ್ರಷ್ಟಾಚಾರದ ಬಗ್ಗೆ ನಿರಂತರವಾಗಿ ಶೋಧನ ವರದಿಗಳನ್ನು ನೀಡುವ ಮತ್ತು ಅವರ ಬಗ್ಗೆ ವೈಯಕ್ತಿಕವಾಗಿ ಕೆಟ್ಟ ಅಭಿಪ್ರಾಯಗಳನ್ನು ಮೂಡಿಸಲು ಹಗಲೂ ರಾತ್ರಿ ಪ್ರಯತ್ನ ಪಡುವ ದೇಶದ ಪತ್ರಿಕೆಗಳು ಬಿಜೆಪಿ ಸರ್ಕಾರದ ಈ ಹಗರಣಗಳನ್ನು ಏಕೆ ಅದೇ ಆ ಶಕ್ತಿಯಿಂದ ಬಯಲಿಗೆಳೆಯುತ್ತಿಲ್ಲ ಎಂಬುದು ಕೂಡ ತಮ್ಮ ಅಭಿಪ್ರಾಯಗಳನ್ನು ಹೇಗೆ ತಮಗೆ ಅಗತ್ಯವಾದಂತೆ ಬಿಜೆಪಿ ಪ್ರಿಯ ಮಾಧ್ಯಮಗಳು ಹಾಗೂ ಪತ್ರಿಕೆಗಳು ರೂಪಿಸುತ್ತವೆ ಎಂಬುದಕ್ಕೆ ಒಂದು ಉದಾರಹಣೆಯಷ್ಟೆ.

ಇವುಗಳ ಜೊತೆಗೆ ಮಧ್ಯಪ್ರದೇಶ, ಉತ್ತರ ಪ್ರದೇಶ, ರಾಜಸ್ತಾನ, ಗುಜರಾತ್, ಮಹಾರಾಷ್ಟ್ರ ಮೊದಲಾದ ಅನೇಕ ರಾಜ್ಯಗಳಲ್ಲಿ ಆಳಿದ ಹಾಗೂ ಆಳುತ್ತಿರುವ ಬಿಜೆಪಿ ಪಕ್ಷದ ನಾಯಕರ ಭ್ರಷ್ಟಾಚಾರವನ್ನು, ಅದ್ವಾನಿ ಮೊದಲಾದ ರಾಷ್ಟ್ರೀಯ ನಾಯಕರುಗಳ ಮೇಲೆ ಅಧಿಕಾರಕ್ಕೆ ಮೊದಲೇ ಬಂದಿದ್ದ ಹವಾಲ ಹಗರಣದ ಆರೋಪವನ್ನು ನೆನಪಿಸಿ ಕೊಳ್ಳೋಣ. ಹಾಗೆಯೇ ವಿಶ್ವ ಹಿಂದೂ ಪರಿಷತ್ ಮೊದಲಾದ ಸಂಘಟನೆಗಳು ರಾಮ ದೇವಾಲಯದ ಹೆಸರಿನಲ್ಲಿ ಸಂಗ್ರಹಿಸಿದ ಹಣ ಎಷ್ಟು? ಎಲ್ಲಿಂದ? ಹೇಗೆ ವೆಚ್ಚವಾಗಿದೆ?" ಎಂಬುದನ್ನು ಸಾರ್ವಜನಿಕರಿಗೆ ತಿಳಿಸಲಾಗಿದೆಯೇ?

ಭ್ರಷ್ಟಾಚಾರವೆಂಬುದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇಡೀ ವ್ಯವಸ್ಥೆಯನ್ನು ತನ್ನ ಅಡಿಯಾಳಾಗಿ ಮಾಡಿಕೊಳ್ಳಲು ಬಂಡವಾಳ ಶಾಹಿ ಬಳಸುವ ವ್ಯಾಪಕ ವಿಧಾನ. ಇದರಲ್ಲಿ ಎಲ್ಲಾ ಬಂಡವಾಳಶಾಹಿ ಪಕ್ಷಗಳು ಸೇರಿದಂತೆ ಆಡಳಿತ ವ್ಯವಸ್ಥೆ, ಉದ್ಯಮಗಳು, ಬ್ಯಾಂಕ್‌ಗಳು, ಪತ್ರಿಕಾ ಮಾಧ್ಯಮಗಳು, ಸಾಂಸತಿಕರಂಗ, ಇವೆಲ್ಲವೂ ಒಳಗೊಂಡಿವೆ.

ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಭ್ರಷ್ಟಾಚಾರದ ವಿರುದ್ಧ ನಿರಂತರವಾಗಿ ಹಲವು ರಂಗಗಳಲ್ಲಿ ಹೋರಾಟ ನಡೆಸುತ್ತದೆ. ಜಯಲಲಿತ ಮತ್ತು ಲಲ್ಲೂಪ್ರಸಾದ್ ಯಾದವ ರೊಂದಿಗೆ ಚುನಾವಣಾ ಹೊಂದಾಣಿಕೆಯನ್ನು ಮಾಡಿಕೊಂಡಾಕ್ಷಣ ಅವರ ಭ್ರಷ್ಟಾಚಾರವನ್ನು ಸಿಪಿಐ(ಎಂ) ಮನ್ನಿಸಿದೆಯೆಂದಾಗಲಿ ಅಥವಾ ಆ ಭ್ರಷ್ಟಾಚಾರದ ವಿರುದ್ಧ ನಾವು ಸೆಣಸುವದಿಲ್ಲವೆಂದಾಗಲಿ ಅರ್ಥವಲ್ಲ. ಈಗಿನ ಕದನ ರಂಗದಲ್ಲಿ ಅದು ನಮ್ಮ ಪ್ರಧಾನ ಗುರಿಯಲ್ಲ ಎಂದಷ್ಟೇ ಅರ್ಥ.

ಚಹಾತೋಟ ಕಾರ್ಮಿಕರ ವಿಜಯ

ಉತ್ತರ ಬಂಗಾಳದ 276 ಚಹಾ ತೋಟಗಳಲ್ಲಿ ದುಡಿಯುತ್ತಿರುವ 3.25 ಲಕ್ಷ ಕಾರ್ಮಿಕರ ಅನಿರ್ದಿಷ್ಟ ಮುಷ್ಕರ ಹತ್ತು ದಿನಗಳ ನಂತರ ಜುಲೈ 21 ರಂದು ಕೊನೆಗೊಂಡಿತು. ಚಹಾ ತೋಟ ಕಾರ್ಮಿಕರಿಗೆ ಇದೊಂದು ಪ್ರಮುಖ ವಿಜಯ. ತಾತ್ಕಾಲಿಕ ಕಾರ್ಮಿಕರನ್ನು ಖಾಯಂಗೊಳಿಸಬೇಕೆಂಬ ಅವರ ಪ್ರಮುಖ ಬೇಡಿಕೆಯನ್ನು ಚಹಾ ತೋಟ ಮಾಲಿಕರು ಒಪ್ಪಿಕೊಂಡಿ ದ್ದಾರೆ. ಇದರಿಂದ ಸುಮಾರು 10 ಸಾವಿರ ತಾತ್ಕಾಲಿಕ ಕಾರ್ಮಿಕರಿಗೆ ಪ್ರಯೋಜನವಾಗಲಿದೆ. ಮುಖ್ಯ ಮಂತ್ರಿ ಜ್ಯೋತಿಬಸುರವರ ಮಧ್ಯಪ್ರವೇಶ ದಿಂದ ಈ ಒಪ್ಪಂದಕ್ಕೆ ಬರಲಾಯಿತು. ಈ ತ್ರಿಪಕ್ಷೀಯ ಸಭೆಯ ಶಿಫಾರಸುಗಳನ್ನೆಲ್ಲಾ ಒಂದು ನಿರ್ದಿಷ್ಟ ಸಮಯ ಚೌಕಟ್ಟಿನಲ್ಲಿ ಜಾರಿಗೆ ತರಬೇಕು ಎಂದೂ ಅವರು ಒತ್ತಾಯಿಸಿದರು. ಇದು ಈ ಒಪ್ಪಂದದ ಒಂದು ಮುಖ್ಯ ಅಂಶ. ಈ ಹಿಂದೆ ನಾಲ್ಕು ತ್ರಿಪಕ್ಷೀಯ ಸಭೆಗಳು ವಿಫಲವಾದ ಹಿನ್ನೆಲೆಯಲ್ಲಿ ಈ ಅನಿರ್ದಿಷ್ಟ ಕಾಲದ ಮುಷ್ಕರ ನಡೆಯಿತು.

ತಾತ್ಕಾಲಿಕ ಕಾರ್ಮಿಕರನ್ನು ಖಾಯಂಗೊಳಿಸುವುದಲ್ಲದೆ ಈ ಒಪ್ಪಂದದ ಇನ್ನೊಂದು ಪ್ರಮುಖ ಅಂಶವೆಂದರೆ ಉತ್ತರ ಬಂಗಾಳದ ಚಹಾತೋಟಗಳಲ್ಲಿ ಉದ್ಯೋಗ ನೀತಿಯನ್ನು ಪರಿಶೀಲಿಸಲು ಒಂದು ತಜ್ಞರ ಸಮಿತಿಯ ನೇಮಕ. ಆರು ತಿಂಗಳೊಳಗೆ ಈ ಸಮಿತಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸುತ್ತದೆ. ರಾಜ್ಯ ಸರಕಾರವೂ ರಾಜ್ಯದಲ್ಲಿ ಚಹಾ ತೋಟ ಉದ್ದಿಮೆಯ ಸಮಸ್ಯೆಗಳು ಹಾಗೂ ಸಾಧ್ಯತೆಗಳ ಬಗ್ಗೆ ಪರಿಶೀಲಿಸಲು ಒಂದು ಪ್ರತ್ಯೇಕ ಸಮಿತಿ ನೇಮಿಸಲಿದೆ.

ಚಹಾತೋಟ ಕಾರ್ಮಿಕರಿಗಾಗಿ ಹಲವು ಚಹಾ ತೋಟಗಳಿಗೆ ಒಂದರಂತೆ ಗುಂಪು ಆಸ್ಪತ್ರೆಗಳನ್ನು ರಚಿಸಲೂ ಶಿಫಾರಸು ಮಾಡಲಾಯಿತು. ಇದಕ್ಕಾಗಿ ಒಂದು ವೈದ್ಯಕೀಯ ಸಲಹಾ ಸಮಿತಿ ನೇಮಿಸಲಾಗು ವುದು. ಪ್ರತಿ ಚಹಾ ತೋಟದಲ್ಲೂ ಕುಡಿಯುವ ನೀರು, ವಿದ್ಯುತ್ ಪೂರೈಕೆ ವ್ಯವಸ್ಥೆ ಮಾಡಲಾಗುವದು. ಒಂದು ವಸತಿ ಸಲಹಾ ಸಮಿತಿ ನೇಮಿಸಲಾಗುವದು. ಕಾರ್ಮಿಕರಿಗೆ ಬಡ್ತಿ, ದಿನಗೂಲಿಯ ಬದಲು ತಿಂಗಳ ಸಂಬಳ, ಮಕ್ಕಳಿಗೆ ಸಬ್ಸಿಡಿ ದರಗಳಲ್ಲಿ ರೇಷನ್ ಇವ ಈ ತ್ರಿಪಕ್ಷೀಯ ಸಭೆ ಕೈಗೊಂಡ ಇತರ ಪ್ರಮುಖ ನಿರ್ಣಯಗಳು.

ಚಹಾ ತೋಟ ಕಾರ್ಮಿಕರು ಉತ್ತರ ಬಂಗಾಲದಲ್ಲಿ ಉಪ ಉದ್ದಿಮೆಗಳನ್ನು ನಿರ್ಮಿಸಬೇಕು ಎಂಬುದು ಕಾರ್ಮಿಕ ಪ್ರತಿನಿಧಿ ಗಳು ಸಭೆಯಲ್ಲಿ ಮಾಡಿದ ಇನ್ನೊಂದು ಒತ್ತಾಯ. ಮುಖ್ಯಮಂತ್ರಿ ಜ್ಯೋತಿಬಸು ರವರು ಕೂಡಾ ಚಹಾ ತೋಟಗಳು ಉತ್ತರ ಬಂಗಾಲದ ಅಭಿವೃದ್ಧಿಗೆ ಏನೂ ಮಾಡಿಲ್ಲ, ಈಗಲಾದರೂ ಮಾಡಿ ಎಂದು ಬಿನ್ನವಿಸಿದರು. ಚಹಾ ತೋಟ ಮಾಲಕರು ತಾತ್ವಿಕವಾಗಿ ಇದನ್ನು ಒಪ್ಪಿಕೊಂಡರು.

ದೇಶಾದ್ಯಂತ ಕೈಗಾರಿಕಾ ಅನಿಶ್ಚಿತತೆಯ ಹಿನ್ನೆಲೆಯಲ್ಲಿ ಲಕ್ಷಾಂತರ ಕಾರ್ಮಿಕರನ್ನು ಯಾವುದೇ ಮುಲಾಜಿಲ್ಲದೆ ಬೀದಿಗೆಸೆ ಯುತ್ತಿರುವ ಪರಿಸ್ಥಿತಿಯಿರುವ ಹಿನ್ನೆಲೆಯಲ್ಲಿ ಚಹಾ ತೋಟದ ಕಾರ್ಮಿಕರು ಮಾಲಿಕರ ಒಲ್ಲದ ಕೈಗಳಿಂದ ಈ ಒಪ್ಪಂದವನ್ನು ಗಳಿಸಿರುವುದು ಸಾಮಾನ್ಯ ಸಂಗತಿಯೇನಲ್ಲ. ಆದರೆ ಚಹಾ ತೋಟ ಕಾರ್ಮಿಕ ಸಮಸ್ಯೆಗಳ ಪರಿಹಾರದ ಹೋರಾಟ ಇಲ್ಲಿಗೆ ನಿಲ್ಲುವದಿಲ್ಲ. ಇನ್ನೂ 50 ಸಾವಿರಕ್ಕೂ ಹೆಚ್ಚು ತಾತ್ಕಾಲಿಕ ಕೆಲಸಗಾರರು ಬದುಕಿನ ಬವಣೆ ನೀಗಿಸಬೇಕಾಗಿದೆ.

"ಗೂಡು ಸಿಕ್ಕದಲ್ಲಾ, ಗೂಡಿನ ಜಾಡು ಸಿಕ್ಕದಲ್ಲಾ"

"ಹಂಗಿನರಮನೆಗಿಂತ ವಿಂಗಡದ ಗುಡಿ ಲೇಸು" ಎಂದು ಪುರಾಣ ಹೇಳಿದ ಮನುಷ್ಯ ತನ್ನ ಮನೆಯನ್ನು ಬಿಟ್ಟು, ಬಿಟ್ಟು ಅಲ್ಲ ಮುರಿದು ಅದೇ ಹಂಗಿನರಮನೆಗಾಗಿ ಹಾತೊರೆದು ತನ್ನ ಜೊತೆಯಲ್ಲಿದ್ದ, ತಮ್ಮ ಗೂಡನ್ನು ಬಿಡಲು ಒಲ್ಲದ ಹಕ್ಕಿಗಳನ್ನು ಬಲವಂತದಿಂದ ಎಳೆದು ಕೊಂಡು ಹಾರಿದ್ದನ್ನು ನೋಡಿದ್ದೇವೆ. ಈಗ ಹಕ್ಕಿಗಳು ಎಲ್ಲಿವೆ? ಗೂಡು ಬಿಡುವವರೆಗೂ ಅರಮನೆಯ ಅಂದಚಂದಗಳನ್ನು ಅಲ್ಲಿನ ಮೃಷ್ಟಾನ್ನ ಭೋಜನವನ್ನು ವರ್ಣಿಸಿ ಬಾಯಲ್ಲಿ ಜೊಲ್ಲು ಸೋರುವಂತೆ ಮಾಡಲು ಪ್ರೇರೇಪಿಸಿದ ಜನರೇ ಜಾರ್ಜ್ ಹಾಗೂ ಹೆಗ್ಗಡೆಯವರೆ ಈಗ ಪರದಾಡುವ ಸ್ಥಿತಿ ಬಂದಿದೆ. ಇವರ ಈ ಕೆಲಸಕ್ಕೆ ಕುಮ್ಮಕ್ಕು ಕೊಟ್ಟಾತ ಮೂಲವಿಗ್ರಹವಾಗಿ ದೆಹಲಿಯಲ್ಲಿ ಕುಳಿತಾತ ವಾಜಪೇಯಿ ಎಂಬ ಮಹಾನುಭಾವ ಮಾಡುವುದೆಲ್ಲಾ ಮಾಡಿ ಕೋತಿಯ ಮೂತಿಗೆ ಒರೆಸಿ ಈಗ ತನಗೇನು ಗೊತ್ತಿಲ್ಲದಂತೆ ನಾಟಕವಾಡುತ್ತಿದ್ದಾನೆ. ಪಟೇಲರ ಬಣದ ಪಕ್ಷಿಗಳು ಇಂದು "ಗೂಡು ಸಿಕ್ಕದಲ್ಲಾ ಗೂಡಿನ ಜಾಡು ಸಿಕ್ಕದಲ್ಲಾ" ಕೊರಗುತ್ತಿದ್ದಾರೆ.

ಈ ಹಕ್ಕಿಗಳು ರೆಕ್ಕೆ ಬಡಿಯುತ್ತಾ ಪರದಾಡುತ್ತಾ ದೆಹಲಿಯ ಕಡೆ ನೋಡುತ್ತಾ 31 ರಂದು ನಮಗೆ ಆಶ್ರಯಸಿಗಬಹುದು, ನಮ್ಮ ಅಂತರ್ ಪಿಶಾಚಿ ಅವಸ್ಥೆ ಅಂದು ಮುಗಿಯಬಹುದು ಎಂದು ಅವರ ಜೊತೆಯಲ್ಲಿ ಕರ್ನಾಟಕದ ರಾಜಕಾರಣಿಗಳು, ಸಾಮಾನ್ಯ ಜನವೂ ಅವಹೇಳನ ಮಾಡುತ್ತಾ ನೋಡುತ್ತಿದ್ದರು. ಅವರೆಲ್ಲಾ ಇನ್ನೂ ಕಾಯಬೇಕಾಗಿದೆ. ಎಲ್ಲರ ಗಮನವನ್ನೂ ಸೆಳೆದಿದ್ದ ಈ ಸಭೆಯ ನಂತರ ಈ ಸಭೆಯಲ್ಲಿ ಜನತಾದಳವನ್ನು ಬಿಜೆಪಿ ಕೂಟಕ್ಕೇ ಸೇರಿಸಿಕೊಳ್ಳವ ವಿಷಯ ವೇ ಬರಲಿಲ್ಲವೆಂದು ಹೇಳಲಾಗಿದೆ. ಕರ್ನಾಟದ ಬಿಜೆಪಿ ನ್ಯಾಯಕರಾದ ಅನಂತಕುಮಾರ್ ಹಾಗೂ ಯಡಿಯೂರಪ್ಪನವರೂ ಈಸಭೆಯ ನಂತರವೂ ಜನತಾದಳದೊಂದಿಗೆಯಾವ ಮೈತ್ರಿಯೂ ಇಲ್ಲ ಆದರೆ ಬಿಜೆಪಿ-ಲೋಕಶಕ್ತಿಯ ಮೈತ್ರಿ ಮುಂದುವರೆಯಲಿದೆ ಎಂದು ಸಾರಿದರು.

ಆದರೆ ಈ ಸಭೆಯ ಮೊದಲು ಎರಡು ಮೂರುದಿನ ಭಾಜಪ-ಲೋಕಶಕ್ತಿ ಸಮತಾ ನಾಯಕರ ಹಾಗೂ ಬಿಜೆಪಿಯರ ರಾಷ್ಟ್ರೀಯ ನಾಯಕರ ಹಲವು ಸಭೆಗಳು ನಡೆದವು. ಹಾಗಾದರೆ ಈ ಗುಪ್ತ ಸಭೆಗಳಲ್ಲಿ ಚರ್ಚಿಸಿದ್ದೇನು? ಜನತಾದಳದವರು ಲೋಕಶಕ್ತಿಗೆ ಸೇರಿ ಲೋಕ ಶಕ್ತಿಯ ಚಿನ್ಹೆಯ ಮೇಲೆ ಸ್ಪರ್ಧೆ ಮಾಡಿದರೆ ಬಿಜೆಪಿಯನ್ನು ಹಾಗೂ ಮುಂದಿನ ಮುಖ್ಯಮಂತ್ರಿಯಾನ್ನಾಗಿ ಯಡಿಯೂರಪ್ಪನನ್ನು ಒಪ್ಪಿಕೊಳ್ಳಬೇಕು ಎಂದು ಒಪ್ಪಂದವಾಗಿರುವಂತೆ ಕಂಡು ಬರುತ್ತಿದೆ. ಆದರೆ ಅದನ್ನು ಈಗಲೇ ಘೋಷಿಸಿದರೆ ಜೆ.ಎಚ್.ಪಟೇಲ್ ಜೊತೆಗಿರುವ ಜನಕ್ಕೆ ತಮಗಾಗಲಿರುವ ವಂಚನೆ ತಿಳಿದು ಹೋಗುತ್ತದೆ. ಆಗ ಮತ್ತೆ ಈ ಹಕ್ಕಿಗಳು ಮರಳಿ ಮನೆಗೆ ಹಾರಲು ಪ್ರಯಾತ್ನಿಸಿಯಾವು. ಅಥವಾ ಚಿಲ್ಲಾಪಿಲ್ಲಿಯಾಗಿ ಚೆದುರಿ ಹೋಗಿಯಾವು ಎಂದೇ ಬಿಜೆಪಿ-ಲೋಕಶಕ್ತಿಯ ನಡುವೆ ಲೋಕಸಭಾ, ವಿಧಾನಸಭಾಸ್ಥಾನ ಹಂಚಿಕೆ ಹೇಗೆ ಆಗಿದೆ ಅದರ ವಿವರಗಳೂ ಇನ್ನೂ ಮುಂದಕ್ಕೆ ಬರಬೇಕಾಗಿದೆ. ಆಗಲೇ ಅಳಿಯನ ಕುರುಡು ಹೊರಬೀಳುವುದು.

ಈ ಮಧ್ಯೆ ಬಿಜೆಪಿಯ ಜನರಿಂದ ನಿರಾಕರಿಲ್ಪಟ್ಟವರು, ನೆಲೆಯಿಲ್ಲದವರು ಎಂಬ ನಿರಂತರ ಅವಹೇಳನದ ಮುಂದೆ ಈಗ ಜೆ.ಎಚ್. ಪಟೇಲರು ತಮ್ಮ ಜನಬೆಂಬಲವನ್ನೂ ಸಾಬೀತು ಮಾಡಬೇಕಾದ ಸ್ಥಿತಿ ಬಂದಿದೆ. ಅದರ ಫಲವಾಗಿ ಆಗಸ್ಟ್ 7 ರಂದು ಬೆಂಗಳೂರಿನಲ್ಲಿ ಒಂದು ಬಹಿರಂಗ ಸಭೆಯನ್ನು ನಡೆಸುವ ತೀರ್ಮಾನವನ್ನು ಕೈಗೊಳ್ಳಬೇಕಾಗಿ ಬಂದಿದೆ. ಈ ಸಭೆಯಲ್ಲಿ ಬಿಜೆಪಿ ಕೂಟದೊಳಗೆ ತಮಗಿರುವ ಬೆಂಬಲವನ್ನೂ ಪ್ರದರ್ಶಿಸಲೆಂಬತೆ ತಮ್ಮಂತೆಯ ಜಾತ್ಯಾತೀತತೆಯ ಬೆನ್ನಿಗೆ ಇರಿದವರಿಗೆ ಆಹ್ವಾನ ನೀಡಿದ್ದಾರೆ. ಸಮತಾ-ಲೋಕಶಕ್ತಿ, ಜೆ.ಎಚ್.ಪಟೇಲ್ ಬಣದ ನಾಯಕರ ಜೊತೆಯಲ್ಲಿ ತೆಲುಗು ದೇಶದ ನಾಯ್ಡು, ಡಿಎಂಕೆಯ ಕರುಣಾ ನಿಧಿ ಅದರಲ್ಲಿ ಸೇರಿದ್ದಾರೆ.

'ಚಕ್ರದ' ಮಹತ್ವ

'ಚಕ್ರ' ಗುರುತು ಪಡೆಯಲು ಇಂದು ದೊಡ್ಡ ಮೇಲಾಟ ನಡೆದಿದೆ. ದೇವೇಗೌಡರ ಹಾಗೂ ಜೆ.ಎಚ್. ಪಟೇಲರ ಬಣದಲ್ಲಿ- ಚಕ್ರ ಗುರುತು ಯಾರಿಗೆ ಸಿಗುತ್ತದೆಯೋ ಅವರೇ ನಮ್ಮವರು. ಅವರು ಬಿಜೆಪಿಯ ಬುಡದಲ್ಲಿ ಹೊಕ್ಕರೂ ಪರಾವಾಗಿಲ್ಲ ಎಂದು ಹಲವರು ಕಾಯುತ್ತಿದ್ದಾರೆ. ಇಂದು ಇವರನ್ನು ನಿರ್ದೇಶಿಸುವುದು ತತ್ವಗಳು, ಸಿದ್ಧಾಂತಗಳು ಧೋರಣೆಗಳು ಯಾವುದೂ ಅಲ್ಲ. ಜಾತ್ಯಾತೀತ-ಕೋಮುವಾದ ಈ ಯಾವ ಚರ್ಚೆಗೂ ಮಹತ್ವವಿಲ್ಲ. ಕೇವಲ ಚಕ್ರದ ಗುರುತು ಮಾತ್ರ ಮುಖ್ಯ.

ಈ ಚಕ್ರದ ಗುರುತು ಪಡೆಯಲೆಂದೇ ಸಮತಾ, ಲೋಕಶಕ್ತಿಗಳು ಜನತಾದಳದೊಂದಿಗೆ ವಿಲೀನ ಹೊಂದುವ ನಾಟಕವಾಡಿದವು. ಆ ಪಕ್ಷಗಳು ತಮ್ಮ ಪಕ್ಷಗಳ ಚಿನ್ಹೆಗಳನ್ನು - ತಮ್ಮನ್ನು ಎಂ.ಪಿ.ಗಳನ್ನಾಗಿ ಎಂ.ಎಲ್.ಎ.ಗಳನ್ನಾಗಿ(ಸಮತಾ ಪಕ್ಷಕ್ಕೆ ಸಂಬಂಧಿಸಿ) ಮಾಡಿದ ಗುರುತುಗಳನ್ನು ಕಿತ್ತೆಸೆಯಲು ಸಿದ್ಧ. 'ಚಕ್ರ' ಸಿಗುವುದಾದರೆ ಅದೇ ರೀತಿ 'ಚಕ್ರ' ದ ಬಗ್ಗೆ ಭಯವೂ ಇಲ್ಲದೆ- ಬಿಜೆಪಿಗೆ ನಮ್ಮ ಜೊತೆ ಮೈತ್ರಿ ಬೇಕಾದರೆ 'ಚಕ್ರ' ಬಿಟ್ಟು ಬನ್ನಿ. ಈ ಬಾರಿಯ ಮತ ಚೀಟಿಯಲ್ಲಿ 'ಚಕ್ರ' ವಿಲ್ಲದಂತೆ ಆಗುತ್ತದೆ. ಚುನಾವಣಾ ಕಮಿಷನ್ ಈ ಚಿಹ್ನೆಯನ್ನು ಅಮಾನತ್ತಿನಲ್ಲಿಡಬಹುದು ಎಂಬ ಭಯಕ್ಕೆ ಬಿಜೆಪಿಗೆ ಆಗ ಮಾತ್ರ ಕಮಲ ಇನ್ನಷ್ಟು ಅರಳಿತು ಎಂದು ಅವರ ಲೆಕ್ಕಾಚಾರ. ಅದೇ ಬಯಕೆ ಈ ಕಡೆ ಒಳಗೊಳಗೇ ಕಾಂಗ್ರೆಸಿಗೂ ಇದೆ. ಹೀಗಿದೆ 'ಚಕ್ರ'ದ ಮಹತ್ವ

'ಚಕ್ರ'ದ ಬಗ್ಗೆ ಈ ಎಲ್ಲಾ ಸೆಣಸಾಟ, ನಾಟಕಗಳ ಅರ್ಥವೇನು?

ಚಕ್ರ ಕಾಂಗ್ರೇಸ್ ಪಕ್ಷದ ದುರಾಡಳಿತದ ಬಗೆಗಿನ ಜನರ ಅತೃಪ್ತಿಯ ಸಂಕೇತ. ಹಾಗೆಯೇ ಕಾಂಗ್ರೇಸ್ ಸೋಲಿಸಲೆಂದು ದಾರಿಯಲ್ಲಿ ಹೊಗುವ ಬಿಜೆಪಿ ಎಂಬ ಮಾರಿಯನ್ನು ಮನೆಗೆ ಕರೆಯದಿರುವ ಜನರ ಎಚ್ಚರದ ಗುರುತು ಕೂಡ. ಚಕ್ರವನ್ನು ಹೊತ್ತವನು ಇವೆರಡು ನಂಬಿಕೆಗೂ ದ್ರೋಹ ಮಾಡಿದ್ದರೂ ಕೂಡ ಜನಕ್ಕೆ ಅದನ್ನು ಗುರುತಿಸಲಾಗುವುದಿಲ್ಲ, ಕಣ್ಣು ಮುಚ್ಚಿ ಬಾವಿಗೆ ಬೀಳುತ್ತಾರೆ ಎಂದು ಕೆಲವರ ಲೆಕ್ಕಚಾರ. ಆದರೆ ಜನರಿಗೂ ಬುದ್ಧಿಯಿದೆ ಈಗಾಲೇ ಹತ್ತಿಪ್ಪತ್ತು ಚುನಾವಣೆಗಳನ್ನು ಕಂಡ ಜನಕ್ಕೆ ಎಚ್ಚರವಿದೆ ಎಂಬುದನ್ನು ಇವರು ಮರೆಯುತ್ತಾರೆ. ಜನರನ್ನು ಮುರ್ಖರನ್ನಾಗಿಸಲು ಬಯಸುವವರು ತಾವೇ ಮೂರ್ಖರಾಗುತ್ತಾರೆ. ಇದು ಇತಿಹಾಸದ ಪಾಠ. ಈ ಪಾಠ ಮತ್ತೊಮ್ಮೆ ಜೆ.ಎಚ್.ಪಟೇಲರ ಬಣದವರಿಗೆ ಆಗಲಿದೆ.



ಕಾರ್ಗಿಲ್ ಮತ್ತು ಕೋಮುವಾದಿಗಳು

'ಐದು ದೀರ್ಘ ದಶಕಗಳ ನಂತರ ಕೊನೆಗೂ ಭಾರತೀಯ ಮುಸಲ್ಮಾನರು ದೇಶವಿಭಜನೆಯ ನೆರಳಿನಿಂದ ಹೊರಬಂದಿದ್ದಾರೆ. ಹಿಂದೂಗಳು ಈ ಹೊಸ ವಾಸ್ತವತೆಯನ್ನು ಕಾಣಲಾರಂಭಿಸಿದ್ದಾರೆ. ಆದ್ದರಿಂದ ಯಾವುದೇ ಕೋಮು ಸಂದೇಹ ಕಾಣಬರುತ್ತಿಲ್ಲ...... ಈ ಸಂತೋಷಕರ ಬದಲಾವಣೆ ಒಂದು ಬಿಜೆಪಿ ನೇತೃತ್ವದ ಸಮಿಶ್ರ ಸರಕಾರದ ಆಡಳಿತದಲ್ಲಿ ಸಂಭವಿಸುತ್ತಿದೆ ಎಂಬುದೊಂದು ಗಮನಾರ್ಹ ಸಂಗತಿ. ಅಟಲ ಬಿಹಾರಿ ವಾಜಪೇಯಿಯವರ ಅಲ್ಪಕಾಲದ ಆಳ್ವಿಕೆಯಲ್ಲಿ ಭಾರತ ಕೋಮುಗಲಭೆಗಳಿಂದ, ದಂಗೆಗಳಿಂದ ಮುಕ್ತವಾಗಿರುವುದು ನಿಜಕ್ಕೂ ಗಮನಾರ್ಹ'' - ಇದು ಜುಲೈ 26 ರ 'ಔಟ್‌ಲುಕ್' ಪತ್ರಿಕೆಯಲ್ಲಿ ಪ್ರಧಾನಿಗಳ ಸಲಹೆಗಾರ ಬಳಗದ ಪತ್ರಕರ್ತ ಸುಧೀಂದ್ರ ಕುಲಕರ್ಣಿಯವರ ಉದ್ಗಾರ.

ಓದುಗರು ಈ ಅಣಿಮುತ್ತುಗಳನ್ನು ಓದುವ ವೇಳೆಗೆ ಎಲ್ಲಾ ಪತ್ರಿಕೆಗಳಲ್ಲಿ ಬಿಜೆಪಿ ಆಳ್ವಿಕೆಯ ಅಹಮದಾಬಾದಿನಲ್ಲಿ ಕಾರ್ಗಿಲ್ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಏಳು ಜನರ ಬಲಿ ತೆಗೆದುಕೊಂಡ ಕೋಮುಗಲಭೆಗಳ ದಾರುಣ ಸುದ್ದಿಯನ್ನು ಓದಬೇಕಾಗಿ ಬಂತು. ಇದು ಕೇವಲ ಆಕಸ್ಮಿಕವೇ- ಅಲ್ಲ ಸುಧೀಂದ್ರ ಕುಲಕರ್ಣಿ, ಅಂತಹ ಹಲವಾರು ಕಾವಿ ಭಟ್ಟಂಗಿ ಪತ್ರಕರ್ತರ 'ವಿಶ್ಲೇಷಣೆ'ಗಳಲ್ಲಿನ ಪೊಳ್ಳನ್ನು, ಮೋಸವನ್ನು ಬಯಲು ಮಾಡುವ ಮತ್ತೊಂದು ಘಟನೆ.

'ಯಾವುದೇ ಕೋಮು ಸಂದೇಹ ಕಾಣುತ್ತಿಲ್ಲ' ಎಂಬ ಮಾತು ಮೇಲ್ನೋಟಕ್ಕೆ ಅರ್ಥಹೀನ ಎಂಬುದು ದಿಲೀಪ್ ಕುಮಾರರ ಮೇಲೆ ಬಿಜೆಪಿ ಆಳ್ವಿಕೆಯ ಮಹಾರಾಷ್ಟ್ರದಲ್ಲಿ ಶಿವಸೇನೆಯ ಧಾಳಿಗಳಿಂದಲೇ ಸ್ಪಷ್ಟ. ಈ ಬಗ್ಗೆ ನೀವು ಈಗಾಗಲೇ 'ಐಕ್ಯರಂಗ'ದಲ್ಲಿ ಓದಿರುವಿರಿ. ಇಂತಹ ಇನ್ನೂ ಎರಡು ಘಟನೆಗಳನ್ನು ನೋಡಿ.

ಇನ್ನೊಂದು ಬಿಜೆಪಿ ಆಳ್ವಿಕೆಯ ರಾಜ್ಯ ಉತ್ತರ ಪ್ರದೇಶದಲ್ಲಿ ಬಿಜೆಪಿಯ ವಿದ್ಯಾರ್ಥಿ ವಿಭಾಗ ಎ.ಬಿ.ವಿ.ಪಿ. ಕಾರ್ಗಿಲ್ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪ್ರಖ್ಯಾತ ಇಸ್ಲಾಮೀ ವಿದ್ವಾಂಸರಾದ ಮೌಲಾನಾ ಅಬುಲ್ ಹಸನ್ ನದ್ವಿಯವರ ವಿರುದ್ಧ ಇದೇ ರೀತಿಯ ಅಪಪ್ರಚಾರ ನಡೆಸುತ್ತಿದೆ. ಕಾರ್ಗಿಲ್‌ನ ನಮ್ಮ ಹುತಾತ್ಮರಿಗಾಗಿ ಅವರು ನಮಾಜ್ ಮಾಡಲು ನಿರಾಕರಿಸಿದರು, ಏಕೆಂದರೆ ಅವರೆಲ್ಲಾ ಇಸ್ಲಾಮಿ ಮುಜಾಹಿದಿನ್‌ಗಳ ವಿರುದ್ಧ ಹೋರಾಡಿದರು ಎಂಬ ಅದರ ಅಪಾದನೆಯನ್ನು ಮೌಲಾನಾರವರು ನಿರಾಕರಿಸಿ ಸ್ಪಷ್ಟನೆ ನೀಡಿದರೂ ಈ ಅಪಪ್ರಚಾರ ಮುಂದುವರಿಯುತ್ತಿದೆ. ಈ ಮೊದಲು ಇವರು ಪಾಕಿಸ್ತಾನೀ ಏಜೆಂಟರಿಗೆ ಆಶ್ರಯ ನೀಡಿದ್ದಾರೆ ಎಂದು ಸಂದೇಹಿಸಿ ಕತ್ತಲಲ್ಲಿ ಅವರ ಮನೆಯ ಮೇಲೆ ಪೋಲೀಸ್ ಧಾಳಿ ಕೂಡಾ ನಡೆದಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. 'ಅಲಿ ಮಿಯಾಂ' ಎಂದೇ ಪ್ರಖ್ಯಾತರಾಗಿರುವ ಈತ ಅಂತರ್‍ರಾಷ್ಟ್ರೀಯ ಖ್ಯಾತಿಯ ಇಸ್ಲಾಮಿ ವಿದ್ವಾಂಸರಷ್ಟೇ ಅಲ್ಲ, ರಾಷ್ಟ್ರೀಯವಾದವನ್ನು ಕುರಿತಂತೆ ಯಾರೂ ಸವಾಲು ಹಾಕಲಾಗದ ವ್ಯಕ್ತಿತ್ವ ಅವರದ್ದು. ಭಾರತದ ವಿಭಜನೆಯನ್ನು ಖಡಾಖಂಡಿತವಾಗಿ ವಿರೋಧಿಸಿದ್ದ ಉಲೇಮಾದ ಒಂದು ಪಂಥಕ್ಕೆ ಸೇರಿದವರು. ಅವರ ದೇಶಪ್ರೇಮವನ್ನು ಸಂದೇಹಿಸಲು ಕಾರಣವೇ ಇಲ್ಲ. ಆದರೂ ಸಂಘ ಪರಿವಾರ ಅವರ ಬೆಂಬತ್ತಿದೆ. ಸುಧೀಂದ್ರ ಕುಲಕರ್ಣಿಯಂತವರಿಗೆ ಸಹಜವಾಗಿಯೇ ಇದು ಕಾಣುತ್ತಿಲ್ಲ.

ಅಹ್ಮದಾಬಾದಿನಲ್ಲಿ ಸಂಘ ಪರಿವಾರದವರು ಮುಸ್ಲಿಂ ಪ್ರದೇಶಗಳಲ್ಲಿ ಪಾಕಿಸ್ತಾನದ ಪ್ರಧಾನಿ ನವಾಜ್‌ಶರೀಫ್ ಭೂತದಹನ ಮಾಡಿ ಹಾಕಿದ್ದು ಪಾಕಿಸ್ತಾನಿ-ವಿರೋಧಿ ಘೋಷಣೆಗಳನ್ನಲ್ಲ ಮುಸ್ಲಿಂ-ವಿರೋಧಿ ಘೋಷಣೆಗಳನ್ನು. ಈ ಹಿನ್ನೆಲೆಯಲ್ಲಿ ನಡೆದ ಕೋಮುಗಲಭೆಗಳು ಈಗಾಗಲೇ ಏಳು ಜನರನ್ನು ಬಲಿತೆಗೆದುಕೊಂಡಿದೆ. ಅಹಮದಾಬಾದಿ ನಲ್ಲಿ ಕರ್ಫ್ಯೂ ಹೇರುವಂತಾಗಿದೆ. ಪಾಕಿಸ್ತಾನದ ಕಾರ್ಗಿಲ್ ದುಸ್ಸಾಹಸ ಈ ಶರೀಫರ, ಐ.ಎಸ್.ಐ.ನ ಗಮನಕ್ಕೆ ಬಾರದೇ ನಡೆದಿದೆಯೆಂದು ಹೇಳುವವರು ವಾಜಪೇಯಿಯವರ ಅತ್ಯಂತ ಪ್ರೀತಿಪಾತ್ರ ಮಂತ್ರಿ ಜಾರ್ಜ್ ಫರ್ನಾಂಡೀಸ್‌ರೇ ಅಲ್ಲವೇ? ಹಾಗಿದ್ದರೆ ಶರೀಫರ ಭೂತದಹನವೇಕೆ, ಅದರಲ್ಲೂ ಮುಸ್ಲಿಂ ವಿರೋಧಿ ಘೋಷಣೆಗಳೇಕೆ? ಸುಧೀಂದ್ರ ಕುಲಕರ್ಣಿಯಂತವರಿಗೆ ಇಂತಹ ಪ್ರಶ್ನೆಗಳನ್ನು ಕೇಳುವುದೇ ಬಹುಶಃ ಹುಂಬತನ.


(ಪುಟ 6-7 ನ್ನೂ ನೋಡಿ)

ಕಾರ್ಗಿಲ್‌ನಲ್ಲಿ

ನಿರ್ಲಕ್ಷ್ಯ ಮಾಡಿರುವ ಕಾರಣಕೆ ನೀವು
ವೀರಯೋಧರಿಗಾಯ್ತು ಸಾವುನೋವು
ಅಧಿಕಾರ ಉಳಿಸುವುದು
ಪ್ರಾಮುಖ್ಯವಾಗಿ
ನೋಡಲೇ ಆಗಿಲ್ಲ ಆ ಕಡೆಗೆ ಹೋಗಿ

- ವಿಡಂಬಾರಿ

ಮೊಟ್ಟಮೊದಲಬಾರಿಗೆ ವಿಧಾನಸಭೆಗೆ ಆರಿಸಿ ಹೋದ ಜ್ಯೋತಿ ಬಸುರವರು ಅಲ್ಲಿ ಮಾಡಿದ ಮೊಟ್ಟಮೊದಲ ಭಾಷಣ, ರಾಜಕೀಯ ಕೈದಿಗಳ ಬಿಡುಗಡೆಯ ಪ್ರಶ್ನೆಯನ್ನು ಬಲವಾಗಿ ಎತ್ತಿದ್ದು ಬ್ರಿಟಿಷ್ ಪೊಲೀಸರ ದಮನದ ಪ್ರತೀಕವಾಗಿ ಅವರು ಹರಿದ ಬಟ್ಟೆಯಲ್ಲೇ ವಿಧಾನಸಭೆ ಪ್ರವೇಶಿಸಿದ ಘಟನೆಗಳನ್ನು ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ಮುಂದೆ...



ಕಾಂಗ್ರೆಸ್ ಲೀಗ್‌ಗಳನ್ನು ತಲ್ಲಣಗೊಳಿಸಿದ ಭಾಷಣ

ಆ ಕಾಲದ ಇನ್ನೊಂದು ಮಹತ್ವದ ಚರ್ಚೆಯನ್ನು ಗಮನಿಸುವುದು ಮುಖ್ಯ. ಮುಸ್ಲಿಂ ಲೀಗ್ ಸದಸ್ಯ ತಫಾಝುಲ್ ಅಲಿ ಜುಲೈ 26 ರಂದು ರಾಜ್ಯಪಾಲರಿಗೆ ಕೋರಿಕೆ ಸಲ್ಲಿಸುವ ಗೊತ್ತುವಳಿಯೊಂದನ್ನು ಮಂಡಿಸಿದರು. ಅಸ್ಸಾಂ ಸರಕಾರದಿಂದ ತೆರವುಗೊಳಿಸಲಾಗುವ ಭೀತಿಗೆ ಒಳಗಾಗಿದ್ದ ಅಸ್ಸಾಂ ಕಣಿವೆಯ ಅನೇಕ ಬಂಗಾಳಿ ಕುಟುಂಬಗಳ ಪ್ರಕರಣವನ್ನು ರಾಜ್ಯಪಾಲರು ಕೈಗೆತ್ತಿಕೊಳ್ಳಬೇಕು ಎಂದು ಅಲಿ ಮನವಿ ಮಾಡಿದ್ದರು. ಗವರ್ನರ್ ಜನರಲ್‌ಗೆ ಪರಿಸ್ಥಿತಿಯನ್ನು ವಿವರಿಸಬೇಕು ಹಾಗೂ ಬಂಗಾಳ ವಿಧಾನಸಭೆಯ ಭಾವನೆಯನ್ನು ಅವರಿಗೆ ತಿಳಿಸಬೇಕು ಎಂದೂ ತಫಾಝುಲ್ ಅಲಿ ಕೋರಿದ್ದರು. ಆಗ ಅಸ್ಸಾಂನಲ್ಲಿ ಕಾಂಗ್ರೆಸ್ ಸರಕಾರ, ಬಂಗಾಳದಲ್ಲಿ ಮುಸ್ಲಿಂ ಲೀಗ್ ಸರಕಾರವಿತ್ತು. ವಿಶೇಷವಾಗಿ ಪೂರ್ವ ಬಂಗಾಳದ ಮೈಮೆನ್‌ಸಿಂಗ್‌ನ ಅನೇಕ ಬಡರೈತರು ಅಸ್ಸಾಂ ಕಣಿವೆಯಲ್ಲಿ ನೆಲೆಸಿದ್ದರು. ಹಸಿವು ಅವರನ್ನು ಅಸ್ಸಾಂಗೆ ಅಟ್ಟಿತ್ತು. ಹಿಂದಿನ ಅಸ್ಸಾಂ ಸರಕಾರ ಅವರಿಗೆ ಪೌರತ್ವದ ಆಶ್ವಾಸನೆ ಕೊಟ್ಟಿತ್ತು. ಆದರೆ ಕಾಂಗ್ರೆಸ್ ಸರಕಾರ ಈ ಜನರನ್ನು ಓಡಿಸಲು ಯೋಜಿತ ಸಂಚು ರೂಪಿಸಿದೆ ಎಂಬುದು ಅಲಿ ಅವರ ವಾದವಾಗಿತ್ತು.

ಅದನ್ನು ಕಾಂಗ್ರೆಸ್ ಸದಸ್ಯರು ಬಲವಾಗಿ ವಿರೋಧಿಸಿದರು. ನಾವು ಕೂಡಾ ಆ ಗೊತ್ತುವಳಿಯನ್ನು ವಿರೋಧಿಸಿದೆವು. ಆದರೆ ನಮ್ಮ ಕಾರಣ ಬೇರೆಯೇ ಆಗಿತ್ತು. ಜೆ.ಸಿ.ಗುಪ್ತ ಮತ್ತು ನಿಹಾರೇಂದು ದತ್ತ ಮಜುಂದಾರ್ ಮೊದಲಾದ ನಾಯಕರು ಔಚಿತ್ಯದ ಪ್ರಶ್ನೆಯನ್ನೆತ್ತಿ ಇಂಥ ಗೊತ್ತುವಳಿಯನ್ನು ಅಸೆಂಬ್ಲಿ ಅಂಗೀಕರಿಸಬಾರದು ಎಂದು ಹೇಳಿದರು. ತಮ್ಮ ವಾದಕ್ಕೆ ರಾಜಕೀಯ ಸಮರ್ಥನೆ ಕೊಡಲು ಅವರಿಗೆ ಸಾಧ್ಯವಾಗಲಿಲ್ಲ. ಬಹುಶಃ ಅಸ್ಸಾಂನಲ್ಲಿ ಕಾಂಗ್ರೆಸ್ ಸರಕಾರವಿರುವುದರಿಂದ ಮತ್ತು ಬಂಗಾಳದಲ್ಲಿ ಜನ ಬೆಂಬಲವನ್ನು ಕಳೆದುಕೊಳ್ಳುವ ಭೀತಿಯಿಂದಾಗಿ ಅವರಿಗೆ ರಾಜಕೀಯ ಚರ್ಚೆ ಆಗುವುದು ಬೇಕಿರಲಿಲ್ಲ.

ಸ್ಪೀಕರ್ ಚರ್ಚೆಗೆ ಅನುಮತಿ ನೀಡಿದರು. ತಫಾಝುಲ್ ಅಲಿ ಭಾಷಣದಲ್ಲಿ ಕೋಮುವಾದದ ಲೇಪವಿತ್ತು. ಬಂಗಾಲಿಗಳಿಗೆ ಅವರದ್ದೇ ಒಂದು ನೆಲೆ ಬೇಕು ಎಂದು ಅವರು ಹೇಳಿದರು. ಈ ವಾದ ಹಿಟ್ಲರ್ ಸಿದ್ಧಾಂತವನ್ನು ಪ್ರತಿನಿಧಿಸುತ್ತದೆ ಎಂದು ನಾನು ಅದನ್ನು ತಿರಸ್ಕರಿಸಿದೆ.

ವಿವಾದದ ಸಾರ ಸರಳವಾಗಿತ್ತು. ಬಂಗಾಳದಲ್ಲಿ ಸಾಕಷ್ಟು ಅವಕಾಶವಿಲ್ಲ ಎಂಬ ವಾದ ಮುಂದೊಡ್ಡಿ ಬಡರೈತರನ್ನು ಅಸ್ಸಾಂನಲ್ಲಿ ಮತ್ತೆ ನೆಲೆಗೊಳಿಸಲು ಮುಸ್ಲಿಂ ಲೀಗ್ ಪ್ರಯಾಸ ಪಡುತ್ತಿತ್ತು. ಇನ್ನೊಂದೆಡೆ ಅವರನ್ನು ಹೊರದೂಡಲು ಅಸ್ಸಾಂ ಸರಕಾರ ಪ್ರಯತ್ನಿಸುತ್ತಿತ್ತು.

ಈ ವಿಷಯದ ಬಗ್ಗೆ ನಾವು ಪಕ್ಷದ ನಾಯಕರ ಜತೆ ಚರ್ಚಿಸಿ ಅದರ ಪ್ರಕಾರವೇ ಸದನದಲ್ಲಿ ಮಾತನಾಡಿದೆವು. ಯಾಕೆ ಬಂಗಾಲಿಗಳು ಅವರ ಮನೆಬಿಟ್ಟು ಹೋಗುವಂತೆ ಮಾಡಲಾಗುತ್ತಿದೆ ಮತ್ತು ಈ ರೈತರನ್ನು ಒಂದು ಸಾಮಾಜಿಕ ಗುಂಪು ಎಂದು ಗುರುತಿಸಲಾಗಿದೆಯೇ ಎಂಬುದು ನನ್ನ ಮೊದಲ ಪ್ರಶ್ನೆಯಾಗಿತ್ತು. ಅವರೆಲ್ಲರೂ ಭೂರಹಿತ ರೈತರಾಗಿದ್ದರು. ಆಹಾರ ಮತ್ತು ವಸತಿಯ ಕೊರತೆಯಿಂದಾಗಿ ಅವರು ದೇಶದ ಬೇರೆ ಭಾಗಗಳಿಗೆ ವಲಸೆ ಹೋಗಿದ್ದರು. ಬಂಗಾಳದಲ್ಲೇ ಅವರಿಗೆ ಸೌಕರ್ಯ ಕಲ್ಪಿಸಲು ಆಗದಿರುವುದು ನಾಚಿಕೆಗೇಡಿನ ಸಂಗತಿ. ಲಾರ್ಡ್ ಕಾರ್ನ್‌ವಾಲಿಸ್ ರೂಪಿಸಿದ ಜಮೀನ್ದಾರಿ ವ್ಯವಸ್ಥೆ ಈ ರೈತರ ಜೀವನದೊಂದಿಗೆ ಚೆಲ್ಲಾಟವಾಡುತ್ತಿದೆ. ದುರದೃಷ್ಟವಶಾತ್ ಈ ವ್ಯವಸ್ಥೆ ಈಗಲೂ ಅಸ್ತಿತ್ವದಲ್ಲಿದೆ. ಈ ವಿಷಯದ ಬಗ್ಗೆ ಗಂಭೀರ ಆತ್ಮಾವಲೋಕನ ಅಗತ್ಯ ಎಂದು ನಾನು ಪ್ರತಿಪಾದಿಸಿದೆ. ಒಂದು ಭಿನ್ನವಾದ ಧೋರಣೆ ತಳೆಯುವುದು ಅಗತ್ಯ ಎಂದೆ. ಯಾರ ಅನುಮತಿಯೊಂದಿಗೆ ಈ ವ್ಯವಸ್ಥೆ ಮುಂದುವರಿಯುತ್ತಿದೆಯೋ ಆ ಸರಕಾರ ಮತ್ತು ಗವರ್ನರ್ ಜನರಲ್‌ಗೆ ಮನವಿ ಮಾಡುವುದರಲ್ಲಿ ಏನೂ ಅರ್ಥವಿಲ್ಲ ಎಂದು ನಾನು ಹೇಳಿದೆ. ಇದು ನಾಚಿಕೆಗೇಡು.

ಆಜಾದ್ ಮತ್ತು ಅವರ 'ಮಾರ್ನಿಂಗ್ ನ್ಯೂಸ್' ಪತ್ರಿಕೆ ಅಸ್ಸಾಂನಲ್ಲಿ ಕಾಂಗ್ರೆಸ್ ಮತ್ತು ಹಿಂದೂಗಳ ವಿರುದ್ಧ ಪ್ರಚಾರ ನಡೆಸುತ್ತಿದೆ. ಅಸ್ಸಾಂನ ಇನ್ನೂ ಕೆಲವು ಪ್ರಕಟಣೆಗಳು ಅಸ್ಸಾಮಿಗಳ ನಡುವೆಯೇ ವೈರತ್ವವನ್ನು ಹಬ್ಬಿಸುತ್ತಿದೆ. ಈ ಎರಡೂ ಅಭಿಪ್ರಾಯಗಳು ಹಾಗೂ ಪ್ರಚಾರವನ್ನು ನಾವು ಪೂರ್ಣವಾಗಿ ವಿರೋಧಿಸುತ್ತೇವೆ ಎಂದು ನಾನು ಹೇಳಿದೆ. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಸದಸ್ಯರು ನನ್ನನ್ನು ತಡೆಯಲು ಯತ್ನಿಸಿದರು. ನನ್ನ ಭಾಷಣದಿಂದ ಎರಡೂ ಕಡೆಯವರಿಗೆ ಮರ್ಮಾಘಾತವಾಗಿತ್ತು ಎನ್ನುವುದು ಸ್ಪಷ್ಟ. ಇನ್ನೂ ಸಾಕಷ್ಟು ಕಾಲಾವಕಾಶವಿದೆ ನಾವೆಲ್ಲರೂ ಒಟ್ಟಾಗಿ ಸಮಿತಿಯೊಂದನ್ನು ರಚಿಸಿಕೊಂಡು ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸಬೇಕು ಎಂದು ನಾನು ಸಲಹೆ ಮಾಡಿದೆ. ವೈಸರಾಯ್ ಇದ್ದಲ್ಲಿಗೆ ಹೋಗುವುದರಿಂದ ಏನೂ ಪ್ರಯೋಜನವಿಲ್ಲ. ಗೊತ್ತುವಳಿಯನ್ನು ವಾಪಸು ಪಡೆದು ಹಿಂದೂ-ಮುಸ್ಲಿಂ ಏಕತೆಯತ್ತ ಗಮನ ಕೇಂದ್ರೀಕರಿಸುವುದು ಅಗತ್ಯವಿತ್ತು. ನಾನು ಭಾಷಣ ಪೂರ್ಣಗೊಳಿಸದಂತೆ ನಿಹಾರೇಂದು ದತ್ತ ಮಜುಂದಾರ್ ಪ್ರಯತ್ನಿಸಿದರು. ಕಮ್ಯುನಿಸ್ಟ್ ಗುಂಪಿನ ಮೂವರೂ ಗೊತ್ತುವಳಿಯನ್ನು ವಿರೋಧಿಸುತ್ತೇವೆ ಎಂದು ನಾನು ಘೋಷಿಸಿದೆ. ಕಾಂಗ್ರೆಸ್ ಸದಸ್ಯರು ಕೂಡ ಗೊತ್ತುವಳಿಗೆ ವಿರುದ್ಧವಾಗಿ ಮತ ಚಲಾಯಿಸಿದರು. ಆದರೆ ಗೊತ್ತುವಳಿ ಅಂಗೀಕಾರವಾಯಿತೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ.

(ಮುಂದುವರಿಯುವುದು)

ಹಣೆಯ ಬರಹವೋ ಹೋರಾಟವೋ?

ದೊಡ್ಡಬಳ್ಳಾಪುರದ ಒಂದು ಮಹಿಳಾ ಸಮ್ಮೇಳನ

ವರದಿ - ಪ್ರಭಾ ಎನ್.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಮಹಿಳೆಯರು ಜುಲೈ 13 ರಂದು 'ರೇಷ್ಮೆ ಪಟ್ಟಣ'ವೆಂದೇ ಕರೆಯಲ್ಪಡುತ್ತಿರುವ ದೊಡ್ಡಬಳ್ಳಾಪುರ ದಲ್ಲಿ ಸಮಾವೇಶಗೊಂಡಿದ್ದರು. ಸಣ್ಣ- ಪುಟ್ಟ ಕುಗ್ರಾಮಗಳಿಂದ ಹಿಡಿದು ಪಟ್ಟಣದ ತನಕ ವಿವಿಧ ಕ್ಷೇತ್ರಗಳ ಇನ್ನೂರಕ್ಕೂ ಹೆಚ್ಚು ಮಹಿಳೆಯರು ಸಮ್ಮೇಳನದಲ್ಲಿ ಪಾಲ್ಗೊಂಡು ತಮ್ಮ ದುಃಖ ದುಮ್ಮಾನ, ನೋವು- ನಲಿವು ಕಷ್ಟ-ನಷ್ಟಗಳನ್ನು ಹಂಚಿಕೊಂಡರು.

ರಾಜ್ಯದ ರಾಜಧಾನಿಗೆ ಹೊಂದಿಕೊಂಡಂತಿರುವ ಈ ತಾಲ್ಲೂಕು ಅತ್ತ ಹಳ್ಳಿಯೂ ಅಲ್ಲದ ಇತ್ತ ಪಟ್ಟಣವೂ ಅಲ್ಲದ ಅರೆ ಸಂಸ್ಕೃತಿಯ ಬೀಡು. ಪಟ್ಟಣದ ನಾಗರೀಕತೆಯ ಛಾಯೆ ಹಳ್ಳಿಗಳ ಮೇಲೆ ಹರಡುತ್ತಿದ್ದು ಅದನ್ನು ನಿಗ್ರಹಿಸಲಾರದ ಅಶಕ್ತ ಗ್ರಾಮಗಳು ಸ್ವಂತಿಕೆಯನ್ನು ಉಳಿಸಿಕೊಳ್ಳಲಾರದೆ ಹೊಸದನ್ನು ಪಡೆಯಲಾಗದೆ ಅರೆಬೆಂದ ಅಡುಗೆಯಂತಾಗಿವೆ.

ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗಿರುವ ತಾಲ್ಲೂಕು ಕೇಂದ್ರದಲ್ಲಿ ಹಾಗೂ ಕೈಗಾರಿಕಾ ಪ್ರದೇಶದ ಸುತ್ತ- ಮುತ್ತಲ ಹಳ್ಳಿಗಳಲ್ಲಿಯೇ ಮೂಲಭೂತ ಸೌಕರ್ಯವಾದ ಶೌಚಾಲಯಗಳ ಕೊರತೆ ತೀವ್ರವಾಗಿದೆಯೆಂದರೆ ಇಡೀ ತಾಲ್ಲೂಕಿನ ಹಳ್ಳಿಗಳ ಪರಿಸ್ಥಿತಿ ಹೇಗಿರಬಹುದು ನೀವೇ ಯೋಚಿಸಿ!

ಪಟ್ಟಣದ ಪ್ರಮುಖ ರಸ್ತೆಗಳ ಅಕ್ಕ-ಪಕ್ಕದಲ್ಲಿಯೇ ನೈಸರ್ಗಿಕ ಶೌಚಾಲಯಗಳ ನಿರ್ಮಾಣವಾಗಿ ಸಾರ್ವಜನಿಕರು ಮೂಗು ಮುಚ್ಚಿಕೊಂಡೇ ಓಡಾಡಬೇಕಾದ ಸನ್ನಿವೇಶ ಸೃಷ್ಟಿಯಾಗಿದೆ. ಸಾಂಕ್ರಾಮಿಕ ರೋಗಗಳು ವೇಗವಾಗಿ ಹಬ್ಬಲು ಬೇಕಾದಂತಹ ಪೂರಕ ಪರಿಸರವನ್ನು ನಗರ ಸಭೆ ನಿರ್ಮಾಣಮಾಡಿದೆ. ನಗರ ಪ್ರದೇಶಗಳಲ್ಲಿ ಶೌಚಾಲಯಗಳಿಲ್ಲದೆ ಅಪಾರ ಕಷ್ಟಕ್ಕೊಳಗಾಗಿರುವ ಮಹಿಳೆಯರ ಮನವಿಯನ್ನು ಕೇಳುವವರ್‍ಯಾರು? ಯಾರನ್ನು ಕೇಳಿದರೂ ಪ್ರಯೋಜನವಿಲ್ಲವೆಂಬುದು ಮಹಿಳೆಯರ ಅಭಿಪ್ರಾಯ.

ಸೀಮೆ ಎಣ್ಣೆ ಬೇಕೆ?
ಹಾಗಿದ್ದರೆ ಏಳಿ ರಾತ್ರಿ ಎರಡು ಗಂಟೆಗೆ

ಮನುಷ್ಯನೆನಿಸಿಕೊಂಡವ ಸಹಿಸಲಾರದಂಥ ಅವ್ಯವಸ್ಥೆ ಸೀಮೆ ಎಣ್ಣೆ ವಿತರಣೆಯಲ್ಲಿದೆ. ಈ ತಾಲ್ಲೂಕಿನಲ್ಲಿ ನಾಳೆ ಬೆಳಿಗ್ಗೆ ಸೀಮೆ ಎಣ್ಣೆ ವಿತರಣೆ ಎಂದು ತಿಳಿಯಿತೆಂದರೆ ಇಂದಿನ ರಾತ್ರಿಯಿಂದಲೇ ಸಜ್ಜಾಗಬೇಕು ಎಣ್ಣೆ ಕಾಣಲು.

ರಾತ್ರಿ ಎರಡು ಗಂಟೆಗೆ ಎದ್ದು ಸೀಮೆ ಎಣ್ಣೆ ವಿತರಿಸುವ ಜಾಗದಿಂದ ಸಾಲಾಗಿ ಡಬ್ಬಗಳನ್ನು ಜೋಡಿಸುವ ಕೆಲಸ ಪ್ರಾರಂಭವಾಗುತ್ತದೆ. ಮೊದಲಿಗೆ ಹಳೆಯದಾದ ಅಥವಾ ತೂತಾದ ಡಬ್ಬಗಳನ್ನು ಪೇರಿಸುವುದು. ಗಂಟೆ ಬಿಟ್ಟು ಸ್ವಲ್ಪ ದೊಡ್ಡದಾದ ಗಾತ್ರದ ಡಬ್ಬಗಳನ್ನಿಡುವುದು ಬೆಳಗಿನ ಜಾವಕ್ಕೆ ಮಕ್ಕಳನ್ನೆಬ್ಬಿಸಿ ಸೀಮೆ ಎಣ್ಣೆ ತರುವ ಡಬ್ಬಗಳನ್ನು ಕೊಟ್ಟು ಕಳಿಸಿ ಕ್ಯೂನಲ್ಲಿ ನಿಲ್ಲಿಸುವುದು. ನಂತರ ಸೀಮೆ ಎಣ್ಣೆ ಬಂತೆಂದರೆ ದೊಡ್ಡವರು ನಾ ಮುಂದೆ ತಾ ಮುಂದೆ ಎಂದು ಹೊಡೆದಾಡಿ ಸೀಮೆ ಎಣ್ಣೆ ತರುವುದು ಬದುಕಿನ ಭಾಗವಾಗಿಯೇ ಹೋಗಿದೆ. ಎಲ್ಲಾ ಕಾರ್ಡುದಾರರಿಗೂ ಸೀಮೆಎಣ್ಣೆ ನಿಯಮಿತವಾಗಿ ಹಂಚಿಕೆಯಾಗಬೇಕೆಂದು ಈ ಹಿಂದೆ ಹಲವು ಬಾರಿ ಡಿ.ವೈ.ಎಫ್.ಐ ಹೋರಾಟ ನಡೆಸಿ ಕೆಲವು ಕಡೆ ಯಶಸ್ವಿಯಾಗಿದ್ದರೂ ಪರಿಸ್ಥಿತಿ ಸಂಪೂರ್ಣ ಸುಧಾರಿಸಬೇಕಾದರೆ ದೊಡ್ಡ ಹೋರಾಟಗಳು ನಡೆಯಬೇಕು. ಹತ್ತು ಲೀಟರ್ ಎಣ್ಣೆ ಅಳೆದರೆ ಡಬ್ಬಕ್ಕೆ ಬೀಳುವುದು ಎಂಟೇ ಲೀಟ್ರು. ಅಪ್ಪಿ-ತಪ್ಪಿ ಯಾರಾದರೂ ಯಾಕಪ್ಪಾ? ಎಂದರೆ ಬ್ಯಾರಲ್ಲೇ ಮೈ ಮೇಲೆ ಸುರಿಯುವಂತೆ ಮಾಲೀಕನ ಆರ್ಭಟ. ಸೀಮೆ ಎಣ್ಣೆ ಖರೀದಿಸುವ ಈ ದೃಶ್ಯ ನೆನಪಿಸಿಕೊಂಡರೆ ಏನಪ್ಪ ಈ ಬಾಳು ಎನಿಸುತ್ತದೆ.

ಬೋರ್ಡುಗಳನ್ನಷ್ಟೇ ಪ್ರದರ್ಶಿಸುವ ರೇಷನ್ ಅಂಗಡಿಗಳು

ನಮ್ಮ ರೇಷನ್ ಕಥೆಯಂತೂ ಕೇಳುವ ಹಾಗೆ ಇಲ್ಲ. ರೇಷನ್ ಕಡಿತ ಒಂದು ಕಡೆಯಾದರೆ ಕಳಪೆ ಗುಣಮಟ್ಟ ಮತ್ತೊಂದು ಕಡೆ. ಗೊಬ್ಬರದಂಥ ಅಕ್ಕಿ, ಗೋಧಿ- ರೇಷನ್ ತುಂಬಾ ಹುಳುಗಳು. ತಿನ್ನಲು ಯೋಗ್ಯವಲ್ಲದ ಇಂತಹ ಕಳಪೆ ಆಹಾರವನ್ನು ಸರಬರಾಜು ಮಾಡುವುದಾದರು ಯಾಕೆಂದು ಬಳಕೆದಾರರ ಪ್ರಶ್ನೆ.

ಸರ್ಕಾರಿ ನ್ಯಾಯಬೆಲೆ ಅಂಗಡಿ ಎಂದು ಫಲಕ ಹೊತ್ತರೆ ಸಾಕೆ 'ಹೊಟ್ಟೆ ತುಂಬುವಷ್ಟು ರೇಷನ್' ಬೇಡವೆ ಎಂಬುದು ಬಡಬಗ್ಗರ ಅಳಲು. ಐದು ಕೆ.ಜಿ ಅಕ್ಕಿ, ಎರಡು ಕೆ.ಜಿ ಗೋಧಿ, ಒಂದೂವರೆ ಕೆ.ಜಿ. ಸಕ್ಕರೆಯನ್ನು ಶ್ರಾದ್ಧದ ದಿನ ದಾನ ಕೊಡುವಂತೆ ಕೊಟ್ಟರೆ ಮನೆ ಮಂದಿಯ ಹೊಟ್ಟೆ ತುಂಬೀತೆ? ಇದು ಅರೆಹೊಟ್ಟೆ ತುಂಬಿಸುವ ತಾಯಂದಿರ ಚಿಂತೆ.

ಸ್ವತಂತ್ರ ದೇಶಕ್ಕೆ ಐವತ್ತು ತುಂಬಿದರೇನಂತೆ? ಕುಡಿಯುವ ನೀರಿನ ಕೊಡ ತುಂಬಲಿಲ್ಲವಲ್ಲಾ!

> ಪ್ರಥಮ ಬಾರಿಗೆ ಸಂಘಟಿಸಲಾಗಿದ್ದ ದೊಡ್ಡಬಳ್ಳಾಪುರ ತಾಲ್ಲೂಕು ಮಹಿಳಾ ಸಮ್ಮೇಳನದಲ್ಲಿ ಮಹಿಳೆಯ ಸಮಸ್ಯೆ ಮಹಿಳೆಯರದ್ದು ಮಾತ್ರವಲ್ಲ ಸಾಮಾಜಿಕ ಸಮಸ್ಯೆಯೆಂಬ ಅರಿವು ಮೂಡಿಸುವ ಪ್ರಾಮಾಣಿಕ ಪ್ರಯತ್ನವನ್ನು ಸಮ್ಮೇಳನ ಮಾಡಿತು.

ಇಂದಿಗೂ ಕುಡಿಯುವ ನೀರಿಗೆ ಪರಿತಪಿಸುವ ನೂರಾರು ಹಳ್ಳಿಗಳು ತಾಲ್ಲೂಕಿನಲ್ಲಿವೆ. ಬಹಳ ದೂರದಿಂದ ಕುಡಿಯುವ ನೀರನ್ನು ಸಾಗಿಸುವ ಮಹಿಳೆಯರಿಗೆ ಸಂಭ್ರಮದ ಸುವರ್ಣ ಸ್ವಾತಂತ್ರ್ಯ ತಂಪನ್ನೀಯಲಿಲ್ಲ, ದಾಹವನ್ನಾರಿಸಲಿಲ್ಲ. ಇಂದಿಗೂ ಈ ಮಹಿಳೆಯರ ರಾಗ "ಯಾವ ರಾಜ ಬಂದ್ರ ಏನು ರಾಗಿ ಬೀಸಾದು ತಪ್ತದಾ?" ಎಂದೆ. ಕುಡಿಯುವ ನೀರಿನ ವ್ಯವಸ್ಥೆಯಾದರೂ ನಮ್ಮ ಮಹಿಳೆಯರಿಗೆ ಸಮರ್ಪಕವಾಗಿ ಬೇಡವೆ?

ಕುಡಿಯುವ ನೀರಿಲ್ಲದೆ ಇಪ್ಪತ್ತೊಂದರ ಜೆಟ್ ಯುಗಕ್ಕೆ ಹಾರುವುದೇ - ಇದೆಂಥಾ ವಿಪರ್ಯಾಸ. ನೀರಿಗಾಗಿ ಬವಣೆ ಪಡುವ ಮಹಿಳೆಯರ ಶಾಪ ಕೇಳಲಾರದೆ ಹಾರಬೇಕಷ್ಟೆ ಜೆಟ್‌ಗೆ.

ಮನೆಗೆಬಂದ ಗಂಟೆಯಲ್ಲಿಯೇ ಪ್ರಾಣ ಬಿಟ್ಟ ಮಹಿಳೆ

ಕಳೆದ ವಾರ ಮಹಿಳೆಯೊಬ್ಬಳು ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಗೆ ಹೆರಿಗೆಗಾಗಿ ಸೇರಿದಳು. ಆಕೆಯನ್ನು ಪರೀಕ್ಷಿಸಿದ ವೈದ್ಯರು ಹೆರಿಗೆ ಕಷ್ಟಕರವಾಗಿದೆ ಆಪರೇಷನ್ ಮಾಡಬೇಕೆಂದರು. ಪರೀಕ್ಷೆ ನಡೆಸಿದ ಪುರುಷ ವೈದ್ಯರನ್ನು ಆಕೆ ಕೇಳಿದಳು ಆಪರೇಷನ್ ಮಾಡುವವರು ಯಾರು? ಕೂಡಲೆ ವೈದ್ಯರು ನಾನೇ ಎಂದರು. ನೋವಿನಿಂದ ನರಳುತ್ತಿದ್ದ ಆ ಮಹಿಳೆ ಮಹಿಳಾ ವೈದ್ಯರಿಲ್ಲವೆ? ಎಂದಳು ಆಸ್ಪತ್ರೆಯಲ್ಲಿ 24 ಗಂಟೆಗಳ ಸೇವೆ ಸಲ್ಲಿಸಲು ಮಹಿಳಾ ವೈದ್ಯರಿಲ್ಲ ಎನ್ನುವ ಉತ್ತರ ಅವರಿಂದ ಬಂತು. ಹೆರಿಗೆಗೆಂದು ದವಾಖಾನೆಗೆ ಹೋದ ಆಕೆ ಇದರಿಂದ ಮುಜುಗರಗೊಂಡು ಪುರುಷ ವೈದ್ಯರಿಂದ ಚಿಕಿತ್ಸೆ ಪಡೆಯುವುದಿಲ್ಲವೆಂದು ಯಾರಿಗೂ ಸಿಗದೆ ಓಡಿ ಮನೆಗೆ ಬಂದಳು. ಮನೆಗೆ ಬಂದ ಒಂದೇ ಗಂಟೆಯಲ್ಲಿ ಪ್ರಾಣ ಬಿಟ್ಟಳು.

ಅಂತಹ ಜೀವದ ನೋವಿನಲ್ಲಿ ಪುರುಷ ವೈದ್ಯರೆಂಬ ಭಾವನೆ ತನ್ನ ಜೀವದ ಹಂಗನ್ನೂ ಆಕೆಯಲ್ಲಿ ಮರೆಸಿದ್ದರೆ ಅವಳನ್ನು ದೂರಿ ಪ್ರಯೋಜನವಿಲ್ಲ. ಸಮಾಜ ಮಹಿಳೆಯರನ್ನು ಬೆಳೆಸುವುದೇ ಹಾಗೆ.

ಇದು ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ಕಥೆ. ಮಹಿಳಾ ವೈದ್ಯರಿಲ್ಲದೆ ವೈದ್ಯಕೀಯ ಸೌಲಭ್ಯಗಳಿಲ್ಲದೆ ಈ ರೀತಿ ಪ್ರಾಣ ಬಿಟ್ಟ, ಪ್ರಾಣ ಬಿಡುವ ಜೀವಗಳನ್ನು ಲೆಕ್ಕ ಹಾಕುವವರು ಯಾರು?

ಹೋಬಳಿ ಮಟ್ಟಕ್ಕೊಂದು ಪ್ರಾಥಮಿಕ ಆರೋಗ್ಯ ಘಟಕಗಳಿವೆ, ರೋಗಿಗಳಿಲ್ಲ. ಹೆಸರಿಗಷ್ಟೇ ವೈದ್ಯರಿದ್ದರೆ ಔಷಧಿಯಿಲ್ಲ, ಔಷಧಿ

ಪುಟ 8 ನೋಡಿ

ಸಂಕುಚಿತ ಚುನಾವಣಾ ಲಾಭಕ್ಕೆ ಕಾರ್ಗಿಲ್ ಬಳಕೆ

ಬಿಜೆಪಿಯ ಈ ಆಟ ಸಾಗದು

- ಸುರ್ಜಿತ್



ಕೇಂದ್ರದಲ್ಲಿರುವ ಬಿಜೆಪಿ ನೇತೃತ್ವದ ಕೂಟ ಇತ್ತೀಚಿನ ಕಾರ್ಗಿಲ್ ಘರ್ಷಣೆಯನ್ನು ಸಂಕುಚಿತ ಚುನಾವಣಾ ಉದ್ದೇಶಗಳಿಗೆ ಬಳಸಲು ಪ್ರಯತ್ನಿಸುತ್ತಿದ್ದರೂ ಅವರಿಗೆ ಈ ಆಟದಲ್ಲಿ ಯಶಸ್ಸಿ ಸಿಗದು. ಏಕೆಂದರೆ ನಮ್ಮ ಸಶಸ್ತ್ರ ಪಡೆಗಳು ತೋರಿದ ಅತ್ಯುನ್ನತ ಶೌರ್ಯ-ಸಾಹಸ, ದೃಢತೆ ಹಾಗೂ ಅಪಾರ ತ್ಯಾಗ ಬಲಿದಾನಗಳಿಂದಾಗಿ ಪಾಕಿಸ್ತಾನದ ಪಿತೂರಿ ವಿಫಲಗೊಂಡರೂ, ಈ ವಿಷಯದಲ್ಲಿ ಬಿಜೆಪಿ ನೇತೃತ್ವದ ಸರಕಾರ ಮುಗ್ಗರಿಸಿದೆ, ವಿಪರೀತ ನಿರ್ಲಕ್ಷ್ಯ ತೋರಿದೆ ಎಂಬುದು ಕೂಡಾ ಅಷ್ಟೇ ನಿಜ. ಹೀಗೆಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ. ಅವರು ಸಿಪಿಐ(ಎಂ) ಕೇಂದ್ರ ಸಮಿತಿಯ ಎರಡು ದಿನಗಳ ಸಭೆಯ ನಂತರ ಪಕ್ಷದ ಕಚೇರಿಯಲ್ಲಿ ಪತ್ರಿಕಾಸಮ್ಮೇಳನವೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ವಾಜಪೇಯಿ ಸರಕಾರ ಹೀಗೆ ಮುಗ್ಗರಿಸಲು ಕಾರಣ ಮೊದಲು ಪೋಖ್ರಾನ್II ಸ್ಫೋಟ ಹಾಗೂ ನಂತರ ಲಾಹೋರ್ ಬಸ್ ಪ್ರಯಾಣ - ಇವರೆಡು ತಮ್ಮ ಮಹಾಸಾಧನೆಗಳು ಎಂಬ ಗುಂಗಿನಲ್ಲಿ ಅದು ತೋರಿದ ನಿರ್ಲಕ್ಷ್ಯ. ಇದರಿಂದಾಗಿ ದೇಶ ಬಹುಮೂಲ್ಯ ಜೀವಗಳನ್ನು, ಸಂಪನ್ಮೂಲಗಳನ್ನು ಕಳಕೊಳ್ಳುವಂತಾಯಿತು ಎಂದರು.

ಈ ಪ್ರಕರಣದ ಬಗ್ಗೆ ತನಿಖೆಯೆಂಬುದನ್ನು ನೇಮಿಸಿರುವುದು ಕೇವಲ ಕಣ್ಣೊರೆಸುವ ತಂತ್ರ, ತನ್ನ ಶೋಚನೀಯ ಸೋಲಿನಿಂದ ಜನಗಳ ಗಮನವನ್ನು ಬೇರೆಡೆಗೆ ಸೆಳೆಯುವ ಪ್ರಯತ್ನ ಎಂದು ಸುರ್ಜಿತ್ ಕಟುವಾಗಿ ಟೀಕಿಸಿದರು. ಕಾಶ್ಮೀರ ಪ್ರಶ್ನೆಯನ್ನು ಭಾರತ-ಪಾಕಿಸ್ತಾನಗಳ ನಡುವಿನ ಪ್ರಶ್ನೆಯಾಗಿರಲು ಬಿಡದೆ ಅದನ್ನು ಅಂತರ್‍ರಾಷ್ಟ್ರೀಯ ಪ್ರಶ್ನೆಯಾಗಿಸಲು ಸದಾ ಪ್ರಯತ್ನಿಸುತ್ತಿದ್ದ ಅಮೆರಿಕಾದ ಒತ್ತಡಕ್ಕೆ ತಲೆಬಾಗಿದ ಗಂಭೀರ ತಪ್ಪನ್ನು ಈ ಸರಕಾರ ಎಸಗಿದೆ. ದೇಶದ ಭದ್ರತೆಗೆ ಹಾಗೂ ಪ್ರಾದೇಶಿಕ ಸಮಗ್ರತೆಗೆ ಒಂದು ದೊಡ್ಡ ಬೆದರಿಕೆ ಬಂದಾಗಲೂ ರಾಜ್ಯಸಭೆಯ ಅಧಿವೇಶನವನ್ನು ಕರೆದು ಜನಗಳ ಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತಗೊಳ್ಳುವ ಬಗ್ಗೆ ಯೋಚಿಸಲೂ ಹೋಗದ ಸರಕಾರ ಇದು ಎಂದು ಸುರ್ಜಿತ್ ಬಲವಾಗಿ ಖಂಡಿಸಿದರು.

ಟೆಲಿಕಾಂ ವಲಯದಲ್ಲಿ ಒಂದು ದೊಡ್ಡ ಹಗರಣ

ಇತರ ಪ್ರಶ್ನೆಗಳ ಬಗ್ಗೆ ಮಾತನಾಡುತ್ತಾ ಅವರು ಉಸ್ತುವಾರಿ ಸರಕಾರ ತನ್ನ ಎಲ್ಲೆ ಮೀರಿ ಹಲವಾರು ನಿರ್ಣಯಗಳನ್ನು ಕೈಗೊಳ್ಳುತ್ತಿದೆ ಎಂದು ಟೀಕಿಸಿದರು. ರಾಷ್ಟ್ರಪತಿಗಳ ಸಲಹೆಗಳಿಗೂ ಅದು ಕಿವಿಗೊಡುತ್ತಿಲ್ಲ. ದೂರಸಂಪರ್ಕ ವಲಯದಲ್ಲಿ, ಸಾರ್ವಜನಿಕ ವಲಯದ ಶೇರುಗಳ ಮಾರಾಟದಲ್ಲಿ ಸಾವಿರಾರು ಕೋಟಿ ರೂಪಾಯಿಗಳ ದೊಡ್ಡ ಹಗರಣವನ್ನೇ ಅದು ಸೃಷ್ಟಿಸಿದೆ.

ಬೇರೆ ರಂಗಗಳಲ್ಲೂ ಈ ಉಸ್ತುವಾರಿ ಸರಕಾರ ತನ್ನ ಹೀನ ಕೃತ್ಯಗಳನ್ನು ಮುಂದುವರೆಸಿದೆ. ಕಳೆದ ವರ್ಷ ಇತಿಹಾಸ ಸಂಶೋಧನಾ ಮಂಡಳಿ, ಸಮಾಜವಿಜ್ಞಾನ ಸಂಶೋಧನಾ ಮಂಡಳಿ ಇತ್ಯಾದಿ ಶೈಕ್ಷಣಿಕ ಸಂಸ್ಥೆಗಳ ನೇಮಕಗಳಲ್ಲಿ ಕೋಮುವಾದಿ ಆಟವಾಡಿದಂತೆ ಈಗಲೂ ಯು.ಜಿ.ಸಿ.ಯ ಪ್ರಸಾರ ಭಾರತೀಯ ಹೊಸ ಮುಖ್ಯಸ್ಥರುಗಳ ನೇಮಕದಲ್ಲಿ ಇಂತಹ ಹೊಸ ಪ್ರಯತ್ನ ಮತ್ತೆ ನಡೆಸಿದೆ.

ಬಿಜೆಪಿ ಮತ್ತು ಅದರ ಮಿತ್ರರನ್ನು ಸೋಲಿಸಿ

ಸಹಜವಾಗಿಯೇ ಮುಂಬರುವ ಚುನಾವಣೆಗಳನ್ನು ಸಿಪಿಐ(ಎಂ) ಹೇಗೆ ಎದುರಿಸಬೇಕೆಂದಿದೆ ಎಂಬುದೇ ಪತ್ರಕರ್ತರಿಗಿದ್ದ ಪ್ರಮುಖ ಆಸಕ್ತಿ. ಈ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಸುರ್ಜಿತ್ ಬಿಜೆಪಿ ಮತ್ತು ಅದರ ಮಿತ್ರರನ್ನು ಸೋಲಿಸುವುದೇ ತಮ್ಮ ಪಕ್ಷದ ಮುಖ್ಯ ಗುರಿ ಎಂದು ಮತ್ತೊಮ್ಮೆ ಒತ್ತಿ ಹೇಳಿದರು. ಇತರ ಪಕ್ಷಗಳೊಂದಿಗೆ ಹೊಂದಾಣಿಕೆ ಇಲ್ಲದ ಕಡೆಗಳಲ್ಲೂ ಪಕ್ಷ ಪರಿಸ್ಥಿತಿಯ ಮೌಲ್ಯ ಮಾಪನ ಮಾಡಿ ಬಿಜೆಪಿ ಕೂಟವನ್ನು ಸೋಲಿಸಬಲ್ಲ ಪಕ್ಷಗಳಿಗೆ ಬೆಂಬಲ ನೀಡುತ್ತದೆ ಎಂದ ಸುರ್ಜಿತ್ ಈ ಬಾರಿ ಸಿಪಿಐ(ಎಂ) ತನ್ನದೇ ಚುನಾವಣಾ ಪ್ರಣಾಳಿಕೆ ಮುಂದಿಡುತ್ತದೆ, ಕಳೆದ ಬಾರಿಯಂತೆ ಎಡಪಕ್ಷಗಳ ಜಂಟಿ ಪ್ರಣಾಳಿಕೆ ಇರುವುದಿಲ್ಲ ಎಂದರು.

ಒಬ್ಬ ಪತ್ರಕರ್ತನ ಪ್ರಶ್ನೆಗೆ ಉತ್ತರಿಸುತ್ತಾ ಅವರು ಮುಲಾಯಂ ಸಿಂಗ್ ಯಾದವ್, ಶರದ್ ಪವಾರ್‌ರಂತವರ 'ಸಮಾನ ದೂರ'ದ ಸಿದ್ಧಾಂತ ಬಿಜೆಪಿ ಕೂಟಕ್ಕೆ ನೆರವಾಗಬಹುದಷ್ಟೇ ಎಂದು ತಿರಸ್ಕರಿಸಿದರು.

ದೂರದರ್ಶನವೋ- ಬಿಜೆಪಿ ದರ್ಶನವೋ?

ಆಗಸ್ಟ್ 7 ರಂದು ಪ್ರತಿಭಟನೆ

ದೂರದರ್ಶನ ಈಗ ಬಿಜೆಪಿದರ್ಶನವಾಗಿಬಿಟ್ಟಿದೆ ಎನ್ನುತ್ತಾ ವಾಜಪೇಯಿ ಸರಕಾರ ದೂರದರ್ಶನದ ಸಂಪೂರ್ಣ ದುರುಪಯೋಗ ನಡೆಸಿರುವುದನ್ನು ಸುರ್ಜಿತ್ ತರಾಟೆಗೆ ತೆಗೆದುಕೊಂಡರು. ಮಾಧ್ಯಮದ ದುರುಪಯೋಗದಲ್ಲಿ ಅದು ಹಿಂದಿನ ಇಂದಿರಾದರ್ಶನ, ರಾಜೀವ ದರ್ಶನದ ಕೆಟ್ಟ ದಾಖಲೆಗಳನ್ನೆಲ್ಲಾ ಮುರಿದ 'ಬಿಜೆಪಿ ದರ್ಶನ'ವಾಗಿದೆ. ಉದಾಹರಣೆಗೆ ಸಿಪಿಐನ ಇತ್ತೀಚಿನ ಪತ್ರಿಕಾ ಸಮ್ಮೇಳನವನ್ನು ಅದು ಸಂಪೂರ್ಣವಾಗಿ ಬದಿಗೊತ್ತಿತು. ಇಂತಹ ದುರುಪಯೋಗದ ವಿರುದ್ಧ ಆಗಸ್ಟ್ 7 ರಂದು ದೇಶಾದ್ಯಂತ ಆಕಾಶವಾಣಿ, ದೂರದರ್ಶನದ ಕೇಂದ್ರಗಳ ಎದುರು ಪ್ರತಿಭಟನಾ ಕಾರ್ಯಾಚರಣೆ ನಡೆಸಲು ಸಿಪಿಐ(ಎಂ) ಕರೆ ನೀಡಿದೆ.

ತ್ರಿಪುರಾ ಪಂಚಾಯತ್ ಚುನಾವಣೆಗಳು

ಎಡರಂಗಕ್ಕೆ ಬೃಹತ್ ಜನಾದೇಶ

ತ್ರಿಪುರಾದ ಮೂರು ಹಂತಗಳ ಪಂಚಾಯತ್ ಚುನಾವಣೆಗಳಲ್ಲಿ ಎಡರಂಗ ಸುಮಾರು 90% ದಷ್ಟು ಸ್ಥಾನಗಳನ್ನು ಗೆದ್ದುಕೊಂಡು ತನ್ನ ಪ್ರಾಬಲ್ಯವನ್ನು ಇನ್ನಷ್ಟು ಬೆಳೆಸಿಕೊಂಡಿದೆ. ಜುಲೈ 16 ರಂದು ಹಾಗೂ 19 ರಂದು ಚುನಾವಣೆಗಳು ನಡೆದು ಜುಲೈ 25 ರ ವೇಳೆಗೆ ಮತಗಣನೆ ಸುಮಾರಾಗಿ ಪೂರ್ಣಗೊಂಡಿದೆ.

ಎಲ್ಲಾ ನಾಲ್ಕು ಜಿಲ್ಲಾ ಪರಿಷತ್ತುಗಳು ಹಾಗೂ ಎಲ್ಲಾ 23 ಪಂಚಾಯತು ಸಮಿತಿಗಳು ಎಡರಂಗದ ಪಾಲಾಗಿವೆ. ಎಲ್ಲಾ ಪಂಚಾಯತು ಸಮಿತಿಗಳಲ್ಲಿ ಸಿಪಿಐ(ಎಂ) ಗೇ ಬಹುಮತ ದೊರೆತಿದೆ.

ಒಟ್ಟು 538 ಗ್ರಾಮಪಂಚಾಯತುಗಳಲ್ಲಿ 537 ರಲ್ಲಿ ಚುನಾವಣೆಗಳು ನಡೆದವು. ಒಂದು ಪಂಚಾಯತಿಗೆ ನ್ಯಾಯಾಲಯದ ತಡೆಯಾಜ್ಞೆಯಿಂದಾಗಿ ಚುನಾವಣೆ ನಡೆಯಲಿಲ್ಲ. ಸಿಪಿಐ(ಎಂ) 475 ಪಂಚಾಯತುಗಳಲ್ಲಿ ಗೆದ್ದಿದೆ. 50 ರಲ್ಲಿ ಕಾಂಗ್ರೆಸ್ ಗೆದ್ದಿದೆ. 12 ಪಂಚಾಯತುಗಳಲ್ಲಿ ಸಮಬಲವಿದೆ. ಪಂಚಾಯತು ಕಾನೂನುಗಳ ಪ್ರಕಾರ ಇಲ್ಲಿ ಲಾಟರಿ ಮೂಲಕ ನಿರ್ಣಯಿಸಲಾಗುವುದು.

ಇದು ಪ್ರಜಾಪ್ರಭುತ್ವದದ ಪರವಾಗಿ, ಬುಡಮಟ್ಟದಲ್ಲಿ ಅಭಿವೃದ್ಧಿಗಾಗಿ ತನ್ನ ಕಲಾಪಗಳನ್ನು ಮುಂದುವರೆಸಿ ಕೊಂಡು ಹೋಗಲು ತ್ರಿಪುರಾದ ಗ್ರಾಮೀಣ ಜನತೆ ಎಡರಂಗಕ್ಕೆ ನೀಡಿದ ಬೃಹತ್ ಜನಾದೇಶ, ಒಂದು ಸಕಾರಾತ್ಮಕ, ನಿರ್ಣಾಯಕ ಜನಾದೇಶ ಎಂದು ಸಿಪಿಐ(ಎಂ) ತ್ರಿಪುರಾ ರಾಜ್ಯ ಕಾರ್ಯದರ್ಶಿ ಮಂಡಳಿ ಹೇಳಿದೆ. ಇದಕ್ಕಾಗಿ ಅದು ತ್ರಿಪುರಾದ ಗ್ರಾಮೀಣ ಜನತೆಗೆ ನಮನ ಸಲ್ಲಿಸಿದೆ.

ಚುನಾವಣೆಯ ಮೊದಲು ಕಾಂಗ್ರೆಸ್-ಟಿಯುಜೆಎಸ್- ಟಿ.ಎನ್.ವಿ. ಪಿತೂರಿ ನಡೆಸಿ ಎಡರಂಗ ಮುಖಂಡರ ಮೇಲೆ, ಕಾರ್ಯಕರ್ತರ ಮೇಲೆ ಉಗ್ರಗಾಮಿಗಳು ಹಲ್ಲೆ ನಡೆಸುವಂತೆ ಮಾಡಿ ಜನಗಳು ಮುಕ್ತವಾಗಿ ಮತದಾನ ನಡೆಸದಂತೆ ಪ್ರಯತ್ನಿಸಿದರೂ ಆ ಪಿತೂರಿಗಳನ್ನೆಲ್ಲಾ ಜನ ವಿಫಲಗೊಳಿಸಿದರು. 80% ಕ್ಕಿಂತಲೂ ಹೆಚ್ಚು ಮತದಾನ ನಡೆಯಿತು.

ಈ ಹಿಂದೆ 1994 ರಲ್ಲಿ ಕಾಂಗ್ರೆಸ್ ಗೆದ್ದಿದ್ದ ಪಂಚಾಯತುಗಳಲ್ಲಿ ಸುಮಾರಾಗಿ ಎಲ್ಲವನ್ನೂ ಎಡರಂಗ ಈ ಬಾರಿ ಗೆದ್ದುಕೊಂಡಿದೆ. ಈ ಮೂಲಕ ಪಂಚಾಯತುಗಳಲ್ಲಿ ಜನ-ವಿರೋಧಿ, ಪ್ರಜಾಪ್ರಭುತ್ವ-ವಿರೋಧಿ, ಅಭಿವೃದ್ಧಿ- ವಿರೋಧಿ ಪಟ್ಟಭದ್ರ ಹಿತಾಸಕ್ತಿಗಳು ಬೇಡವೇ ಬೇಡ ಎಂದು ತ್ರಿಪುರಾದ ಜನತೆ ಗಟ್ಟಿ ದನಿಯಲ್ಲಿ ಸಾರಿದಂತಾಗಿದೆ. ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಉತ್ಸಾಹದಿಂದ ಭಾಗವಹಿಸಿರುವುದು ಈ ಚುನಾವಣೆಗಳ ಇನ್ನೊಂದು ಸಕಾರಾತ್ಮಕ ಅಂಶ.

ಜುಲೈ 24-25 ರಂದು ನವದೆಹಲಿಯಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಕೇಂದ್ರ ಸಮಿತಿ ಎಡರಂಗವನ್ನು ಹಾಗೂ ಪಕ್ಷದ ರಾಜ್ಯ ಘಟಕವನ್ನು ಅಭಿನಂದಿಸಿದೆ. ಉಗ್ರಗಾಮಿಗಳ, ಬೆದರಿಕೆಗಳನ್ನು ಲೆಕ್ಕಿಸದೆ ಮತದಾನದಲ್ಲಿ ಭಾಗವಹಿಸಿದ ತ್ರಿಪುರಾದ ಜನತೆಯನ್ನು ಅಭಿನಂದಿಸುತ್ತಾ ಎಡರಂಗ ಸರ್ಕಾರಕ್ಕೆ, ಅದರ ಧೋರಣೆಗಳಿಗೆ ಜನತೆಯ ಸಂಪೂರ್ಣ ಬೆಂಬಲದ ಸಂಕೇತವಿದು ಎಂದಿದೆ.

ಸಂಕುಚಿತ ರಾಜಕೀಯ ಸ್ವಾರ್ಥದ ಮತ್ತೊಂದು ಉದಾಹರಣೆ

ಒಂದು ತಿಂಗಳ ವಿಳಂಬದೊಂದಿಗೆ ಬೆಂಬಲ ಬೆಲೆ ಪ್ರಕಟಣೆ

ಬಿಜೆಪಿ ನೇತೃತ್ವದ ಸರಕಾರ ರಾಜಕೀಯ ಅನೈತಿಕತೆಯಲ್ಲಿ ಹೊಸ-ಹೊಸ ದಾಖಲೆಗಳನ್ನೇ ಸೃಷ್ಟಿಸುತ್ತಿದೆ. ಒಂದು ತಿಂಗಳ ಹಿಂದೆ ಜೂನ್‌ನಲ್ಲೇ ಪ್ರಕಟಿಸಬೇಕಾದ ಬೆಂಬಲ ಬೆಲೆಗಳನ್ನು ಈಗ ಪ್ರಕಟಿಸಿದೆ. ಇಂತಹ ವಿಷಯದಲ್ಲಿ ಚುನಾವಣಾ ಆಯೋಗ ಆಕ್ಷೇಪ ಪಡಿಸಲಿಕ್ಕಿಲ್ಲ ಎಂಬ ಅರಿವಿನಿಂದ ಅದು ಹೀಗೆ ಮಾಡಿದೆ. ವಿವಿಧ ಮುಂಗಾರು ಬೆಳೆಗಳಿಗೆ ಬೆಂಬಲ ಬೆಲೆ ಪ್ರಕಟಿಸಿದ ರೀತಿಗೆ ಅಖಿಲ ಭಾರತ ಕಿಸಾನ್ ಸಭಾ ಸೇರಿದಂತೆ ಹಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸರಕಾರ ನಿಗದಿಪಡಿಸಿರುವ ಬೆಂಬಲ ಬೆಲೆಗಳಲ್ಲಿ ಹಲವು ಕೊರತೆಗಳು, ಅಸಮಾನತೆಗಳು ಇವೆಯೆಂದು ಅಖಿಲ ಭಾರತ ಕಿಸಾನ್ ಸಭಾ ಟೀಕಿಸಿದೆ. ಕನಿಷ್ಟ ಬೆಂಬಲ ಬೆಲೆಗಳನ್ನು ನಿಗದಿ ಪಡಿಸುವಾಗ ಉತ್ಪಾದನಾ ಖರ್ಚು ಮತ್ತು ಒಂದು ನ್ಯಾಯೋಚಿತ ಲಾಭಾಂಶವನ್ನು ಗಣನೆಗೆ ತಗೊಳ್ಳಬೇಕೆಂಬುದು ರೈತ ಸಂಘಟನೆಗಳ ಬಹಳ ದಿನಗಳ ಬೇಡಿಕೆ. ಕೃಷಿ ಖರ್ಚು ಬೆಲೆ ಆಯೋಗ ವಿವಿಧ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿ ಪಡಿಸುವ ವಿಧಾನದ ಬಗ್ಗೆ ಈ ಹಿಂದೆ ಬಹಳ ಟೀಕೆಗಳು ಬಂದಿವೆ. ಆದರೆ ಇವು ಯಾವುದನ್ನು ಗಮನಕ್ಕೆ ತಗೊಳ್ಳದೆ ಉಸ್ತುವಾರಿ ಸರಕಾರ, ರಾಜಕೀಯ ಪಕ್ಷಗಳೊಂದಿಗಾಗಲೀ, ರೈತರ ಸಂಘಟನೆಗಳೊಂದಿಗಾಗಲೀ ಚರ್ಚಿಸದೆ ಏಕಪಕ್ಷೀಯವಾಗಿ ಮಾಡಿರುವ ಈ ಪ್ರಕಟಣೆಯ ಹಿಂದೆ ಸಂಕುಚಿತ ರಾಜಕೀಯ ಲಾಭ ಗಿಟ್ಟಿಸುವ ವಾಸನೆ ಹೊಡೆಯುತ್ತಿದೆ.

ಒಂದು ತಿಂಗಳು ವಿಳಂಬ ಮಾಡಿ, ಚುನಾವಣೆ ಘೋಷಣೆಯಾದ ಮೇಲೆಯೇ ಏಕೆ ಈ ಪ್ರಕಟಣೆ ಎಂದು ಕೇಂದ್ರ ಸರಕಾರ ವಿವರಣೆ ನೀಡಿಲ್ಲ ಎಂದಿರುವ ಅಖಿಲ ಭಾರತ ಕಿಸಾನ್ ಸಭಾ ಸಂಕುಚಿತ ರಾಜಕೀಯ ಸ್ವಾರ್ಥಕ್ಕಾಗಿ ರೈತರ ಸಮಸ್ಯೆಗಳನ್ನು ಬಳಸಿಕೊಳ್ಳುವುದನ್ನು ನಿಲ್ಲಿಸಿ ಕನಿಷ್ಟ ಬೆಂಬಲ ಬೆಲೆ ನಿಗದಿಪಡಿಸಲು ಒಂದು ವೈಜ್ಞಾನಿಕ ವ್ಯವಸ್ಥೆಯನ್ನು ಮುಂದಿಡಬೇಕು ಎಂದು ಆಗ್ರಹಪಡಿಸಿದೆ.

(ಪಿ.ಎಸ್.ಎನ್)



ಕಾರ್ಗಿಲ್‌ನಲ್ಲಿ, ಬಟಾಲಿಕ್‌ನಲ್ಲಿ
ಕಾರ್ಯಾಚರಣೆ ಯಶಸ್ವಿಯ
ಸಾಧ್ಯವಾಗಿದೆ. ಆದರೆ ಇದಕ್ಕೆ
ಮಿಲಿಟರಿ ರಂಗದಲ್ಲಿ ಮಾತ್ರವ
ಬಾರಿಸುತ್ತಿದ್ದಾರೆ. ಇದು ನಿಜವ
ಮಾಡಿ ನೆನಪಿಸುತ್ತಿದ್ದಾರೆ? ಅ
ಮಂತ್ರಿಗಳು ನಮ್ಮ ವಿದೇಶಾಂ
ಏನನ್ನು ನೆನಪಿಸುತ್ತಿದ್ದಾರೆ?
ಮಾತೇಕೆ ಕೇಳಬರುತ್ತಿದೆ? ವ
ಎರಡೆರಡು 'ತನಿಖೆ'ಗಳನ್ನು ನಡ

ಕಾರ್ಗಿಲ್ ವಿಜಯ ವೀರ ಸೈನಿಕರದ
ವಾಜಪೇಯಿ ಸರಕಾರ ಸಾಧಿಸಿದ್ದೇನು

"ನಾವು ಪಾಕಿಸ್ತಾನದ ವಿರುದ್ಧ ಮಿಲಿಟರಿ ವಿಜಯ ಸಾಧಿಸಿದ್ದೇವೆ. ಇದೇನು ಹೊಸತಲ್ಲ, ಹಲವು ಬಾರಿ ಸಾಧಿಸಿದ್ದೇವೆ. ಆದರೆ ಈ ಸಲ 1999 ರಲ್ಲಿ ಮೊತ್ತಮೊದಲ ಬಾರಿಗೆ ರಾಜತಾಂತ್ರಿಕ ರಂಗದಲ್ಲೂ ವಿಜಯ ಸಾಧಿಸಿದ್ದೇವೆ" - ಇದು ಈಗ ಕೇಂದ್ರ ಗೃಹಮಂತ್ರಿ ಅಡ್ವಾಣಿಯವರು ಹೋದಲೆಲ್ಲಾ ಹೇಳಿಕೊಳ್ಳುತ್ತಿರುವ ಮಾತು. ವಾಜಪೇಯಿ ಸರಕಾರದ ಇತರ ಮಂತ್ರಿಗಳು, ಆಳುವ ಕೂಟದ ಇತರ ಮುಖಂಡರದ್ದೂ ಇದೇ ರಾಗ. ಕಳೆದ ವರ್ಷ ಮೇ ತಿಂಗಳಲ್ಲಿ ಪೋಖ್ರಾನ್ ಸ್ಫೋಟದ ನಂತರ "ಈಗ ಕಾಶ್ಮೀರದಲ್ಲಿ ನಮ್ಮ ಕೈ ಬಲಗೊಂಡಿದೆ" ಎಂದು ಹೇಳಿದವರೂ ಇದೇ ಅಡ್ವಾಣಿಯವರೇ ಅಲ್ಲವೇ? ಆದರೂ ಅದಾದ ಒಂದೇ ವರ್ಷದೊಳಗೆ ಹಿಂದಿನ 25 ವರ್ಷಗಳ ಕಾಲ ಭಾರತ-ಪಾಕಿಸ್ತಾನ ಘರ್ಷಣೆ ನಡೆಯದ ಜಾಗದಲ್ಲೂ ಈ ಬಾರಿ ಘರ್ಷಣೆ ನಡೆಯಿತೇಕೆ? ನಮ್ಮ ನಾಲ್ಕು ನೂರಕ್ಕೂ ಹೆಚ್ಚು ವೀರ ಯೋಧರನ್ನು ಬಲಿಗೊಡಬೇಕಾಯಿತೇಕೆ ಎಂಬ ಪ್ರಶ್ನೆ ಬಹುಶಃ ಅವರ ಮಟ್ಟಿಗೆ ಇಲ್ಲಿ ಅಪ್ರಸ್ತುತ.

ಅದಿರಲಿ ಈ 'ರಾಜತಾಂತ್ರಿಕ ವಿಜಯ'ಕ್ಕೆ ಪೋಖ್ರಾನ್ ಸ್ಫೋಟ ನಮಗೆ ನೀಡಿದ 'ಶಕ್ತಿ' ಕಾರಣ ಎಂದು ಅಡ್ವಾಣಿ ಹೇಳಿಕೊಳ್ಳುತ್ತಾರೆಯೇ? ಇಲ್ಲ. "ಕಾರ್ಗಿಲ್ ಘರ್ಷಣೆಯಲ್ಲಿ ಅಮೆರಿಕಾದ ರಾಜತಾಂತ್ರಿಕ ಪಾತ್ರ ಭಾರತ-ಪಾಕಿಸ್ತಾನ ಸಂಬಂಧಗಳಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಿದೆ'' ಎಂದು ಆನಂದತುಂದಿಲರಾಗಿ ಅಡ್ವಾಣಿ ಹೇಳಿದ್ದಾರೆ. ಅಂದರೆ ಅವರ 'ರಾಜತಾಂತ್ರಿಕ ವಿಜಯ' ದಲ್ಲಿ ಅಮೆರಿಕಾದ 'ಸಹಕಾರ'ದ್ದು ಬಹಳ ಮುಖ್ಯ ಪಾತ್ರ ಎಂದಾಯಿತು. ಇದುವರೆಗೆ ಪಾಕಿಸ್ತಾನದ ಪರ ವಹಿಸುತ್ತಿದ್ದ ಅಮೆರಿಕಾ ಈ ಬಾರಿ ಹಾಗೆ ಮಾಡದಂತೆ ತಡೆದಿರುವುದು ತಮ್ಮ ಸರ್ಕಾರದ ಸಾಧನೆ ಎಂದು ಅವರ ಅಭಿಪ್ರಾಯ.

ಕ್ಲಿಂಟನರಿಗೆ, ಜಿ-8 ದೇಶಗಳಿಗೆ ಗುಪ್ತ ಮನವಿ?

ಆದರೆ ನಿಜವಾಗಿ ಬಿಜೆಪಿ ನೇತೃತ್ವದ ಸರಕಾರ ಸಾಧಿಸಿದ್ದೇನು? ಕಾಶ್ಮೀರ ಪ್ರಶ್ನೆ ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಪ್ರಶ್ನೆ, ಅದನ್ನು ದ್ವಿಪಕ್ಷೀಯ ಮಾತುಕತೆಗಳಿಂದ ನಾವೇ ಪರಿಹರಿಸಿಕೊಳ್ಳುತ್ತೇವೆ, ಬೇರೆ ಮೂರನೇಯವರು ಅದರಲ್ಲಿ ಮೂಗು ತೂರಿಸಬೇಕಾಗಿಲ್ಲ - ಇದು ಭಾರತದ ದೀರ್ಘಕಾಲದ ನಿಲುವು. ಆ ನಿಲುವನ್ನು ತಲೆಕೆಳಗೆ ಮಾಡಿ ಅಮೆರಿಕಾಕ್ಕೆ ಕಾಶ್ಮೀರ ಪ್ರಶ್ನೆಯಲ್ಲಿ ಮೂಗು ತೂರಿಸಲು ಅವಕಾಶ ನೀಡಿದ್ದೇ ವಾಸ್ತವವಾಗಿ ವಾಜಪೇಯಿ ಸರಕಾರದ ನಿಜವಾದ 'ಸಾಧನೆ' ಎನ್ನುತ್ತಾರೆ ಈಗ ಹಲವು ವಿಶ್ಲೇಷಕರು.

ನಿಜವಾಗಿ, ಈ ಸರಕಾರ ನಡೆಸಿದ ರಾಜತಾಂತ್ರಿಕ ಪ್ರಯತ್ನಗಳೇನು? 48 ಗಂಟೆಗಳೊಳಗೆ ಅತಿಕ್ರಮಣ ಕೋರರನ್ನೆಲ್ಲಾ ಹಿಂದಕ್ಕಟ್ಟುತ್ತೇವೆ ಎಂದು ಕೊಚ್ಚಿಕೊಂಡ ಸರಕಾರದ ಪ್ರಧಾನಮಂತ್ರಿಗಳು ಅದು ಕೇವಲ ಬಡಾಯಿಯೆಂದು ಜನರಿಗೆ ಗೊತ್ತಾಗಲಾರಂಭಿಸಿದಾಗ ಅಮೆರಿಕಾದ ಅಧ್ಯಕ್ಷರಿಗೆ ತುರ್ತಾಗಿ ಒಂದು ಗುಪ್ತ ಪತ್ರ ಕಳಿಸಿದರು. ಆ ಪತ್ರದಲ್ಲಿ ಏನಿತ್ತು ಎಂದು ಇದುವರೆಗೂ ದೇಶಕ್ಕೆ ತಿಳಿಸಲಿಲ್ಲ. ನಂತರ ಅವರ ಸರಕಾರ ಜಗತ್ತಿನ ಶ್ರೀಮಂತ ಸಾಮ್ರಾಜ್ಯಶಾಹಿ ದೇಶಗಳ ಗುಂಪಾದ ಜಿ-8 ರ ಮುಖ್ಯಸ್ಥರುಗಳಿಗೆ ಪತ್ರ ಬರೆದರು-ಪಾಕಿಸ್ತಾನಕ್ಕೆ ಐ.ಎಂ.ಎಫ್. ಸಾಲ ನಿರಾಕರಿಸಿ ಎಂದು ಬಿನ್ನವಿಸಿಕೊಂಡಿತು.

ಈ ಸರಕಾರ ನಡೆಸಿದ ಇತರ ರಾಜತಾಂತ್ರಿಕ ಕೆಲಸಗಳೇನು? ಪಾಕಿಸ್ತಾನದ ಮಾಜಿ ವಿದೇಶಾಂಗ ಕಾರ್ಯದರ್ಶಿ ನಿಯಾಜ್ ನಾಯಕ್ ಗುಪ್ತವಾಗಿ ದಿಲ್ಲಿಗೆ ಬಂದು ವಾಜಪೇಯಿಯವರನ್ನು, ಅವರ ರಾಷ್ಟ್ರೀಯ ಭದ್ರತಾ ಸಲಹೆಗಾರ ಬ್ರಜೇಶ್ ಮಿಶ್ರಾರನ್ನು ಭೇಟಿಯಾದರು. ಇದಕ್ಕೆ ಮೊದಲು ಭಾರತ ಸರಕಾರದ ಪರವಾಗಿ ಭಾರತೀಯ ವಿದೇಶಾಂಗ ಖಾತೆಯಲ್ಲಿನ ಒಬ್ಬ ಅಧಿಕಾರಿ ವಿವೇಕ ಕಟ್ಜು ಮತ್ತು ಒಂದು ಉದ್ದಿಮೆದಾರ ಗುಂಪಿನ ಪರವಾಗಿ ಕೆಲಸ ಮಾಡುವ ಆರ್.ಕೆ.ಮಿಶ್ರಾ ಎಂಬುವರು ಇಸ್ಲಾಮಾಬಾದಿಗೆ ಹೋಗಿ ನಿಯಾಜ್ ನಾಯಕ್‌ರ ಭಾರತ ಗುಪ್ತ ಭೇಟಿಗೆ ತಯಾರಿ ನಡೆಸಿಕೊಟ್ಟು ಬಂದರಂತೆ.

ಜುಲೈ 4 ರ ಸಭೆ ತ್ರಿಪಕ್ಷೀಯವಲ್ಲವೇ?

ಅವರ ಇಂತಹ ಮಹಾನ್ 'ರಾಜತಾಂತ್ರಿಕ' ಪ್ರಯತ್ನಗಳಿಗೆ ಕಳಸವಿಟ್ಟಂತೆ ನಡೆದದ್ದು ಜುಲೈ 4 ರ ಕ್ಲಿಂಟನ್-ಶರೀಫ್ ಭೇಟಿ ಕಾಲದಲ್ಲಿ ಭಾರತದ 'ರಾಜತಾಂತ್ರಿಕ' ಪ್ರಯತ್ನ. ಕಾರ್ಗಿಲ್‌ನಲ್ಲಿ ಘರ್ಷಣೆ ನಿಲ್ಲಿಸುವ ಪ್ರಕ್ರಿಯೆ ಈ ಸಭೆಯ ಜಂಟಿ ಹೇಳಿಕೆಯಿಂದ ಆರಂಭಗೊಂಡಿತು ಎಂದು ನಿಮಗೆ ತಿಳಿದಿದೆ. ಅಮೆರಿಕಾದ ಅಧ್ಯಕ್ಷ ಕ್ಲಿಂಟನ್‌ರ ಆಹ್ವಾನದ ಮೇಲೆ ಪಾಕಿಸ್ತಾನದ ಪ್ರಧಾನಿ ಶರೀಫ್ ವಾಶಿಂಗ್ಟನ್‌ಗೆ ಬಂದಿದ್ದರು. ವಾಜಪೇಯಿಯವರಿಗೂ ಆಹ್ವಾನ ನೀಡಿದರೂ ಅವರು ಹೋಗಲಿಲ್ಲ. ಇದು ಸಾಮಾನ್ಯವಾಗಿ ತಿಳಿದಿರುವ ಸಂಗತಿ. ಆದರೆ ಅಲ್ಲಿ ವಾಶಿಂಗ್ಟನ್‌ನಲ್ಲಿ ಕ್ಲಿಂಟನ್ ಮತ್ತು ಶರೀಫ್ ಹಾಗೂ ಅಮೆರಿಕನ್ ಮತ್ತು ಪಾಕಿಸ್ತಾನೀ ವಿಶೇಜ್ಞರು ಮೇಜಿನ ಆಚೆ-ಈಚೆ ಕುಳಿತಿದ್ದ ವೇಳೆಯಲ್ಲೇ ಭಾರತದ ಪ್ರಧಾನಮಂತ್ರಿ ವಾಜಪೇಯಿಯವರು ಹಾಗೂ ಅವರ ರಾಷ್ಟ್ರೀಯ ಭದ್ರತಾ ಸಲಹೆಗಾರ ಬ್ರಜೇಶ್ ಮಿಶ್ರಾ ಇ
ಭಾರತದಲ್ಲಿ ಟೆಲಿಫೋನ್ ಮುಂದೆ ಕಾದು ಕೂತಿದ್ದರು
ಮಾತುಕತೆಯ ನಡುವೆಯೇ ಕ್ಲಿಂಟನ್‌ರಿಂ
ವಾಜಪೇಯಿಯವರಿಗೆ ಫೋನ್ ಕರೆ ಬಂದಿತ್ತೆಂದ
ತಿಳಿದುಬಂದಿದೆ. ಅತ್ತ ಕ್ಲಿಂಟನ್-ಶರೀಫ್ ಜಂ
ಹೇಳಿಕೆಯ ಪದಗಳ ಬಗ್ಗೆ ಕ್ಲಿಂಟನ್‌ರ ರಾಷ್ಟ್ರೀಯ ಭದ್ರ
ಸಲಹೆಗಾರ ಸ್ಯಾಂಡಿ ಬರ್ಗರ್ ಭಾರತದ ಬ್ರಜೇಶ
ಮಿಶ್ರಾರೊಂದಿಗೆ ಮಾತನಾಡಿದರು. ಅಂದರೆ ದೇಶದೊಳ
ಭಾರೀ ಪ್ರತಿಕೂಲ ಪ್ರತಿಕ್ರಿಯೆ ಬರಬಹುದೆಂ
ಭೀತಿಯಿಂದ ವಾಶಿಂಗ್ಟನ್‌ಗೆ ಹೋಗದಿದ್ದ ಭಾರತ
ಪ್ರಧಾನ ಮಂತ್ರಿಗಳು ಕ್ಲಿಂಟನ್-ಶರೀಫ್ ಮಾತುಕತೆಗ
ಪರೋಕ್ಷವಾಗಿ ಭಾಗವಹಿಸಿದ್ದರು. ವಾಸ್ತವವಾ
ಹೊರಗಿನವರಾದ ಕ್ಲಿಂಟನ್‌ರ ಮಧ್ಯಸ್ಥಿಕೆಯಲ್ಲಿ ಭಾರ
ಮತ್ತು ಪಾಕಿಸ್ತಾನದ ಪ್ರಧಾನಮಂತ್ರಿಗಳು ಒಂದು ಒಪ್ಪಂದ
ಬರುವಂತೆ ಮಾಡುವ ಪ್ರಯತ್ನವೇ ಅದು ಎಂದ
ವಿಶೇಷಜ್ಞರು ಈಗ ಅಭಿಪ್ರಾಯ ಪಡುತ್ತಿದ್ದಾರೆ. ಇದರ
'ರಾಜತಾಂತ್ರಿಕ ವಿಜಯ' ದ ನೆರಳೂ ಕೂಡಾ ಇ
ಅಲ್ಲವೇ? ವಾಸ್ತವವಾಗಿ ಅಮೆರಿಕಾಕ್ಕೆ ಶರಣು ಎನ್ನು

ಕೇವಲ 'ಗುಪ್ತ
ಅಥವಾ ನಾಯಕ

ಮೇ ತಿಂಗಳ ಕೊನೆಯ ವಾರದಲ್ಲಿ ಭಾರತದ ಭೂಸೇನೆಯ ತುಕಡಿಗಳಿಗೆ ಬೆಂಬಲವಾಗಿ ವಿಮಾನ ಪಡೆಯ ವಿಮಾನಗಳು ಹಾರಾಟ ಆರಂಭಿಸಿದಾಗ ಇನ್ನು 48 ಗಂಟೆಗಳೊಳಗಾಗಿ ಕಾರ್ಗಿಲ್ ವಲಯದಲ್ಲಿ ನಿಯಂತ್ರಣ ರೇಖೆಯ ಈಚೆಗೆ ನುಸುಳಿದ್ದ ಅತಿಕ್ರಮಣಕೋರರನ್ನೆಲ್ಲಾ ಹಿಂದಕ್ಕಟ್ಟುತ್ತೇವೆ ಎಂದು ಭಾರತದ ರಕ್ಷಣಾ ಮಂತ್ರಿಗಳು ಸಾರಿದರು. ಆದರೆ ಕೊನೆಗೂ ಅದನ್ನು ಸಾಧಿಸಲಿಕ್ಕೆ 48 ದಿನಗಳಿಗಿಂತಲೂ ಹೆಚ್ಚು ಅವಧಿ ಬೇಕಾಯಿತು. ಅಷ್ಟೇ ಅಲ್ಲ, ಅದಕ್ಕೆ ದೇಶ ತೆರಬೇಕಾಗಿ ಬಂದ ಬೆಲೆಯೂ ಅಪಾರ. ಸರ್ಕಾರಿ ಅಂಕೆ-ಸಂಖ್ಯೆಗಳ ಪ್ರಕಾರವೇ ಈ ಎರಡು ತಿಂಗಳಲ್ಲಿ ನಾವು 413 ವೀರ ಸೈನಿಕರನ್ನು ಕಳಕೊಂಡಿದ್ದೇವೆ. ಇನ್ನೂ 584 ಮಂದಿ ಗಾಯಗೊಂಡಿದ್ದಾರೆ. ಆದರಲ್ಲಿ ಹಲವರು ಸಾಮಾನ್ಯ ಜೀವನ ನಡೆಸುವ ಸ್ಥಿತಿಯಲ್ಲಿಲ್ಲ. 100 ಅತಿಕ್ರಮಣಕೋರರು ನುಸುಳಿರಬಹುದು ಎಂದು ಆರಂಭದಲ್ಲಿ ಹೇಳಲಾಯಿತು. ನಂತರ ಆ ಸಂಖ್ಯೆ 3000 ದ ವರೆಗೂ ಹೋಯಿತು. ಈ ಆಕ್ರಮಣವನ್ನು ಹಿಮ್ಮೆಟ್ಟಿಸಲು ಸುಮಾರು 5000 ಕೋಟಿ ರೂ. ಖರ್ಚು ಮಾಡಬೇಕಾಯಿತು. ನಿಜವಾಗಿಯೂ ಇಷ್ಟೊಂದು ಅಪಾರ ಬೆಲೆ ತೆರಬೇಕಾಗಿದ್ದು ಅನಿವಾರ್ಯವಾಗಿತ್ತೆ? ಅಥವಾ ನಮ್ಮ ಸರಕಾರದ ವಿಫಲತೆಯಿಂದಾಗಿ ಈ ಪರಿಸ್ಥಿತಿ ಬಂತೇ?


ಕಾರ್ಗಿಲ್‌ನಲ್ಲಿ ಪ್ರಧಾನಿಗಳು ವರ್ಣಿಸಿದ "ಯುದ್ಧದಂತಹ ಸನ್ನಿವೇಶ' ನಿರ್ಮಾಣವಾದರೂ ಹೇಗಾಯಿತು? ಏಕಾಯಿತು? ಈ ಬಗ್ಗೆ ಪತ್ರಿಕೆಗಳಲ್ಲಿ ಹಲವು ವರದಿಗಳು ಬಂದಿವೆ. ಇವು ಹಲವು ಪ್ರಶ್ನೆಗಳನ್ನೆತ್ತಿವೆ. ಸರಕಾರ ಇದಕ್ಕೆ ಉತ್ತರ ನೀಡಲು ಹಿಂಜರಿಯುತ್ತಿದೆ. ಏಕಿರಬಹುದು? ಇದುವರೆಗೆ ಬೆಳಕಿಗೆ ಬಂದಿರುವ ಕೆಲವು ವಾಸ್ತವಾಂಶಗಳನ್ನು ಗಮನಿಸಿ

- ಹಿಂದೆ ಚಳಿಗಾಲದಲ್ಲಿ ಗಡಿಯಲ್ಲಿ ಪ್ರತಿತಿಂಗಳು ದೂರಗಾಮಿ ಸೇನಾ ಗಸ್ತು ನಡೆಸಲಾಗುತ್ತಿತ್ತು. ಪೋಖ್ರಾನ್-II ಸ್ಫೋಟದ ನಂತರ ಇದನ್ನು ಮೂರು ತಿಂಗಳಿಗೊಮ್ಮೆ ಎಂದು ಕಮ್ಮಿ ಮಾಡಲಾಯಿತು. ಕಾರಣ ಬಜೆಟ್‌ನಲ್ಲಿ ಮೀಸಲಿಟ್ಟ ಹಣದಲ್ಲಿ ಪೋಖ್ರಾನ್ ನಿಂದಾಗಿ ಉಂಟಾದ ಕೊರತೆ.
- ಪೋಖ್ರಾನ್ ಸ್ಫೋಟದ ನಂತರ ಅಮೆರಿಕಾ ವಿಧಿಸಿದ ನಿರ್ಬಂಧಗಳಿಗಾಗಿ ಅಮೆರಿಕನ್ ಗುಪ್ತಚರ ವಿಭಾಗ ನಮ್ಮ ಗುಪ್ತಚರ ವಿಭಾಗದೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳುವುದು ನಿಂತಿತು. ಪಾಕಿಸ್ತಾನೀ ಪಡೆಗಳ ಚಲನವಲನಗಳನ್ನು ಉಪಗ್ರಹ ಮೂಲಕ ಗಮನಿಸಿ ನೀಡುವ ವರದಿಯೂ ಈ ರೀತಿಯ ಮಾಹಿತಿಗಳಲ್ಲಿ ಈ ಹಿಂದೆ ಸೇರಿರುತ್ತಿತ್ತು.
- ಗಡಿಯಲ್ಲಿ ಶತ್ರುಗಳ ಜಮಾವಣೆ ಕುರಿತು ಭಾರತದ ಗುಪ್ತಚರ ಪಡೆಗಳಾದ ಐ.ಬಿ. ಮತ್ತು ಆರ್.ಎ.ಡಬ್ಲ್ಯು ರಾಷ್ಟ್ರೀಯ ಭದ್ರತಾ ಮಂಡಳಿಗೆ ಮಾರ್ಚ್ '99 ರಲ್ಲಿ ಮಾಹಿತಿ ನೀಡಿದ್ದವು. ಪ್ರಧಾನ ಮಂತ್ರಿಗಳ ಪ್ರಮುಖ ಕಾರ್ಯದರ್ಶಿ ಬ್ರಿಜೇಶ್ ಮಿಶ್ರಾ ಈ ಮಂಡಳಿಯ ಸಂಚಾಲಕರೂ ಕೂಡಾ. ಆದರೆ ಈ ಮಾಹಿತಿಯನ್ನು ನಿರ್ಲಕ್ಷಿಸಲಾಯಿತು.
- ಗುಪ್ತಚರ ಸಂಸ್ಥೆ ಆರ್.ಎ.ಡಬ್ಲ್ಯು ನ ಮುಖ್ಯಸ್ಥ ಅರವಿಂದ ದವೆಯವರ ಬಳಿ ಯೋಜಿತ ಅತಿಕ್ರಮಣಗಳ ವಿವರಗಳಿದ್ದವು ಎಂದು ಶ್ರೀನಗರದಲ್ಲಿ ಈ ಸಂಸ್ಥೆ
ಪರವಾಗಿ ಕೆಲಸ ಮಾಡುತ್ತಿರುವವರು ಹೇಳಿದ್ದಾ
ದವೆಯವರನ್ನು ಜುಲೈ 14 ರಂದು ಇದಕ್ಕಿದ್ದ
ಅರುಣಾಚಲ ಪ್ರದೇಶದ ರಾಜ್ಯಪಾಲರ
ನೇಮಿಸಲಾಯಿತು.
- ಪಾಕ್ ಆಕ್ರಮಿತ ಒಲ್ತಿಂಗ್‌ತಾಂಗ್ ಎಂಬಲ್ಲಿ ಎರ
ಕ್ಯಾಂಪುಗಳಲ್ಲಿ ಸುಮಾರು 300 ಸೈನಿಕರೇತರರಿಗೆ ತರಬ
ನೀಡಲಾಗುತ್ತಿದೆ ಎಂದು ಇನ್ನೊಂದು ಗುಪ್ತಚರ ಸ
ಲೇಹ್‌ನಲ್ಲಿ ಕೆಲಸ ಮಾಡುವವರು ವರದಿ ಮಾಡಿದ್ದ
'ಏಪ್ರಿಲ್‌ನಲ್ಲಿ ಆ ಗುಂಪುಗಳು ಅತಿಕ್ರಮಣ ಮಾಡು
ಎಂದು ನಿರ್ದಿಷ್ಟವಾಗಿ ದಿಲ್ಲಿಗೆ ತಿಳಿಸಲಾಗಿತ್ತು' ಎಂ
ಶ್ರೀನಗರದಲ್ಲಿರುವ ಅಧಿಕಾರಿಗಳು ಹೇಳಿದ್ದಾರೆ.
- ನಂತರ ಲೆಹ್-ಕಾರ್ಗಿಲ್ ಪ್ರದೇಶದ ವೀಕ್ಷಣ
ಪಾಕಿಸ್ತಾನ ದೂರದಿಂದಲೇ ನಿರ್ದೇಶಿಸಬಹುದಾ
ವಿಮಾನಗಳನ್ನು ಬಳಸುತ್ತಿದೆ ಎಂದೂ ಐ.ಬಿ. ವರ
ಮಾಡಿತ್ತು. ಅಕ್ಟೋಬರ್ 98 ರ ಮೂರನೇ ವಾರದ
ರಕ್ಷಣಾ ಮಂತ್ರಾಲಯಕ್ಕೆ ಈ ಮಾಹಿತಿ ಸಿಕ್ಕಿತ್ತು.
- ಬಿ.ಎಸ್.ಎಫ್. (ಗಡಿ ರಕ್ಷಣಾ ದಳ) ಡಿಸೆಂಬ
20 ರಂದು ಒಂದು ಉಗ್ರಗಾಮಿ ತಂಡವಾದ ಹಿಜಬು
ಕಾರ್ಯಕರ್ತ ಅಝುರ್ ಶಫಿರ್ ಮಿರ್ ಎಂಬಾತ
ಹಿಡಿದಿತ್ತು. ಶ್ರೀನಗರ-ಲೆಹ್ ಮಾರ್ಗವ
ಕತ್ತರಿಸಿಹಾಕಲು ಮುಂಶೇರ್-ಗಿಲ್ಗಿಟ್ ಪ್ರದೇಶದಲ್ಲಿ
110 ಜನಗಳಿಗೆ ತರಬೇತಿ ನೀಡಲಾಗುತ್ತಿದೆ ಎಂದು
ಹೊರಗೆಡಹಿದ್ದ. ಈ ಮಾಹಿತಿ ಖಂಡಿತಾ ಗೃಹ ಇಲಾ

ಗಾಯಗೊಂಡ ಸಂಗಾತಿಯನ್ನು ಚಿಕಿತ್ಸೆಗೆ ಒಯ್ಯುತ್ತಿರುವ ಸೈನಿಕರು



...ನಲ್ಲಿ ಅತಿಕ್ರಮಣಕೋರರನ್ನೆಲ್ಲಾ ಹಿಮ್ಮೆಟ್ಟಿಸಲಾಗಿದೆ. 'ಆಪರೇಷನ್ ವಿಜಯ್' ...ವು ಸಾವಿರಾರು ಸೈನಿಕರ ಶೌರ್ಯ-ಸಾಹಸ, ತ್ಯಾಗ-ಬಲಿದಾನಗಳಿಂದ ಇದು ...ಬೇಕಾಗಿ ಬಂದ ಬೆಲೆಯೇನು? ಇದರ ಅವಶ್ಯಕತೆಯಿತ್ತೆ? ಮೊತ್ತಮೊದಲ ಬಾರಿಗೆ ಭಾರತ ...ತಾಂತ್ರಿಕ ರಂಗದಲ್ಲೂ ವಿಜಯ ಸಾಧಿಸಿದೆ ಎಂದು ಬಿಜೆಪಿ ಮುಖಂಡರು ತಮಟೆ ...ರ್ಯಾಚರಣೆ ಮುಗಿದ ನಂತರವೂ ಅಧ್ಯಕ್ಷ ಕ್ಲಿಂಟನ್ ನಮ್ಮ ಪ್ರಧಾನಿಗಳಿಗೇಕೆ ಫೋನ್ ...ವಿದೇಶಾಂಗ ...ಗಳಿಗೆ ಪದೇ ಪದೆ ...ವಿಫಲತೆ" ಯ ... ಸರಕಾರ ...ರಿಸಿರುವುದೇಕೆ?



ರಾಜತಾಂತ್ರಿಕತೆಯಷ್ಟೇ ಇಲ್ಲಿರುವುದು.

ನಿಜವಾಗಿ ಈ ಕ್ಲಿಂಟನ್-ಶರೀಫ್ ಭೇಟಿಯ ಹಿಂದಿನ ವಾರವೇ ಈ ಬಗ್ಗೆ ನಿರ್ಣಯಗಳಿಗೆ ಬರಲಾಗಿತ್ತು. ಕ್ಲಿಂಟನರಿಗೆ ಭಾರತದ ಪ್ರಧಾನಿಗಳು ಗುಪ್ತ ಪತ್ರದ ಹಿನ್ನೆಲೆಯಲ್ಲಿ ಅಮೆರಿಕಾದ ಭೂಸೇನೆಯ ಸೇನಾಧಿಪತಿ ಜನರಲ್ ಅಂತೋನಿ ಜಿನ್ನಿ ಪಾಕಿಸ್ತಾನದ ಸೇನಾಧಿಪತಿ ಜನರಲ್ ಪರ್ವೇಜ್ ಮುಶರ್ರಫ್‌ರನ್ನು ಭೇಟಿಯಾಗಿ ಕಾರ್ಗಿಲ್‌ನಲ್ಲಿ ಪಾಕಿಸ್ತಾನದ ವಾಪಸಾತಿಯ ವಿಧಿ-ವಿಧಾನಗಳ ಬಗ್ಗೆ ಚರ್ಚಿಸಿದರು ಎಂದು ತಿಳಿದು ಬಂದಿದೆ. ಆಗ ಅವರೊಂದಿಗಿದ್ದ ಅಮೆರಿಕದ ಉಪ ವಿದೇಶಾಂಗ ಕಾರ್ಯದರ್ಶಿ ಗಿಬ್ಸನ್ ಲಾನ್ನರ್ ನಂತರ ಈ ಮೇಲೆ ಹೇಳಿದ್ದ ಪಾಕಿಸ್ತಾನದ ಮಾಜಿ ವಿದೇಶಾಂಗ ಕಾರ್ಯದರ್ಶಿ ನಿಯಾಜ್ ನಾಯಕ್‌ರ ಜೊತೆಗೆ ಭಾರತಕ್ಕೆ ಬಂದು ನಮ್ಮ ಪ್ರಧಾನಿಗಳನ್ನು ಭೇಟಿ ಮಾಡಿದ್ದರು. ಖಂಡಿತವಾಗಿಯೂ ಪಾಕಿಸ್ತಾನ ಏನು 'ವ್ಯವಹಾರ' ಕುದುರಿಸಬಯಸುತ್ತದೆ, ಅದರ ಬಗ್ಗೆ ಅಮೆರಿಕಾದ ಅಭಿಪ್ರಾಯ ಏನು ಎಂದು ವಾಜಪೇಯಿಯವರಿಗೆ ತಿಳಿಸಿರುತ್ತಾರೆ.

ಅಂದರೆ ಜುಲೈ 4 ರ ಕ್ಲಿಂಟನ್-ಶರೀಫ್ ಮಾತುಕತೆ ವಾಸ್ತವವಾಗಿ ಕಾರ್ಗಿಲ್‌ನಲ್ಲಿ ಘರ್ಷಣೆ ನಿಲ್ಲಿಸುವುದರ ಬಗ್ಗೆ ಕ್ಲಿಂಟನ್‌ರ ಮಧ್ಯಸ್ಥಿಕೆಯಲ್ಲಿ ನಡೆದ ಸಭೆಯೆಂದೇ ಹೇಳಬೇಕಾಗುತ್ತದೆ. ಕಾಶ್ಮೀರ ಪ್ರಶ್ನೆಯಲ್ಲಿ ಹೊರಗಿನವರಿಗೆ ಮೂಗು ತೂರಿಸಲು ಅವಕಾಶ ನೀಡಬಾರದು ಎಂಬ ಭಾರತದ ದೀರ್ಘಕಾಲದ ನಿಲುವನ್ನು ಬುಡಮೇಲು ಮಾಡಿದ ಈ ಕೆಲಸವನ್ನು ಕೇವಲ ಬಿಜೆಪಿ ಮುಖಂಡರಷ್ಟೇ ಅಭೂತಪೂರ್ವ ರಾಜತಾಂತ್ರಿಕ ವಿಜಯ ಎಂದು ತಂತಮ್ಮ ಬೆನ್ನು ತಟ್ಟಿಕೊಳ್ಳಲು ಸಾಧ್ಯ.

ಪೋಖ್ರಾನ್ ಸ್ಫೋಟ ನಡೆಸಿ 'ನಮ್ಮನ್ನೀಗ ಪರಮಾಣು ಸಂಪನ್ನ ದೇಶ ಎಂದು ಹೇಳಿದರಷ್ಟೇ ಸಾಕು, ನೀವು ಹೇಳುವ, ನಾವು ಇದುವರೆಗೆ ನಿರಾಕರಿಸಿಕೊಂಡು ಬಂದ ಸಿಟಿಬಿಟಿಗೆ ಸಹಿ ಹಾಕಲೂ ಸಿದ್ಧ" ಎಂದು ತಿಪ್ಪರಲಾಗ ಹಾಕುವವರಿಂದ ಭಾರೀ ಸಾಧನೆಯೆಂದು ಅಬ್ಬರಿಸಿದ ಲಾಹೋರ್ ಬಸ್ ಪ್ರಯಾಣದ ವೇಳೆಗಾಗಲೇ ಪಾಕಿಸ್ತಾನ ಕಾರ್ಗಿಲ್‌ನಲ್ಲಿ ತನ್ನ ಕಾರ್ಯಾಚರಣೆ ಆರಂಭಿಸಿತ್ತು ಎಂದು ಹಲುಬುವ ಪ್ರಧಾನಮಂತ್ರಿಗಳಿಂದ ಇನ್ನೇನು ತಾನೇ ನಿರೀಕ್ಷಿಸಲು ಸಾಧ್ಯ?

ಇಂತಹ ವಿಫಲ ಸರಕಾರ, ಅದರ ಅಸಮರ್ಥ ಪ್ರಧಾನಿ ಮತ್ತೆ ನಮಗೆ ಬೇಕೆ ಎಂದು ನಾವೀಗ ಯೋಚಿಸಬೇಕಾಗಿದೆ.

'ಆಪರೇಷನ್ ವಿಜಯ್' ದ ನಂತರ ಈಗ 'ಆಪರೇಷನ್ ಕಣ್ಣಿಗೆ ಮಣ್ಣು'!

ವಿಮರ್ಶಾ/ತನಿಖಾ ತಂಡಗಳ ನೇಮಕ

ಕಾರ್ಗಿಲ್ ಬೆಳವಣಿಗೆಗಳ ಬಗ್ಗೆ ತನಿಖೆ ಮಾಡುವಂತದ್ದೇನೂ ಇಲ್ಲ ಎನ್ನುತ್ತಿದ್ದ ವಾಜಪೇಯಿ ಸರಕಾರ ಒಂದು 'ವಿಮರ್ಶಾ' ಸಮಿತಿಯನ್ನು ನೇಮಿಸುವುದಾಗಿ ಜುಲೈ 24 ರಂದು ಪ್ರಕಟಿಸಿತು. ರಕ್ಷಣಾ ತಜ್ಞರೆನಿಸಿಕೊಂಡ ಕೆ.ಸುಬ್ರಮಣ್ಯಂ ಇದರ ಅಧ್ಯಕ್ಷರಾಗಿರುತ್ತಾರಂತೆ. ಇತರ ಸದಸ್ಯರೆಂದರೆ ಪತ್ರಕರ್ತ/ಸಂಪಾದಕ ಬಿ.ಜಿ.ವರ್ಗಿಸ್ ಮತ್ತು ನಿವೃತ್ತ ಲೆಫ್ಟಿನೆಂಟ್ ಜನರಲ್ ಕೆ.ಕೆ.ಹಝಾರಿ. ರಾಷ್ಟ್ರೀಯ ಭದ್ರತಾ ಮಂಡಳಿಯ ಕಾರ್ಯದರ್ಶಿ ಸತೀಶ್ ಚಂದ್ರ ಇದರ ಕಾರ್ಯದರ್ಶಿಯೂ ಆಗಿರುತ್ತಾರೆ.

ಆದರೆ ಈ ವಿಮರ್ಶೆ/ತನಿಖೆ ಸಮಿತಿ ತನಿಖಾ ಆಯೋಗ ಕಾನೂನಿನ ಅಡಿಯಲ್ಲಿ ನೇಮಿಸಲ್ಪಟ್ಟಿಲ್ಲ ಎಂಬುದು ಗಮನಾರ್ಹ. ಅಂದರೆ ಇದು ಶಾಸನಬದ್ಧ ಅಧಿಕಾರ ಇರುವ ಆಯೋಗ ಅಲ್ಲ. ಆದ್ದರಿಂದ ಮಿಲಿಟರಿ ಕಾರ್ಯಾಚರಣೆಗಳ ಗುಪ್ತ ಮಾಹಿತಿಗಳನ್ನು ಅದು ಪಡೆಯುವಂತಿಲ್ಲ, ಸಂಬಂಧಪಟ್ಟವರು ಅದನ್ನು ಕೊಡುವಂತೆಯೂ ಇಲ್ಲ. ಸರಕಾರ ಏನು ಮಾಹಿತಿ ಕೊಡುತ್ತದೆಯೋ ಅದರ ಆಧಾರದ ಮೇಲಷ್ಟೇ 'ವಿಮರ್ಶೆ' ನಡೆಸಬೇಕು. ಸಮಿತಿ ನೇಮಿಸುವ ಮೊದಲೇ ತೀರ್ಮಾನಗಳು ಏನಿರಬೇಕು ಎಂದು ನಿರ್ಧರಿಸಿಬಿಡುವ ಮೋಸದ ವಿಧಾನಕ್ಕೆ ಒಂದು ಜ್ವಲಂತ ಉದಾಹರಣೆಯಿದು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಇದನ್ನು ಖಂಡಿಸಿದೆ. ಅಷ್ಟೇ ಅಲ್ಲ, ಈ 'ವಿಮರ್ಶಾ ತಂಡ'ದ ವರದಿಯನ್ನು ಸರಕಾರ ಪ್ರಕಟಿಸಬೇಕಾಗಿಯೂ ಇಲ್ಲ!

ಹಾಗಿದ್ದರೆ ಏಕೆ ಸರಕಾರ ಇದನ್ನು ನೇಮಿಸಿದೆ? ಉತ್ತರ ಸ್ಪಷ್ಟ-ಜನತೆಯ ಕಣ್ಣಿಗೆ ಮಣ್ಣೆರಚಲು; ಸರಕಾರದ ಗಂಭೀರ ಲೋಪಗಳನ್ನು ಮರೆಮಾಚಲು. ರಾಜ್ಯಸಭೆಯಲ್ಲಿ ಬಹುಮತದಲ್ಲಿರುವ ಪಕ್ಷಗಳು ಕೇಳಿಕೊಂಡರೂ ರಾಜ್ಯಸಭೆಯ ಅಧಿವೇಶನ ಕರೆಯಲು ಸರಕಾರ ಹಿಂದೇಟು ಹಾಕುತ್ತಿರುವುದನ್ನು ತನ್ನ ಗಂಭೀರ ತಪ್ಪುಗಳು ಬಯಲಿಗೆ ಬರುತ್ತದೆ ಎಂಬ ಭಯದಿಂದಲೇ. ಈ ತನಿಖೆಯ ಪ್ರಕಟಣೆ ಕೂಡಾ ಇಂತಹ ಬೇಡಿಕೆಯನ್ನು ತಣ್ಣಗಾಗಿಸುವ ಒಂದು ವ್ಯರ್ಥ ಪ್ರಯತ್ನ.

ಅದೇದಿನ ರಕ್ಷಣಾ ಮಂತ್ರಿಗಳೂ ಒಂದು ಮಿಲಿಟರಿ ತನಿಖೆ ನಡೆಸಲಾಗುವುದು ಎಂದು ಪ್ರಕಟಿಸಿದ್ದಾರೆ. ಅವರೂ ಕೂಡಾ ಇದನ್ನು ತನಿಖೆಯೆಂದು ಕರೆಯುತ್ತಿಲ್ಲವಂತೆ, ವಿಮರ್ಶೆಯೆನ್ನುತ್ತಾರಂತೆ. ಏಕೆಂದರೆ ತನಿಖೆ ನಡೆಸುವುದು ತಪ್ಪಾದಾಗ ಅಂತಹ ತಪ್ಪೇನು ಆಗಿಲ್ಲ ಎಂಬುದು ತನ್ನ ಭಾವನೆ ಎಂದರು ನಮ್ಮ ರಕ್ಷಣಾ ಮಂತ್ರಿಗಳು.

ಇವರೆಲ್ಲಾ ಏನೇ ಹೇಳಲಿ. **ಕಳೆದ ಎರಡು ತಿಂಗಳ ಘಟನೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಯಾವುದೇ ದೇಶಪ್ರೇಮಿಯ ಮನದಲ್ಲಂತೂ ಹಲವು ಪ್ರಶ್ನೆಗಳು ಏಳುತ್ತವೆಂಬುದು; ವಾಜಪೇಯಿ ಸರಕಾರ ಹಲವು ವಿಷಯಗಳನ್ನು ಮುಚ್ಚಿಡಬಯಸುತ್ತದೆಂಬುದೂ ಸ್ವಯಂವೇದ್ಯ.** ಪ್ರಧಾನಿ ವಾಜಪೇಯಿಯವರು ಅಧ್ಯಕ್ಷ ಕ್ಲಿಂಟನ್‌ಗೆ ಈ ವಿಷಯದಲ್ಲಿ ಪತ್ರ ಏಕೆ ಬರೆದರು, ಆ ಪತ್ರದಲ್ಲಿ ಏನಿತ್ತು ಎಂಬುದನ್ನು ಈಗಲೂ ದೇಶಕ್ಕೆ ಈ ಸರಕಾರ ತಿಳಿಸಿಲ್ಲ. ಕ್ಲಿಂಟನ್‌ರಿಗೆ ವಾಜಪೇಯಿಯವರು ಎಂತಹ ಆಶ್ವಾಸನೆಗಳನ್ನು, ಒಪ್ಪಿಗೆಗಳನ್ನು ನೀಡಿದ್ದಾರೆ ಎಂಬ ಬಗ್ಗೆ ದೇಶವನ್ನು ಸಂಪೂರ್ಣವಾಗಿ ಕತ್ತಲಲ್ಲಿ ಇಡಲಾಗಿದೆ.

ಈ ಸರಕಾರದ ಲೋಪಗಳಿಂದಾಗಿ ದೇಶದ ಭದ್ರತೆಗೆ ಇಂತಹ ಗಂಭೀರ ಬೆದರಿಕೆ ಬರುವಂತಾಯಿತು, ಅದಕ್ಕೆ ದೇಶ ಭಾರಿ ಬೆಲೆ ತೆರುವಂತಾಯಿತು. ಈ ಸರಕಾರ ದೇಶದ ಭದ್ರತೆಯನ್ನೇ ಪಣಕ್ಕಿಟ್ಟಿದೆ ಎಂಬುದು ಸ್ಪಷ್ಟ. ಈ ಗಂಭೀರ ಲೋಪಗಳನ್ನು, ವಿಫಲತೆಗಳನ್ನು ಮುಚ್ಚಿ ಹಾಕುವ ಪ್ರಯತ್ನಗಳೇ ಈ ತನಿಖೆಗಳು ಅಥವಾ 'ವಿಮರ್ಶೆ'ಗಳು.

ಈ ಹಿನ್ನೆಲೆಯಲ್ಲಿ ಈ ವೇಳೆಗೆ ನವದೆಹಲಿಯಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಕೇಂದ್ರ ಸಮಿತಿ ತಕ್ಷಣವೇ ರಾಜ್ಯಸಭೆಯ ಅಧಿವೇಶನವನ್ನು ಕರೆಯಬೇಕು. ಅಲ್ಲಿ ಈ ಎಲ್ಲಾ ವಿಷಯಗಳನ್ನು ಚರ್ಚಿಸಬೇಕು ಎಂದು ಮತ್ತೆ ಆಗ್ರಹಪಡಿಸಿದೆ. ಚುನಾಯಿತ ಲೋಕಸಭೆಯ ವಿಶ್ವಾಸ ಕಳಕೊಂಡ ಒಂದು ಸರಕಾರ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಬುಡಮೇಲು ಮಾಡಲು ಖಂಡಿತಾ ಬಿಡಬಾರದು ಎಂದು ಅದು ಹೇಳಿದೆ.

...ದ ವಿಫಲತೆಯೇ ...ದ ವಿಫಲತೆಯೇ?

...ಹೋಗಿರುತ್ತದೆ ಎನ್ನುತಾರೆ ಬಿ.ಎಸ್.ಎಫ್. ಮಹಾನಿರ್ದೇಶಕ ಕೆ.ವಿಜಯ ಕುಮಾರ್.

- ಈ ವರ್ಷದ ಆರಂಭದಲ್ಲಿ '15 ಕೋರ್' ಎಂಬ ನಮ್ಮ ಸೇನಾತಂಡದಲ್ಲಿ ಪಾಕಿಸ್ತಾನದೊಂದಿಗೆ ಸ್ಥಳೀಯ ಘರ್ಷಣೆಯ ಸಾಧ್ಯತೆಯ ಬಗ್ಗೆ ಚರ್ಚೆ ನಡೆದಿತ್ತು. ಜನವರಿ 11 ರಂದು ಮೇಜರ್ ಜನರಲ್ ಎ.ಎಸ್.ಸಿ.ಹೋಟಾ 'ನಿಯಂತ್ರಣಾ ರೇಖೆಯುದ್ದಕ್ಕೂ ನಮ್ಮ ಠಾಣೆಗಳನ್ನು ವಶ ಪಡಿಸಿಕೊಳ್ಳಲು ಪಾಕಿಸ್ತಾನ ಪ್ರಯತ್ನಿಸಬಹುದು ಎಂಬುದನ್ನು ತಳ್ಳಿ ಹಾಕಲಾಗದು" ಎಂದಿದ್ದರು.
- ವಿಮಾನ ಪಡೆ ನಿಯಂತ್ರಣ ರೇಖೆಯುದ್ದಕ್ಕೆ ಸಾಮಾನ್ಯವಾಗಿ ನಡೆಸುವ ಗುಪ್ತ ಹಾರಾಟಗಳನ್ನು ಜನವರಿ-ಏಪ್ರಿಲ್ ತಿಂಗಳಲ್ಲಿ ನಡೆಸಲಿಲ್ಲ. ಇದು ಒಂದು ವಿಚಿತ್ರ ಸಂಗತಿ.
- 1998 ರಲ್ಲಿ ಪಾಕಿಸ್ತಾನ ಬ್ರಸೆಲ್ಸ್‌ನ ಒಂದು ಕಂಪನಿಯಿಂದ 50000 ಹಿಮ ಬೂಟುಗಳನ್ನು ಖರೀದಿಸಿತ್ತು. ಅಲ್ಲಿದ್ದ ಆರ್.ಎ.ಡಬ್ಲ್ಯು. ವ್ಯಕ್ತಿಗೆ ಇದು ತಿಳಿಯಲೇ ಇಲ್ಲ. ಭಾರತ ಒಂದು ವಾರದ ನಂತರ ಈ ಬೂಟುಗಳಿಗೆ ಆರ್ಡರ್ ಕೊಡಲು ಹೋದಾಗ ದಾಸ್ತಾನು ತೀರಿಹೋಗಿದೆ ಎಂದು ಹೇಳಲಾಯಿತು.
- ಮಾರ್ಚ್ ತಿಂಗಳಿಂದಲೇ ಪಾಕಿಸ್ತಾನಗಳ ರಾಜಧಾನಿ ಇಸ್ಲಾಮಬಾದಿನ ಉರ್ದು ಪತ್ರಿಕೆಗಳಲ್ಲಿ ಕಾರ್ಗಿಲ್‌ನಲ್ಲಿ ಅತಿಕ್ರಮಣದ ಸುದ್ದಿಗಳು ಕಾರ್ಗಿಲ್‌ನಲ್ಲಿನ ವಿಜಯಗಳು ಎಂಬ ಚಿತ್ರಣದೊಂದಿಗೆ ಪ್ರಕಟವಾಗುತ್ತಿದ್ದವು. ಅಲ್ಲಿರುವ ನಮ್ಮ ಗುಪ್ತಚರ ಸಂಸ್ಥೆ ಆರ್.ಎ.ಡಬ್ಲ್ಯು. ನ ಮಂದಿ ಇವುಗಳನ್ನು ಗಮನಿಸಿದಂತಿಲ್ಲ.
- ಐ.ಬಿ. ಮುಖ್ಯಸ್ಥ ಶ್ಯಾಮಲ್ ದತ್ತಾ ಕಳೆದ ವರ್ಷ ಸೆಪ್ಟೆಂಬರ್-ಅಕ್ಟೋಬರ್‌ನಲ್ಲಿ ಕಾರ್ಗಿಲ್‌ನಲ್ಲಿ ಸಂಭವಿಸಬಹುದಾದ ಗಲಭೆಗಳ ಬಗ್ಗೆ ಎಚ್ಚರಿಕೆ ನೀಡಿದ್ದರು. ಈ ಸೂಕ್ಷ್ಮ ಮಾಹಿತಿಯನ್ನು ಗಮನಕ್ಕೆ ತಗೊಳ್ಳಲಿಲ್ಲ.
- ಲೆಹ್‌ನಲ್ಲಿರುವ ಸೇನೆಯ '3 ಇನ್‌ಫೆಂಟ್ರಿ' ವಿಭಾಗಕ್ಕೆ ಕಾರ್ಗಿಲ್‌ನ ಉಸ್ತುವಾರಿಯ ಜವಾಬ್ದಾರಿಯಿತ್ತು. 160 ಕಿ.ಮಿ. ದೂರದ ನಿಯಂತ್ರಣರೇಖೆಯನ್ನು ಕಾಯಲು ಸಾಮಾನ್ಯವಾಗಿ 3 ಬ್ರಿಗೇಡ್‌ಗಳು (9000 ಸೈನಿಕರು) ಇಲ್ಲಿರುತ್ತವೆ. ಆದರೆ ಈ ಬಾರಿ ಒಂದು ಬ್ರಿಗೇಡ್ ಮಾತ್ರ ಇತ್ತು. ಉಳಿದವನ್ನು ಕಾಶ್ಮೀರ ಕಣಿವೆಯತ್ತ ಕಳಿಸಲಾಯಿತು.
- 'ಲಾಹೋರ್ ಹುಮ್ಮಸ್ಸಿ'ನಿಂದ ವಿಚಲಿತಗೊಂಡು ಕಾರ್ಗಿಲ್‌ನ ಜಾಗರೂಕತೆಯನ್ನು ಸಡಿಲಗೊಳಿಸಲಾಯಿತು. ನಿಯಂತ್ರಣ ರೇಖೆಯುದ್ದಕ್ಕೆ ಪಾಕಿಸ್ತಾನಿಗಳ ಚಲನವಲನ ಹೆಚ್ಚಿರುವ, ಬಂಕರ್‌ಗಳನ್ನು ನಿರ್ಮಿಸುತ್ತಿರುವ ಗುಪ್ತಚರ ವರದಿಗಳನ್ನು ತಳ್ಳಿ ಹಾಕಿತು.
- ಒಂದು ಭದ್ರತಾ ಧೋರಣೆಯಿಲ್ಲದೆ ದಿಲ್ಲಿಯಲ್ಲಿ ಎಚ್ಚರಿಕೆಯ ಸಂಕೇತಗಳನ್ನು ಕ್ರೋಢೀಕರಿಸಿ ವಿಶ್ಲೇಷಿಸಲಿಲ್ಲ.


ವಾಜಪೇಯಿ ಸರಕಾರದ ಬಗ್ಗೆ ವಿರೋಧವೇನೂ ಇಲ್ಲದ 'ಔಟ್‌ಲುಕ್' ಪತ್ರಿಕೆಯಲ್ಲಿ ಪ್ರಕಟವಾಗಿರುವ ಅಂಶಗಳಿವು. ಇದನ್ನು ಪರಿಶೀಲಿಸಿದಾಗ ವಾಜಪೇಯಿ ಸರಕಾರ ಪೋಖ್ರಾನ್ ಸ್ಫೋಟದ ಹಿನ್ನೆಲೆಯಲ್ಲಿ, ನಂತರದ ಲಾಹೋರ್ ಬಸ್ ಪ್ರಯಾಣದ ಹಿನ್ನೆಲೆಯಲ್ಲಿ ಮೈಮರೆತಿತ್ತು ಎಂಬ ಸಂದೇಹ ಬರುತ್ತದಲ್ಲವೇ?

ಕಾರ್ಗಿಲ್‌ನ ಬೆಳವಣಿಗೆಗಳ ಕಾರಣ ನಮ್ಮ ಗುಪ್ತಚರ ವಿಭಾಗಗಳಿಂದ ಸರಿಯಾದ ಸಮಯದಲ್ಲಿ ಸರಿಯಾದ ಮಾಹಿತಿ ದೊರೆಯದಿರುವುದೇ ಕಾರಣ ಎಂಬುದೊಂದು ಆರಂಭದಿಂದ ಕೇಳಿಬರುತ್ತಿರುವ ಮಾತು. ಆದರೆ ಕಳೆದ ಅಕ್ಟೋಬರ್ ತಿಂಗಳಿಂದಲೇ ಇಂತಹ ಮಾಹಿತಿಗಳು ಮಿಲಿಟರಿ ನಾಯಕತ್ವಕ್ಕೆ ಮತ್ತು ರಾಜಕೀಯ ನಾಯಕತ್ವಕ್ಕೆ ಸಿಕ್ಕಿದ್ದವು. ಆದರೂ ಅವರು ಪೋಖ್ರಾನ್-II ಮತ್ತು ಲಾಹೋರ್ ಬಸ್ ಪ್ರಯಾಣದ ಗುಂಗಿನಲ್ಲಿ ಇದನ್ನು ನಿರ್ಲಕ್ಷಿಸಿದರು ಎಂಬುದು ಈಗ ಕೇಳಿಬರುತ್ತಿರುವ ಮಾತು.

ಕಾರ್ಗಿಲ್ ವಲಯದಲ್ಲಿ ಕಾರ್ಯನಿರತವಾಗಿರುವ ಸೇನಾಪಡೆಯ ಹೆಸರು '121 ಬ್ರಿಗೇಡ್'. ಬ್ರಿಗೇಡಿಯರ್ ಸುರಿಂದರ್ ಸಿಂಗ್ ಇದರ ಸೇನಾಧಿಪತಿ. ಆಗಸ್ಟ್ 98 ರಿಂದ ಮಾರ್ಚ್ 99 ರ ನಡುವೆ ಇವರು ತನ್ನ ಮೇಲಧಿಕಾರಿಗಳಿಗೆ, ಸೇನಾಧಿಪತಿಗೆ, ರಕ್ಷಣಾಮಂತ್ರಿಗಳಿಗೆ ಕನಿಷ್ಟ ಆರು ವರದಿಗಳನ್ನು ಕಳಿಸಿದ್ದರು ಎಂದು 'ಔಟ್‌ಲುಕ್' ಪತ್ರಿಕೆ(ಆಗಸ್ಟ್ 2) ಯ ನಿತಿನ್ ಗೋಖಲೆ ಹೇಳುತ್ತಾರೆ.

- *ಆಗಸ್ಟ್ 98 ರಲ್ಲಿ ಪಾಕಿಸ್ತಾನಿ ಶೆಲ್‌ದಾಳಿ ಹೆಚ್ಚಾದಾಗ ನಿಯಂತ್ರಣ ರೇಖೆಯಾಚೆಯಿಂದ ಬೆದರಿಕೆಗಳ ಬಗ್ಗೆ ಬ್ರಿಗೇಡಿಯರ್ ಸುರಿಂದರ್‌ಸಿಂಗ್ ತನ್ನ ಮೇಲಧಿಕಾರಿ ಮೇಜರ್ ಜನರಲ್ ವಿ.ಎಸ್.ಬುದ್ವಾರ್‌ರವರಿಗೆ ಒಂದು ವಿವರವಾದ ಟಿಪ್ಪಣಿ ಕಳಿಸಿದರು.*
- *ಆಗಸ್ಟ್ 25 ರಂದು ಅದನ್ನು ಸೇನಾಧಿಪತಿ ಜನರಲ್ ವಿ.ಪಿ.ಮಲಿಕ್‌ರಿಗೂ ಕಳಿಸಲಾಯಿತು. ಅವರು ಏನು ಕ್ರಮ ಕೈಗೊಂಡರೋ ತಿಳಿಯಲಿಲ್ಲ. ಕಾರ್ಗಿಲ್‌ನಲ್ಲಂತೂ ಗಸ್ತು ಕಾರ್ಯಾಚರಣೆ ವಿಸ್ತರಿಸಲು ಏನೂ ಆದೇಶ, ನೆರವು ಬರಲಿಲ್ಲ.*
- *ಅಕ್ಟೋಬರ್ 98 - ಬೆಟ್ಟಗಳಲ್ಲಿ ಕಾವಲು ಕ್ರಮಗಳನ್ನು ಹೆಚ್ಚಿಸುವ ಅಗತ್ಯವಿದೆ ಎಂದು ಮೇಜರ್ ಜನರಲ್ ಬುದ್ವಾರ್‌ರಿಗೆ ಇನ್ನೊಂದು ಟಿಪ್ಪಣಿ ಹೋಯಿತು. ಆದರೆ ಅದಕ್ಕೆ ಅನುಮತಿ ಸಿಗಲಿಲ್ಲ.*
- *ನವೆಂಬರ್ 98 - ಬ್ರಿಗೇಡಿಯರ್ ಸುರಿಂದರ್ ಸಿಂಗ್ ಮತ್ತೊಮ್ಮೆ ಜನರಲ್ ಮಲಿಕ್‌ರಿಗೆ ಪತ್ರ ಬರೆದರು. ಯಾವುದೇ ಕ್ರಮ ಕೈಗೊಂಡಂತೆ ಕಾಣಲಿಲ್ಲ. ಇನ್ನಷ್ಟು ಗಸ್ತು ಕ್ರಮಗಳು ಬೇಕೆಂಬ ಕೇಳಿಕೆಗಳಿಗೆ ಉತ್ತರವಿಲ್ಲ.*
- *ಮಾರ್ಚ್ 99 - ಮತ್ತೆ ಹೆಚ್ಚಿನ ಗಸ್ತು ಕ್ರಮಗಳಿಗೆ ಕೇಳಿಕೆ. ಈಗಲೂ ಉತ್ತರವಿಲ್ಲ. ಬದಲಾಗಿ ಕಾರ್ಗಿಲ್-ಬತಾಲಿಕ್‌ನಲ್ಲಿದ್ದ ಒಂದು ಬಟಾಲಿಯನ್ನನ್ನು ಬೇರೆಡೆಗೆ ಕಳಿಸಲಾಯಿತು.*
- *ಮಿಲಿಟರಿ ಗುಪ್ತಚರ ನಿರ್ದೇಶನಾಲಯದ ಕೆಳಗೆ ಕೆಲಸ ಮಾಡುವ ಐ.ಎಫ್.ಎಸ್.ಯು. ಹಾಗೂ ಎಲ್.ಯು. ಈ ಎರಡು ಘಟಕಗಳಿಂದ ಪ್ರತ್ಯೇಕವಾಗಿ ವರದಿಗಳು ಹೋದವು - ಒಂದಂತೂ ನೇರವಾಗಿ ಸೇನಾಧಿಪತಿಗಳಿಗೇ ಹೋಯಿತು. ಆದರೂ ಏನೂ ಕ್ರಮವಿಲ್ಲ.*
- *ಮಾರ್ಚ್ 99 - ಸೇನಾ ವಿಭಾಗ ಮಟ್ಟದಲ್ಲಿ ಯುದ್ಧ ತಂತ್ರಗಳ ಬಗ್ಗೆ ಚರ್ಚೆ ನಡೆದಾಗ ಬ್ರಿಗೇಡಿಯರ್ ಸಿಂಗ್‌ರ ಟಿಪ್ಪಣಿಗಳನ್ನು ಗಮನಕ್ಕೇ ತಗೊಳ್ಳಲಿಲ್ಲ.*
- *ಮೇ 99 ರ ಅಂತ್ಯದ ವೇಳೆಗೆ ಕೊನೆಗೂ ಕಾರ್ಯಾಚರಣೆ ಆರಂಭವಾಯಿತು. ಜೂನ್ 99 - ಬ್ರಿಗೇಡಿಯರ್ ಸುರಿಂದರ್ ಸಿಂಗನನ್ನು '121 ಬಿಗೇಡ್'ನ ಸೇನಾಪತಿ ಸ್ಥಾನದಿಂದ ವರ್ಗ ಮಾಡಲಾಯಿತು. ಜುಲೈ ತಿಂಗಳಲ್ಲಿ ಸಿಕಂದರಾಬಾದ್‌ಗೆ ಆಂಧ್ರಪ್ರದೇಶದ ಸಬ್‌ಏರಿಯಾಕ್ಕೆ ಕಳಿಸಲಾಯಿತು. ಈಗ ಸೇನೆಯ 23ನೇ ವಿಭಾಗದ ಉಪ ಸೇನಾಪತಿಯಾಗಿ ರಾಂಚಿಗೆ ವರ್ಗ ಮಾಡಲಾಗಿದೆ!*

ನಿಜ, ಇವನ್ನೆಲ್ಲಾ ಸೇನಾಧಿಪತಿಗಳು, ರಕ್ಷಣಾಮಂತ್ರಿಗಳು ನಿರಾಕರಿಸಿದ್ದಾರೆ. ಆದರೆ ಕಾರ್ಗಿಲ್ ವಲಯದಲ್ಲಿ ಈ ಬೆಳವಣಿಗೆಗಳು ಏಕೆ ನಡೆದವು ಎಂಬ ಬಗ್ಗೆ ಸಮಂಜಸ ಉತ್ತರ ಮಾತ್ರ ಇನ್ನೂ ಅವರಿಂದ ದೊರೆತಿಲ್ಲ.



ಈ ಅಂಕಣದ ಮೊದಲ ಲೇಖನದಲ್ಲಿ ಕಳೆದವಾರ ಧಾರವಾಡ ಉತ್ತರ ಕ್ಷೇತ್ರದ ಕೋಟ್ಯಾಧಿಶ ಎಂ.ಪಿ.ಯ ಬಗ್ಗೆ ಒದಿರುವಿರಿ. ಈ ವಾರ ಕೆನರಾ ಅಥವಾ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಆರಿಸಿ ಹೋದ ಎಂ.ಪಿ.ಯ ಒಂದು ''ಸಾಧನೆ''ಯ ಬಗ್ಗೆ. ಇದು ಒಂದು ಕೇವಲ ಇಣುಕು ನೋಟ ಎಂಬುದನ್ನು ನಮ್ಮ ಒದುಗರು ಗಮನಿಸಬೇಕು.

ಉತ್ತರ ಕನ್ನಡದ ಎಂ. ಪಿ ಕಸ್ಟಡಿಗೆ

ದಂಡತೆತ್ತು ಬಚಾವ್; ಪೊಲೀಸರಿಗೆ ತಂದ ಮುಜುಗರ

ಕರ್ನಾಟಕದಲ್ಲೂ ಕ್ರಿಮಿನಲ್ ಹಿನ್ನೆಲೆ ಇರುವವರು, ಎಂ.ಪಿ., ಎಂ.ಎಲ್.ಎ ಗಳಾಗಿ ಮೆರೆಯುವ ಕಾಲ ಬಂದಿದ್ದು ಬಿ.ಜೆ.ಪಿ ಹೆಚ್ಚು ಪ್ರಾಬಲ್ಯಗಳಿಸಿದ ಮೇಲೆಯೇ ಇರಬೇಕು. ಸಾಮಾನ್ಯವಾಗಿ ಇವರು ನ್ಯಾಯಾಲಯವನ್ನು ಮನ್ನಿಸುವ ಗೋಜಿಗೆ ಹೋಗುವುದಿಲ್ಲ. ಅವರದೇ ಆದ ನ್ಯಾಯ ತೀರ್ಮಾನದ ತರ್ಕ ಇರುತ್ತದೆ. ತಮ್ಮ ಪರವಾಗಿ ತೀರ್ಪಿತ್ತರೆ ಮಾತ್ರ ನಾವು ಮನ್ನಿಸುತ್ತೇವೆ ಎಂದು ಅನೇಕ ಬಾರಿ ಘೋಷಿಸಿರುವುದು ಎಲ್ಲರ ಗಮನಕ್ಕೂ ಬಂದಿದೆ.

ಬಾಬ್ರಿ ಮಸೀದಿಯ ವಿಷಯವನ್ನು ನ್ಯಾಯಾಲಯದ ತೀರ್ಮಾನದಂತೆ ಬಗೆಹರಿಸಿ ಕೊಳ್ಳೋಣ ಎಂದಾಗ ಇವರು ಒಪ್ಪಲಿಲ್ಲ. ಇನ್ನು ಕೆಲವು ಕಡೆ ನ್ಯಾಯಾಂಗ ತನಿಖೆ ಆಗಬೇಕೆಂದು ಸದನದಲ್ಲಿ ಬೊಬ್ಬೆ ಹಾಕುತ್ತಾರೆ. ಮಹಾರಾಷ್ಟ್ರದಲ್ಲಿ ತನಿಖೆ ಆಗಿ ಶ್ರೀಕೃಷ್ಣ ಆಯೋಗದ ತೀರ್ಪುಬಂದಾಗ ಅದನ್ನು ನಾವು ಮನ್ನಿಸುವುದಿಲ್ಲ ಎಂದು ತಿರಸ್ಕರಿಸಿದರು. ಇದು ಬಿ.ಜೆ.ಪಿಯ ನ್ಯಾಯ?

ಉತ್ತರ ಕನ್ನಡದ ಎಂ.ಪಿ. ಯಾರು?

ಉತ್ತರ ಕನ್ನಡದಲ್ಲಿ ಕಳೆದ ಎರಡು ಅಪೂರ್ಣ ಅವಧಿಗೆ ಬಿ.ಜೆ.ಪಿ ಪಕ್ಷದ ಎಂ.ಪಿ.ಯಾಗಿ ಅನಂತಕುಮಾರ ಹೆಗಡೆ ಆಯ್ಕೆಯಾದರು. ಅಲ್ಲಿಯವರೆಗೆ ಉ.ಕ.ದ ಎಂ.ಪಿ ಯೆಂದರೆ ನಿಷ್ಕ್ರಿಯ, ಶುದ್ಧದಂಡಕ, ನಿದ್ರಾಜೀವಿ ಎಂಬ ಹೆಗ್ಗಳಿಕೆ ಇತ್ತು. ಆದರೆ ಅನಂತಕುಮಾರ ಆಯ್ಕೆ ಆಗುವುದರ ಜೊತೆಗೆ ಅವಕ್ಕೆ 'ಕ್ರಿಮಿನಲ್' ಎನ್ನುವ ಇನ್ನೊಂದು ಹೆಗ್ಗಳಿಕೆಯೂ ಸೇರಿಕೊಂಡಿತು.

ಇದಕ್ಕೊಂದು ಉದಾಹರಣೆಯನ್ನಷ್ಟೇ ಕೊಡುತ್ತಿದ್ದೇನೆ. ಈ ಅನಂತಕುಮಾರರ ಪರಿಚಯ ಕರ್ನಾಟಕದ ಕೆಲವರಿಗಾದರೂ ಇದೆ. ಕರ್ನಾಟಕದಲ್ಲಿ ಕೋಮುಕಿಚ್ಚನ್ನು ಹಚ್ಚಿದ ಈದ್ಗಾ ಮೈದಾನದ ಗಲಾಟೆಯ ಸಂದರ್ಭದಲ್ಲಿ ಪೊಲೀಸರ ಕಾವಲು ಭೇದಿಸಿ ಧ್ವಜನೆಡಲು ಮೈದಾನದೊಳಗೆ ನುಗ್ಗಿದ ಖ್ಯಾತಿಯ ಅನಂತಕುಮಾರ ಇವರೆ. ಇದಾದ ನಂತರ ಜಿಲ್ಲೆಯಲ್ಲಿ ಅನೇಕ ಕೊಲೆ, ಕೊಲೆ ಪ್ರಯತ್ನದ ಕೇಸಿನಲ್ಲಿ ಪಾಲ್ಗೊಂಡ ಎಂದು ಪೋಲೀಸ್ ದಾಖಲೆ ಹೇಳುತ್ತದೆ. ಬಹುಶಃ ಎಂ.ಪಿ. ಎನ್ನುವ ಕಾರಣಕ್ಕಾಗಿ ಮಾತ್ರ ಜೈಲಿನಿಂದ ಹೊರಗಿದ್ದಾರೆ ಎಂದು ಜನ ಮಾತನಾಡಿಕೊಳ್ಳುವುದರಲ್ಲಿ ಸತ್ಯ ಇದೆ.

1997ರಲ್ಲಿ ಉತ್ತರ ಕನ್ನಡದ ಹೊನ್ನಾವರ ತಾಲೂಕಿನ ಉಪ್ಪೋಣಿಯ ಗಲಾಟೆಯೊಂದಕ್ಕೆ ಸಂಬಂಧಿಸಿದ ಕೇಸಿನಲ್ಲಿ ಮೂರುವರ್ಷಗಳಿಂದ ಸಕಾರಣವಿಲ್ಲದೆ ಕೋರ್ಟಿಗೆ ಹಾಜರಾಗದ ಅನಂತಕುಮಾರ ಅವರ ಮೇಲೆ ಜಾಮೀನುರಹಿತ ವಾರಂಟ್ ಹೊರಡಿಸಿದರು. ಅನಂತಕುಮಾರ ಕೋರ್ಟಿಗೆ ಬಂದ ತಕ್ಷಣ ನ್ಯಾಯಾಧೀಶರು ಅವರನ್ನು ಕಸ್ಟಡಿಗೆ ಒಪ್ಪಿಸಿ ಪಕ್ಕದ ಕೋಣೆಯಲ್ಲಿ ಕೂಡಿಡಲು ಹೇಳಿದರು. ಸಂಜೆ ಮತ್ತೆ ವಿಚಾರಣೆ ನಡೆಸಿ ಎಚ್ಚರಿಕೆ ಕೊಟ್ಟು 100 ರೂ ದಂಡವಿಧಿಸಿ ಕಳುಹಿಸಿದರು. ಅನೇಕ ಪತ್ರಿಕೆಯಲ್ಲಿ ಇದು ದೊಡ್ಡ ಸುದ್ದಿ ಆಗಲೇ ಇಲ್ಲ. ಈ ವರ್ಷ ಚುನಾವಣಾ ಪೂರ್ವ 'ಸಾಧನೆಯ ಪಟ್ಟಿಯಲ್ಲಿ' ಇದನ್ನು ಸೇರಿಸಿಕೊಳ್ಳಬಹುದು.

> ಉ.ಕ.ದ ಎಂ.ಪಿ ಯೆಂದರೆ ನಿಷ್ಕ್ರಿಯ, ಶುದ್ಧದಂಡಕ, ನಿದ್ರಾಜೀವಿ ಎಂಬ ಹೆಗ್ಗಳಿಕೆ ಇತ್ತು. ಆದರೆ ಅನಂತಕುಮಾರ ಆಯ್ಕೆ ಆಗುವುದರ ಜೊತೆಗೆ ಅವಕ್ಕೆ 'ಕ್ರಿಮಿನಲ್' ಎನ್ನುವ ಇನ್ನೊಂದು

ಯಾವುದು ಈ ಗಲಾಟೆ?

ಹಿಂದೆ ಚುನಾವಣೆಯ ಸಂದರ್ಭದಲ್ಲಿ ಅನಂತಕುಮಾರ ತನ್ನ ಬಾಲಂಗೋಚಿಗಳೊಂದಿಗೆ ಉಪ್ಪೋಣಿಗೆ ಹೋಗಿದ್ದರು. ದೇವಸ್ಥಾನದಲ್ಲಿ ಚುನಾವಣಾ ಭಾಷಣಕ್ಕೆ ಮುಂದಾದಾಗ ಸ್ಥಳೀಯರು ಇವನನ್ನು ತಡೆದರು. ದೇವಸ್ಥಾನ ಒಂದು ಧಾರ್ಮಿಕ ಕ್ಷೇತ್ರವಾಗಿರುವುದರಿಂದ ಇಲ್ಲಿ ಚುನಾವಣಾ ಭಾಷಣ ಮಾಡಬಾರದೆಂದು (ಚುನಾವಣಾ ನೀತಿ ಸಂಹಿತೆ ಕೂಡ ಇದನ್ನೇ ಹೇಳುತ್ತವೆ), ನಿಮ್ಮ ಭಾಷಣದಿಂದ ದೇವಸ್ಥಾನವನ್ನು ಅಮುಕ್ತಗೊಳಿಸಬಾರದೆಂದು ಜನ ಒತ್ತಾಯಿಸಿದರು ಮತ್ತು ದೇವಸ್ಥಾನದ ಒಳಪ್ರವೇಶಿಸಲು ಬಿಡಲಿಲ್ಲ. ಕೊನೆಯಲ್ಲಿ ದೇವರಿಗೆ ಕೈಮುಗಿದು ಬರುವುದಾಗಿ ಒಳಪ್ರವೇಶಿಸಿದ ಅನಂತಕುಮಾರ ಅಲ್ಲೇ ಭಾಷಣ ಬಿಗಿಯಲು ಪ್ರಾರಂಭಿಸಿದರು. ಜನ ಮತ್ತೆ ವಿರೋಧಿಸಿದಾಗ ಬಿ.ಜೆ.ಪಿ ಮತ್ತು ಅಲ್ಲಿಯ ಜನರ ನಡುವೆ ಜಗಳ ಪ್ರಾರಂಭ ಆಗಿ ಹೊಡೆದಾಟಕ್ಕೆ ತಿರುಗಿತು. ಬುದ್ಧಿ ಹೇಳಹೋದವರು ಲತ್ತೆ ತಿಂದರು. ಇದು ಅನಂತಕುಮಾರ ಹೆಗಡೆಯವರ ಎದುರಿನಲ್ಲಿಯೇ ನಡೆದಿರುವುದು ಮತ್ತು ಈ ಜಗಳವನ್ನು ನಿಲ್ಲಿಸಲು ಪ್ರಯತ್ನಿಸದೆ ಹೊಡೆದಾಟಕ್ಕೆ ಪ್ರಚೋದನೆ ನೀಡಿದರು (ಈ ರೀತಿಯ ಅನೇಕ ಕೇಸಿದೆ) ಎಂದು ಮೊಕದ್ದಮೆ (ನಂ.1687/97) ದಾಖಲಾಗಿ, ವಿಚಾರಣೆ ನಡೆಯುತ್ತಿದೆ.

ಯಾಕೆ ಈ ಕಸ್ಟಡಿ?

ಹೊನ್ನಾವರದ ನ್ಯಾಯಾಲಯದಲ್ಲಿ ಮೊಕದ್ದಮೆಯ ವಿಚಾರಣೆ ನಡೆಯುತ್ತಿದ್ದು ಸಂಸದರು 21 ಬಾರಿ ಗೈರು ಹಾಜರಾಗಿದ್ದರು. ಕೊನೆಗೆ ಜಾಮೀನುರಹಿತ



ವಾರಂಟನ್ನು ಜಾರಿಮಾಡಿರುವುದರಿಂದ ಇವರು ಯಥಾ ಪ್ರಕಾರ ಸಂಸದನ ಗತ್ತಿನಲ್ಲಿ (ಆಗಲೇ ಮಾಜಿ ಆಗಿದ್ದರೂ) ಕೋರ್ಟಿಗೆ ಬೆಳಿಗ್ಗೆ ಬಂದರೆ ನ್ಯಾಯಾಧೀಶರು ವಿಚಾರಣೆಯನ್ನು ಮಧ್ಯಾಹ್ನ 2 ಗಂಟೆಗೆ ಮುಂದೂಡಿ ಮಾಜಿ ಸಂಸದರನ್ನು ಅಲ್ಲಿಯವರೆಗೆ ಕಸ್ಟಡಿಗೆ ಕೊಟ್ಟು ಪಕ್ಕದ ಕೋಣೆಯಲ್ಲಿ ಕೂಡ್ರಿಸಲು ಪೊಲೀಸರಿಗೆ ಆದೇಶಿಸಿದರು.

ವಾರಂಟ್ ಹಿಂತೆಗೆದುಕೊಳ್ಳುವಂತೆ ವಕೀಲರು ಅರ್ಜಿಕೊಟ್ಟು ಗೋಗರೆದರೂ ಅದು ಪ್ರಯೋಜನ ಆಗಲಿಲ್ಲ. ವರ್ಷಗಟ್ಟಲೆ ಗೈರುಹಾಜರಾದದ್ದಕ್ಕೆ ಸೂಕ್ತ ಕಾರಣ ದಾಖಲೆ ಇರಲಿಲ್ಲ ಎಂದು ವಕೀಲರ ಮನವಿಯನ್ನು ತಿರಸ್ಕರಿಸಿದರು ಮತ್ತು ಆರೋಪಿ ಯಾರೇ ಆಗಲಿ, ಅವರು ಎಂ.ಪಿ. ಯಾಗಲಿ ಅಥವಾ ಜನಸಾಮಾನ್ಯರಾಗಲಿ ಆರೋಪಿ-ಆರೋಪಿಯೇ ನ್ಯಾಯಾಲಯ ಅವರನ್ನು ಸಮಾನವಾಗಿ ನೋಡುತ್ತದೆ ಎಂದು ನ್ಯಾಯಾದೀಶರು ಎಚ್ಚರಿಕೆ ಕೊಟ್ಟರು. ಮಾಜಿ ಸಂಸದರು ನಮ್ಮ ಕೋರ್ಟಿಗೆ ಬಂದಿದ್ದಾರೆಂದು ಪುಳಕಗೊಂಡು ಅವರನ್ನು ಬಚಾವು ಮಾಡಲು ಓಡಾಡುತ್ತಿದ್ದ ವಕೀಲರಿಗೂ ಪರೋಕ್ಷವಾಗಿ ಇದು ಎಚ್ಚರಿಕೆಯೇ ಆಗಿತ್ತು.

ನೂರು ರೂಪಾಯಿದಂಡ

ಮತ್ತೆ ಮೂರು ಗಂಟೆಗೆ ವಿಚಾರಣೆಯನ್ನು ಎತ್ತಿಕೊಂಡ ನ್ಯಾಯಾಧೀಶರು ಆಗಿರುವ ಪ್ರಮಾದಕ್ಕೆ ಮತ್ತೊಮ್ಮೆ ಎಚ್ಚರಿಸಿ, ಮತ್ತೆ ಹೀಗಾಗದಂತೆ ಗಮನ ಹರಿಸಲು ಹೇಳಿದರು. ಅದರೊಟ್ಟಿಗೆ 100 ರೂಪಾಯಿ ದಂಡ ವಿಧಿಸಿದರು. ಕೊನೆಗೂ ಅನಂತಕುಮಾರ ಅಪರಾಧಿಯಾಗಿ ದಂಡ ತುಂಬಿ ಅಲ್ಲಿಂದ ಹೋದರು. ಹೋಗುವಾಗ ಹೀಗಾಗಲು ವಕೀಲರೇ ಕಾರಣ ಎಂದು ತನ್ನ ಸೋಲನ್ನು ಇನ್ನೊಬ್ಬರ ಮೇಲೆ ಹೊರಿಸಿ ಅವಮಾನವನ್ನು ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸಿದರು ಎಂದು ಆ ಸಂದರ್ಭದಲ್ಲಿ ಅಲ್ಲಿದ್ದವರು ಸ್ವಾರಸ್ಯಕರವಾಗಿ ವಿವರಿಸುತ್ತಾರೆ.

ಪೊಲೀಸರ ನ್ಯಾಯ ಪಾಲನೆ

ಜನ ಬೇಸರಗೊಂಡಿದ್ದು ಅನಂತಕುಮಾರ ಅವರಿಗೆ ದಂಡ ಹಾಕಿ ಸಂಜೆಯವರೆಗೆ ಕೋರ್ಟಿನಲ್ಲಿ ನಿಲ್ಲಿಸಿಕೊಂಡರು ಎಂದಲ್ಲ. ಈ ಬಗ್ಗೆ ಅವರಿಗೆ ತುಂಬಾ ಸಂತೋಷ ಆಗಿದೆ ಮತ್ತು ನ್ಯಾಯಾಧಿಶರಾದ ಶ್ರೀ ಪುದ್ದಾರ ಅವರನ್ನು ಬಾಯ್ತುಂಬ ಹೊಗಳುತ್ತಾರೆ. ಆದರೆ ಪೋಲೀಸರು ಅನಂತಕುಮಾರರನ್ನು ಒಬ್ಬ ಸಾಮಾನ್ಯ ಅಪರಾಧಿಯನ್ನಾಗಿ ನೋಡಿಕೊಳ್ಳುವಲ್ಲಿ ವಿಫಲರಾದರು. ಇವರು ರಿಯಾಯತಿ ತೋರಿಸಿದರು ಎಂಬುದು ಇವರ ಬೇಸರಕ್ಕೆ ಕಾರಣ. ಮಧ್ಯಾಹ್ನ ಊಟವನ್ನು ಅಲ್ಲೇ ತಂದು ಕೊಡುವುದರ ಬದಲಾಗಿ ಯಾರೋ ಗೆಳೆಯರ ಮನೆಗೆ ಕರೆದುಕೊಂಡು ಹೋದಂತಿತ್ತು ಎನ್ನುತ್ತಾರೆ ಜನ. ನ್ಯಾಯಾಧೀಶರು ನ್ಯಾಯವನ್ನು ಯಥೋಚಿತವಾಗಿ ಕೊಟ್ಟರೂ ಪೊಲೀಸರು ಅದನ್ನು ಜಾರಿ ಮಾಡುವಲ್ಲಿ ಮುಜುಗರ ಪಟ್ಟಿದ್ದು ಇವರಿಗೆ ತೀರಾ ಬೇಸರ ತಂದಿದೆ.

ಇಂಥದ್ದೆಲ್ಲಾ ಗೊತ್ತಿಲ್ಲದೆ ಹಿಂದಿನ ಚುನಾವಣೆಯಲ್ಲಿ ಮೋಸ ಹೋದೆವು ಎಂಬುದು ಅನೇಕರ ಪ್ರಾಮಾಣಿಕ ಅನಿಸಿಕೆ.

ವರದಿಗಾರ

ದೊಡ್ಡಬಳ್ಳಾಪುರದ ಒಂದು ಮಹಿಳಾ ಸಮ್ಮೇಳನ

ಪುಟ 4 ರಿಂದ

ಬಂದರೆ ವೈದ್ಯರಿಲ್ಲ. ಸರ್ಕಾರಿ ಆಸ್ಪತ್ರೆಗಳು ಇದ್ದು ಇಲ್ಲದಂತೆ.

ಇವುಗಳ ಮೇಲೆ ವರದಕ್ಷಿಣೆ, ಅತ್ಯಾಚಾರ, ಲೈಂಗಿಕ ಕಿರುಕುಳ, ಹಿಂಸೆ, ಹೊಡೆಯುವುದು ಬಡಿಯುವುದು. ಮದುವೆಯಾದ ಶಾಸ್ತ್ರ ಮುಗಿಸಿ ಮರುಮದುವೆ ಯಾಗುವುದು. ಹೀಗೆ ನಗರಗಳಲ್ಲಷ್ಟೇ ಕೇಳಿಬರುತ್ತಿದ್ದ ಎಲ್ಲ ರೀತಿಯ ಹಿಂಸೆ ಕ್ರೌರ್ಯಗಳು ಟಿ.ವಿ, ಸಿನಿಮಾಗಳೊಂದಿಗೆ ಹಳ್ಳಿಗಳನ್ನೂ ಪ್ರವೇಶಿಸಿವೆ. ನಾನಾತರದ ಚಾನೆಲ್‌ಗಳು ಮಹಿಳೆಯರ ಮೇಲಿನ ಹಿಂಸಾಚಾರಕ್ಕೆ ಚಾಲನೆ ನೀಡುತ್ತಿವೆ. ಈ ವಿಷಯದಲ್ಲಿ ಮಾತ್ರ ಹಳ್ಳಿ- ನಗರವೆಂಬ ಭೇದವಿಲ್ಲ, ಸರಿ-ಸಮಾನ ಪೈಪೋಟಿಯಿದೆ.

ಶಾಲಾ-ಕಾಲೇಜುಗಳಿಗೆ ಮೈಲುಗಟ್ಟಲೆ ನಡೆಯ ಬೇಕಾದ ಪರಿಸ್ಥಿತಿಯುಂಡಾಗಿ ಸಾವಿರಾರು ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಊರಿನ ಶಾಲೆಯಲ್ಲಿನ ಓದಷ್ಟೇ ಹೆಣ್ಣು ಮಕ್ಕಳಿಗೆ ಸಾಕೆನ್ನುವ ವಾದ ಇಂದಿಗೂ ಬಲವಾಗಿಯೇ ಇದೆ. ಅದಕ್ಕೆ ನೂರಾರು ಕಾರಣಗಳೂ ಇವೆ.

ಸರಿಯಾದ ಸಾರಿಗೆ ವ್ಯವಸ್ಥೆಯಿಲ್ಲದೆ, ಹಾಸ್ಟೆಲ್‌ಗಳ, ಶಾಲಾ- ಕಾಲೇಜುಗಳ ಸೌಲಭ್ಯಗಳಿಲ್ಲದೆ ಮನೆಗೆಲಸಕ್ಕೆ ಮುಡುಪಾಗಿರುವ ಹೆಣ್ಣುಮಕ್ಕಳ ಗೋಳು ಯಾರನ್ನು ತಟ್ಟಬೇಕು? ಪ್ರತಿಭೆಯಿದ್ದರೂ ಪುರಸ್ಕಾರವಿಲ್ಲ. ಹಣೆಬರಹದಲ್ಲಿಯೇ ನಂಬಿಕೆ ಇಟ್ಟ ಮಹಿಳೆಯರು ಎಲ್ಲ ಕಷ್ಟಗಳನ್ನು ಉದಾರತೆಯಿಂದ ಸಹಿಸುತ್ತಾ ಬಂದವರು. ಇನ್ನೂ ಹೀಗೆ ಅನುಭವಿಸುತ್ತಲೇ ಜೀವನ ನಡೆಸಬೇಕೇ ಎಂದು ಪ್ರಶ್ನಿಸಿಕೊಂಡರು.

ಸಾಮಾಜಿಕ ಸಮಸ್ಯೆಯೆಂಬ ಅರಿವು

ಪ್ರಥಮ ಬಾರಿಗೆ ಸಂಘಟಿಸಲಾಗಿದ್ದ ದೊಡ್ಡಬಳ್ಳಾಪುರ ತಾಲ್ಲೂಕು ಮಹಿಳಾ ಸಮ್ಮೇಳನದಲ್ಲಿ ಮಹಿಳೆಯ ಸಮಸ್ಯೆ ಮಹಿಳೆಯರದ್ದು ಮಾತ್ರವಲ್ಲ ಸಾಮಾಜಿಕ ಸಮಸ್ಯೆಯೆಂಬ ಅರಿವು ಮೂಡಿಸುವ ಪ್ರಾಮಾಣಿಕ ಪ್ರಯತ್ನವನ್ನು ಸಮ್ಮೇಳನ ಮಾಡಿತು.

ಸರ್ಕಾರಿ ಯೋಜನೆಗಳ ಲಾಭ ಪಡೆಯಲಷ್ಟೇ ಮಹಿಳಾ ಸಂಘ-ಸಂಸ್ಥೆಗಳು ಕೆಲಸ ಮಾಡಿದರೆ ಸಾಲದು ಅಸಮಾನತೆಯಿಂದ ತುಂಬಿರುವ ಸಾಮಾಜಿಕ ವ್ಯವಸ್ಥೆಯನ್ನು ಬದಲು ಮಾಡಲು ಮಹಿಳೆಯರು ಸಂಘಟಿತರಾಗಬೇಕೆನ್ನುವ ಅಭಿಪ್ರಾಯವನ್ನು ನೆರೆದಿದ್ದ ಎಲ್ಲರೂ ಸ್ವಾಗತಿಸಿದರು.


ತಾಲ್ಲೂಕಿನ ಮಹಿಳೆಯರ ಹಾಗೂ ನಾಗರೀಕ ಸಮಸ್ಯೆಗಳನ್ನು ದೀರ್ಘವಾಗಿ ಚರ್ಚಿಸಿದ ನಂತರ ಪ್ರತಿನಿಧಿಗಳೆಲ್ಲರು ಒಕ್ಕೊರಲಿನಿಂದ ಜುಲೈ 30 ಕ್ಕೆ ಪಡಿತರ ಹಾಗೂ ಸೀಮೆಎಣ್ಣೆಯ ನಿಯಮಿತ ಸರಬರಾಜು ಹಾಗೂ ಶೌಚಾಲಯಗಳಿಗಾಗಿ ಆಗ್ರಹಿಸಿ ತಹಸೀಲ್ದಾರ್ ರವರ ಕಛೇರಿಯನ್ನು ಮುತ್ತಿಗೆ ಹಾಕುವ ನಿರ್ಣಯವನ್ನು ಅಂಗೀಕರಿಸಿದರು. ಇದು ಸಮ್ಮೇಳನದಲ್ಲಿ ಹುಟ್ಟಿದ ಹೋರಾಟದ ಕೂಸಿನ ಪ್ರಥಮ ಹೆಜ್ಜೆ.

ಇನ್ನೂ ಹಲವಾರು ಬೇಡಿಕೆಗಳಿಗಾಗಿ ಆಗ್ರಹಿಸಿ ನಿರ್ಣಯಗಳನ್ನು ಕೈಗೊಂಡ ಸಮ್ಮೇಳನವು ಹಂತ ಹಂತವಾಗಿ ಕಾರ್ಯಕ್ರಮಗಳನ್ನು ರೂಪಿಸುವ ನಿರ್ಧಾರವನ್ನು ಪ್ರಕಟಿಸಿತು.

ಬೆರಗುಗೊಳಿಸುವಂತೆ ಕಿಕ್ಕಿರಿದು ಸೇರಿದ್ದ ಸಮ್ಮೇಳನವನ್ನು ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ಸುನಂದಾ ಉದ್ಘಾಟಿಸಿದರು. ಸಮ್ಮೇಳನದಲ್ಲಿ ಅತಿಥಿಗಳಾಗಿ ಸ್ಥಳೀಯ ವಕೀಲರಾದ ಎಂ. ಕೃಷ್ಣಮೂರ್ತಿ, ಚಂದ್ರತೇಜಸ್ವಿ, ರೇಣುಕಾರಾಧ್ಯ, ಜೆ.ಎಂ.ಎಸ್. ನ ರಾಜ್ಯ ಸಹಕಾರ್ಯದರ್ಶಿ ಎನ್.ಪ್ರಭಾ, ಅಂಗನವಾಡಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ನಾಗಮಣಿ ಮುಂತಾದವರು ಭಾಗವಹಿಸಿದ್ದರು.

ಇಂದಿರಾ ಕಾರ್ಯದರ್ಶಿಯಾಗಿ ಹಾಗೂ ಮಂಜುಳ ಅಧ್ಯಕ್ಷೆಯಾಗಿರುವ 29 ಜನರ ತಾಲ್ಲೂಕು ಸಮಿತಿಯನ್ನು ಸಮ್ಮೇಳನ ಸರ್ವಾನುಮತದಿಂದ ಆಯ್ಕೆ ಮಾಡಿತು. 'ಗೆಲುವು ನಮ್ಮದು' ಸ್ಫೂರ್ತಿದಾಯಕ ಹಾಡಿನೊಂದಿಗೆ ಸಮ್ಮೇಳನ ಮುಕ್ತಾಯಗೊಂಡಿತು.

ಬಾಗೇಪಲ್ಲಿಯಲ್ಲಿ ಜನಪರ ಅಭಿವೃದ್ಧಿ



ಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಆರಿಸಿಬಂದ ಸಿಪಿಐ(ಎಂ) ಶಾಸಕರು ಇತರ ಶಾಸಕರಂತಲ್ಲದೆ ಕ್ಷಣಿಕವಾಗಿ ಹಿಂದುಳಿದ ಕ್ಷೇತ್ರದಲ್ಲಿ ಶಾಲಾ-ಕಾಲೇಜು ಆರಂಭಿಸಲು, ಸಂಪರ್ಕಕ್ಕಾಗಿ ಸ್ತೆಗಳು-ಸೇತುವೆಗಳು, ಭೂಹೀನರಿಗೆ ಜಮೀನು ಒದಗಿಸಲು ಪ್ರಯತ್ನಿಸಿ ಸಫಲರಾದ ಬಗ್ಗೆ ಳೆದ ಸಂಚಿಕೆಯಲ್ಲಿ ಓದಿರುವಿರಿ. ಬಾಗೇಪಲ್ಲಿಯಲ್ಲಿ ಜನಪರ ಅಭಿವೃದ್ಧಿಗೆ ನಡೆದ ಇತರ ಲವು ಪ್ರಯತ್ನಗಳ ಬಗ್ಗೆ ಆ ವರದಿಯ ಮುಂದುವರಿದ ಭಾಗವನ್ನು ಇಲ್ಲಿ ಓದಿ

ವರದಿ: ಭಾಸ್ಕರ ರೆಡ್ಡಿ

ಾಗೇಪಲ್ಲಿಗೊಂದು ನಿ ವಿಧಾನಸೌಧ

ಮಿನಿ ವಿಧಾನಸೌದೆಯನ್ನು ಪಡೆಯುವುದಕ್ಕೆ ಒಂದು ೋರಾಟವನ್ನೇ ಮಾಡಿದರು. ಅದು ತಾಲ್ಲೂಕಿನಾದ್ಯಂತ ಶಂಸನಾರ್ಹವಾಯಿತು. ಹಳೇ ಕಾಲದ ಕಟ್ಟಡ ಎಂದು ೀಳುವುದೊ ಹೇಳಲಿಕ್ಕಿಲ್ಲ. ಮಳೆ ಬಂದರೆ ಸೋರುವ ಳ್ಳಿಯ ಕಟ್ಟಡದಲ್ಲ, ತಾಲ್ಲೂಕ ಕಛೇರಿ, ಟ್ರಜರಿ ಕಛೇರಿ, ಬ್‌ರಿಜಿಸ್ಟ್ರಾರ್ ಕಛೇರಿ, ಸರ್ವೇ ಕಛೇರಿ, ಪೋಲೀಸ್ ೇಷನ್ ಇವೆಲ್ಲವುಗಳು ಒಂದೇ ಕಟ್ಟಡದಲ್ಲಿ ಅತ್ಯಂತ ಂದಾದ ಕೊಠಡಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪರಿಸ್ಥಿತಿ ಂದೊದಗಿದೆ. ಎಂದೋ ಮಾಡಬೇಕಾಗಿದ್ದ ಕೆಲಸ ಇದು. ವರ್ಷಗಳ ಕಾಂಗ್ರೆಸ್ ಶಾಸಕರು ಮಜಾ ಮಾಡುವುದಕ್ಕೆ ಮಯವನ್ನು ಮೀಸಲಿಟ್ಟ ಪರಿಣಾಮವಾಗಿ ಇವುಗಳ ೆ ಗಮನ ಹರಿಸಲು ಸಾಧ್ಯವಾಗಿಲ್ಲ. ಆ ಕಟ್ಟಡದಲ್ಲಿ ಲಸ ಮಾಡುವವರಿಂದ ರೊಕ್ಕ ವಸೂಲು ಬಿಟ್ಟರೆ, ವರು ಕರ್ತವ್ಯ ನಿರ್ವಹಿಸುತ್ತಿರುವ ಕಟ್ಟಡ ಅದರ ಸಾಧಕ ಬಾಧಕಗಳನ್ನು ನೋಡಲಿಲ್ಲ. ಕೇವಲ ಅವರಿಂದ ಕೆಲಸ ಾಡಿಸುವುದೊಂದೇ ಅಲ್ಲಿ ಮುಖ್ಯ. ಅವರ ಸೌಲಭ್ಯಗಳನ್ನು ೋಡಬೇಕಾದ ಅವಶ್ಯಕತೆ ಇದೆ ಎಂದು ಂಡುಕೊಂಡವರು ಸಿ.ಪಿ.ಐ(ಎಂ) ಶಾಸಕರಾದ ಕಾ॥ .ವಿ.ಎಸ್. ಮಾತ್ರ. ಅದಕ್ಕಾಗಿ 50 ಲಕ್ಷ ರೂ.ಗಳ ಸ್ಟಿಮೇಟ್ ಒಂದನ್ನು ಮಾಡಿಸಿದರು. ಹಣಕಾಸು ಂತ್ರಿಗಳಿಂದ ಅನುಮೋದನೆ ಗಿಟ್ಟಿಸಿಕೊಂಡರು. ಆದರೂ ಂಬಂಧ ಪಟ್ಟ ಸಚಿವಾಲಯದ ಅನುಮೋದನೆ ೂರೆಯಬೇಕಿತ್ತು. ಆದರೆ, ಅಲ್ಲಿ ಫೈಲ್ ಸಿಕ್ಕಿ ಾಕಿಕೊಂಡಿತು. ತುಂಬಾ ಪ್ರಯತ್ನ ಮಾಡಿದರು. ಆದರೂ ಂಬಂದಪಟ್ಟ ಸಚಿವರು ಅದನ್ನು ವಯಕ್ತಿಕವಾಗಿ ತೆಗೆದು ಂಡರು. ಆದರೆ, ಮುಖ್ಯ ಮಂತ್ರಿಯವರ ತನಕ ೋಗಬೇಕಾಗಿ ಬಂತು. ಮುಖ್ಯಮಂತ್ರಿಯವರು ತುಂಬಾ ಹಕಾರ ನೀಡಿದರು. ಆದರೂ ಪ್ರಯೋಜನವಾಗಲಿಲ್ಲ. ಡೆಗೆ ಅನಿವಾರ್ಯವಾಗಿ ವಿಧಾನಸಭೆಯಲ್ಲಿ ಹಕ್ಕುಚ್ಯುತಿ ಂಡಣೆಯಿಂದ ಆ ಕಡತ ಈಚೆಗೆ ಬಂದು ಕಡೆಗೆ ುಖ್ಯಮಂತ್ರಿಯವರಿಂದಲೇ ಅನುಮೋದಿಸಲ್ಪಟ್ಟ ಾತುಗಳು ಹೊರಬಿದ್ದವು. ಕಡೆಗೆ ಮೇ 2 ರಂದು ದ್ದೂರಿಯಾಗಿ ಉಪ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯರವರಿಂದ ಶಂಕುಸ್ಥಾಪನಾ ಕಾರ್ಯಕ್ರಮ ೊಂದಿಗೆ ಚಾಲನೆಯಾಯಿತು. ಇಷ್ಟು ದೊಡ್ಡ ಹೋರಾಟ ಾಡಿ ಮಿನಿ ವಿಧಾನಸೌದವನ್ನು ಪಡೆಯುವುದು ಂಗ್ರೆಸ್ಸಿನ ಯಾವುದೇ ಶಾಸಕರಿಂದ ಸಾಧ್ಯವಿಲ್ಲ ಎಂದು ಾರ್ವಜನಿಕರಲ್ಲಿ ಚರ್ಚೆಯಾಗಿದ್ದು ವಿಶೇಷವಾಗಿತ್ತು.

ೀರಾವರಿ ಅಭಿವೃದ್ಧಿಗೆ ಸಾಕಷ್ಟು ಪ್ರಯತ್ನ

ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕುಗಳಿಗೆ ನಿರಂತರವಾಗಿ ಹರಿಯುವ ನದಿ ನಾಲೆಗಳಿಲ್ಲ ಅಥವಾ ತಿ ಹೆಚ್ಚಿನ ಮಳೆ ಬೀಳುವ ಪ್ರದೇಶಗಳೂ ಅಲ್ಲ. ನೂರಾರು ರ್ಷಗಳ ಹಿಂದೆ ಕಟ್ಟಿದ ಕೆರೆಗಳು ಬಿಟ್ಟರೆ ರೈತರು ಇಂದು ಆಳವೆ ಬಾವಿಗಳಿಗೆ ಆಶ್ರಯಿಸಬೇಕಾಗಿ ಬಂದಿದೆ. ಆದರಿಂದ ಬಾರಿ ನೀರಾವರಿಗೆ ಪ್ರಯತ್ನ ಪಡಬೇಕಾಗಿಲ್ಲ. ಸಣ್ಣ ನೀರಾವರಿಗೆ ಅತಿ ಹೆಚ್ಚಿನ ಗಮನವನ್ನು ಕೊಡಬೇಕೆಂದು ಸರ್ಕಾರದ ಮೇಲೆ ನಿರಂತರವಾಗಿ ಒತ್ತಾಯ ಮಾಡುತ್ತಾ ಬಂದಿರುವ ಏಕೈಕ ಶಾಸಕರು ಸಿ.ಪಿ.ಐ(ಎಂ) ಶಾಸಕರು. ಇಡೀ ರಾಜ್ಯದಲ್ಲಿಯೇ ಅತಿ ಹೆಚ್ಚಿನ ಕೃಷಿ ಸಣ್ಣ ನೀರಾವರಿಯ ಮೇಲೆ ಅವಲಂಬಿತವಾಗಿರುವಾಗ ಸರ್ಕಾರ ಅದನ್ನು ಕಡೆಗಣಿಸಿ ಕೇವಲ ಬಾರಿ ನೀರಾವರಿಯ ಬಗ್ಗೆ ಮಾತ್ರ ಹೆಚ್ಚು ಒತ್ತು ನೀಡುತ್ತಿರುವುದು ದುರದೃಷ್ಟಕರ ಎಂದು ವಿಧಾನ ಸಭೆಯಲ್ಲಿ ಎಷ್ಟೋ ಬಾರಿ ಗುಡುಗಿದ್ದಾರೆ. ಅದರಂತೆ ಕ್ಷೇತ್ರದಲ್ಲಿಯೂ ಅದಕ್ಕಾಗಿ ಹಲವ ಪ್ರಯತ್ನಗಳನ್ನು ಮಾಡಿದ್ದಾರೆ.

ಅತ್ಯಂತ ಯಶಸ್ವಿ ಕೆಲಸವೆಂದರೆ, ತಾಲ್ಲೂಕಿನ ಪೂರ್ವ ಭಾಗದಲ್ಲಿರುವ ಚಿಂತಾಮಣಿ ಕ್ಷೇತ್ರಕ್ಕೆ ಅಂಟಿಕೊಂಡಿರುವ ವಂದಯಾನ್ ನದಿಗೆ ಅಡ್ಡಲಾಗಿ ಹೊಸಕೆರೆ ಪ್ರಾರಂಭೋತ್ಸವವನ್ನು ನೆರವೇರಿಸಿ ಇಂದು ಶೇ 75 ಕೆಲಸ ಸುಮಾರು 5 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಈ ಕೆರೆಯಿಂದ ಸುಮಾರು 1000 ಎಕರೆ ಜಮೀನಿಗೆ ನೀರು ಹರಿಯುತ್ತದೆ. ಮಾಮಿಡಿವಾರಲಪಲ್ಲಿ, ಪ್ಯಾಯಿಲೋಲ್ಲಪಲ್ಲಿ, ದಿಗುವ ಗೋಲ್ಲಹಳ್ಳಿ, ಅರಿಗೇವಾರಿಗುಪ್ಪಲ್ಲಿ ಹಳ್ಳಿಗಳ ಜನರ ಪಾಲಿಗೆ ಕೆರೆ ಕಾಮಧೇನುವಾಗಿ ಹೊರ ಹೊಮ್ಮಲಿರುವುದು ಹಳ್ಳಿಗಳ ಜನರ ಹರ್ಷ ಹೇಳತೀರದು. ಚಿಂತಾಮಣಿ ಕ್ಷೇತ್ರದ ಜನತಾದಳದ ಶಾಸಕರು ಹಾಗೂ ಸಚಿವರೂ ಆಗಿರುವ ಕೆ.ಎಂ. ಕೃಷ್ಣಾರೆಡ್ಡಿಯವರು ಈಗಾಗಲೇ ಅಲ್ಲಿ ಅಡಿಗಲ್ಲು ಹಾಕಿ ಹೋಗಿದ್ದರು. ಅದರೇನು ಮಾಡುವುದು. ಕೆಲಸ ಮಾತ್ರ ಮಾಡಲಿಲ್ಲ. ಎಷ್ಟಿಮೇಟು ಏನೂ ಮಾಡದೇ ಯೋಜನೆ ಸರ್ಕಾರದಲ್ಲಿ ಅನುಮೋದನೆ ಆಗದೇ ಓಟಿಗೋಸ್ಕರ ಅಡಿಗಲ್ಲು ಹಾಕಿದರು ಎಂದು ಜನರ ಮಾತಿನಲ್ಲಿ ವ್ಯಕ್ತವಾಗುತ್ತಿದೆ. ಆದರೆ, ಶ್ರೀರಾಮರೆಡ್ಡಿಯವರು ಅಡಿಗಲ್ಲು ಹಾಕಿದ ಒಂದೇ ವರ್ಷದಲ್ಲಿ ಶೇ 75 ಭಾಗ ಮುಗಿಸಿದರು ಎಂದು ಜನರ ಮಾತಿನಲ್ಲಿ ಬರುತ್ತಿದೆ. ಕೇವಲ ನೀರು ಹರಿಯುವುದೊಂದೇ ಉಪಯೋಗವೆಂದಲ್ಲ, ಕೆರೆಯ ಸುತ್ತಲೂ ಸುಮಾರು 2 ಕಿ.ಮೀ ದೂರ ಭೂಮಿಯಲ್ಲಿನ ನೀರಿನ ಮಟ್ಟ ಬೆಳೆಯುವುದರಿಂದ ಸುತ್ತಮುತ್ತಲ ಹಳ್ಳಿಗಳ ರೈತರಿಗೆ ಇದು ವರದಾನವಾಗಿದೆ.

ಬಾಗೇಪಲ್ಲಿಗೆ ಒಂದೇ ಒಂದು ನದಿ ಅದು ಚಿತ್ರಾವತಿ. ಅದರಲ್ಲಿ ನೀರಿಗಿಂತ ಮರಳೇ ಹೆಚ್ಚಾಗಿ ಹರಿಯುತ್ತದೆ. ಆದರೆ ಅಪ್ಪಿತಪ್ಪಿ ಆಗಾಗ ಮಳೆ ಸ್ವಲ್ಪ ಜಾಸ್ತಿ ಆದರೆ, ಆಗ ಸ್ವಲ್ಪ ನೀರು ಹರಿಯುತ್ತದೆ. ಕರ್ನಾಟಕದಲ್ಲಿ 56 ಕಿ.ಮೀ. ಹರಿಯುವ ಚಿತ್ರಾವತಿ ನದಿಗೆ ಅಡ್ಡಲಾಗಿ ಒಂದು ಕೆರೆ ಕಟ್ಟಬೇಕು ಎನ್ನುವ ಆಲೋಚನೆ ಶಾಸಕರಲ್ಲಿ ಹೊಳೆಯಿತು. 56 ಕಿ.ಮೀ. ದೂರದಲ್ಲಿ ಎಲ್ಲೂ ಒಂದು ಕೆರೆ ಅಡ್ಡಲಾಗಿ ಕಟ್ಟಿಲ್ಲ. ಆಂಧ್ರಕ್ಕೆ ಎಲ್ಲಾ ನೀರು ಹರಿದು ಹೋಗುತ್ತಾ ಕರ್ನಾಟಕದಲ್ಲಿ ಮರಳು ಮಾತ್ರ ಇರುತ್ತದೆ. ಇದರಿಂದ ಶ್ರೀರಾಮರೆಡ್ಡಿಯವರ ನಿರಂತರ ಹೋರಾಟದಿಂಧ 8 ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಅನುಮೋದನೆ ಪಡೆದದ್ದಾಗಿದೆ. ಈಗಾಗಲೇ ಸರ್ವೆ ನಡೆದಿದೆ. ಎಷ್ಟಿಮೇಟ್ ಮಾಡಿ ಈಗ ಅದು WRDO (water resource development organisation) ನಲ್ಲಿ ಈಗಾಗಲೇ ಅನುಮೋದನೆ ಪಡೆದಿದೆ. ಮುಂದಿನ ಕಾರ್ಯಕ್ಕೆ ಅಡ್ಡಿಯಾಗಿ ಚುನಾವಣೆ ಬಂದಿದೆ.

ಸುಮಾರು 2000 ಎಕರೆ ಭೂಮಿಗೆ ನೀರುಣಿಸುವ ಈ ಯೋಜನೆಯಿಂದ ಬಾಗೆಪಲ್ಲಿ ಪಟ್ಟಣ ಫ್ಲೋರೈಡ್ ಮುಕ್ತ ನೀರನ್ನು ಪಡೆಯಲಿದೆ. ಈ ಯೋಜನೆಯಿಂದ ಪರಗೋಡು, ಕೊತ್ತಕೋಟ, ಜಿಲಕರಪಲ್ಲಿ ಕಾರಕೂರು, ಸಾಕೆನಾಂಡ್ಲಪಲ್ಲಿ, ಗುಂಡ್ಲಪಲ್ಲಿ, ಹಸನಾಗುವುದರಲ್ಲಿ ಸಂಶಯವಿಲ್ಲ, ಆ ಜನರೊಂದಿಗೆ ಮಾತನಾಡಿದಾಗ ಅವರ ಹರ್ಷ ಹೇಳತೀರದು. ಶ್ರೀರಾಮರೆಡ್ಡಿಯೊಟ್ಟಿಗೆ ನಾವೆಂದೂ ಇರುತ್ತೇವೆಂದು ತಿಳಿಸುತ್ತಾರೆ.

ಗುಡಿಬಂಡೆ ತಾಲ್ಲೂಕಿನಲ್ಲಿ ಹಾಪಸಂದ್ರದಿಂದ ದೇವಿರೆಡ್ಡಿಪಲ್ಲಿಯ ಕಡೆ ಹೋಗುವ ಕಾಲುವೆ ರಿಪೇರಿಗೆಂದು 5 ಲಕ್ಷ ರೂ ಖರ್ಚುಮಾಡಲಾಗಿದೆ. ಆದರಿಂದ ಸುಮಾರು 2-3 ಹಳ್ಳಿಗಳ ರೈತರಿಗೆ ತುಂಬಾ ಅನುಕೂಲವಾಗಿದೆ. ಸೋಮೇಶ್ವರದಿಂದ ಸೋಮನಹಳ್ಳಿಯ ಕಡೆ ಹೋಗುವ ಒಂದು ಕಾಲುವೆ ರಿಪೇರಿಗೆಂದು 3 ಲಕ್ಷ ಖರ್ಚು ಮಾಡಿದ್ದರಿಂದ ನೂರಾರು ಎಕರೆ ಜಮೀನಿಗೆ ನೀರು ಸಿಗುತ್ತಿದೆ. ಅದರ ಜೊತೆಗೆ ಪಾತಪಲ್ಲಿ, ಕೆರೆಯ ಕೆಳಗಡೆ ಕಾಲುವೆಗಳಿಗೆಂದು 5 ಲಕ್ಷರೂ ಮಂಜೂರಾಗಿದೆ. ತಾಲ್ಲೂಕಿನ ಮಲ್ಲಸಂದ್ರ ಮತ್ತು ನಾರೇಮದ್ದೇಪಲ್ಲಿ ಕೆರೆಗಳ ಅಭಿವೃದ್ದಿಗೆಂದು ತಲಾ 30 ಲಕ್ಷರೂ ಮಂಜೂರಾಗಿದೆ. ಆದೆಲ್ಲಕ್ಕಿಂತ ಮುಖ್ಯವಾಗಿ ನೂರಾರು ವರ್ಷಗಳ ಹಿಂದೆ ಕಟ್ಟಿರುವ ಕೆರೆಗಳು ಹೂಳು ತುಂಬಿ 2 ಬೆಳೆಗಳಿಗಾಗುವ ನೀರು ಒಂದೇ ಬೆಳೆಗೆ ಮುಗಿಯುತ್ತಿದೆ. ಅದರಿಂದ ಹೂಳೆತ್ತುವ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕೆಂದು ವಿಧಾನಸಭೆಯಲ್ಲೂ ಚರ್ಚಿಸಿದ್ದಾರೆ. ಜೊತೆಗೆ ಸೀಮನ್ನಗಾರಿಪಲ್ಲಿ ಕೆರೆಯನ್ನು ತೆಗೆದುಕೊಂಡು (hitaclow) ಯಿಂದ ಹೂಳನ್ನು ತೆಗೆಯಲಾಗಿದೆ. ಅದರಿಂದ ಕೆರೆಗೆ ಬರುವ ನೀರಿನಿಂದ ಇಂದು ಎರಡು ಬೆಳೆ ಬೆಳೆಯಬಹುದಾಗಿದೆ. ಜೊತೆಗೆ ಸುತ್ತಲೂ ನೀರಿನ ಮಟ್ಟ ಮೇಲೇರಬಹುದಾದ ಪರಿಸ್ಥಿತಿಯಿದೆ. ಗುಡಿಬಂಡೆಯ ದೊಡ್ಡ ಕೆರೆಯಲ್ಲಿ ಹೂಳು ತುಂಬಿ ವರ್ಷಗಳೇ ಕಳೆದಿವೆ. ಅದರಿಂದ ಅದರಲ್ಲಿ ಹೂಳು ತೆಗೆಯಲು 7 ಕೋಟಿ ರೂ.ಗಳು ಬೇಕೆಂದು ಸರ್ಕಾರದ ಮೇಲೆ ನಿರಂತರವಾಗಿ ಒತ್ತಡ ತರುತ್ತಿದ್ದಾರೆ. ಇಡೀ ಜಿಲ್ಲೆಯಲ್ಲೇ ಸಣ್ಣ ನೀರಾವರಿಗೆ ಹೆಚ್ಚಿನ ಗಮನ ಕೊಡುವಂತೆ ಸರ್ಕಾರದ ಮೇಲೆ ನಿರಂತರವಾಗಿ ಒತ್ತಡ ತರುತ್ತಿದ್ದಾರೆ.

ಬಾಗೇಪಲ್ಲಿ ಪಟ್ಟಣವನ್ನು ಅಭಿವೃದ್ದಿಯತ್ತ ಕೊಂಡೊಯ್ಯಬೇಕೆನ್ನುವುದು ಪ್ರಮುಖವಾಗಿದ್ದ ಆದ್ಯತೆಯಾಗಿತ್ತು ಶಾಸಕರಿಗೆ ಆದಕ್ಕೆ ಬಹಳ ಮುಖ್ಯವಾಗಿ ಪಟ್ಟಣಕ್ಕೆ ಒಂದೇ ರಸ್ತೆಯಿದ್ದು ಸುಮಾರು 30 ವರ್ಷಗಳ ಹಿಂದಿನ ಜನಸಂಖ್ಯೆಗೆ ಅನುಗುಣವಾಗಿ ರಸ್ತೆ ಮಾಡಲಾಗಿತ್ತು. ಜೊತೆಗೆ ಎಲ್ಲಾ ಶಾಲಾಕಾಲೇಜುಗಲ್ಲಿ ಎಲ್ಲಾ ಸರ್ಕಾರಿ ಕಛೇರಿಗಳು, ವ್ಯಾಪಾರ ವಹಿವಾಟು ಒಂದೇ ರಸ್ತೆಯಲ್ಲಿ ನಡೆಯಬೇಕು. ಜೊತೆಗೆ ಆಸ್ಪತ್ರೆಗಳು ಕೂಡಾ ಇದೇ ರಸ್ತೆಯಲ್ಲಿರುವುದರಿಂದ ರೋಗಿಗಳು ಚಿಕ್ಕಮಕ್ಕಳು ಇದೇ ರಸ್ತೆಯಲ್ಲಿ ಸಂಚಾರ ಮಾಡುವುದರಿಂದ ವಾಹನಗಳ ಓಡಾಟ ಜಾಸ್ತಿಯಾಗಿರುವುದರಿಂದ ಅಪಘಾತಗಳ ಸಂಖ್ಯೆಯೂ ಜಾಸ್ತಿಯಾಗಿದೆ. ಜೊತೆಗೆ ವ್ಯಾಪಾರ ಮಳಿಗೆಗಳನ್ನು ಸ್ವಲ್ಪ ಸ್ವಲ್ಪವೇ ಮುಂದಕ್ಕೆ ಒತ್ತರಿಸಿಕೊಂಡು ಬಂದು ರಸ್ತೆ ತುಂಬಾ ಚಿಕ್ಕದಾಗಿ ಪಾದಚಾರಿಗಳಿಗೆ ವಾಹನ ಚಾಲಕರಿಗೆ ತುಂಬಾ ತೊಂದರೆ ಆಗಿರುವುದರಿಂದ ರಸ್ತೆ ವಿಸ್ತಾರಗೊಳಿಸಬೇಕೆಂದು ಪ್ರಯತ್ನ ಮಾಡಿದರು. ಕನಿಷ್ಟ 70 ಅಡಿ ರಸ್ತೆ ಮಾಡಿದರೆ, ಮುಂದಿನ ಪಟ್ಟಣದ ಬೆಳವಣಿಗೆಗೆ ಅನುಗುಣವಾಗಿ ಮಾಡಬೇಕೆಂದು ಪ್ರಯತ್ನ ಮಾಡಿ ಎಲ್ಲಾ ರಸ್ತೆ ಪಕ್ಕದ ಅಂಗಡಿ ಮಾಲೀಕರನ್ನು ಸಭೆ ಸೇರಿಸಿ ಚರ್ಚೆ ಮಾಡಿದರು. ಎಲ್ಲಾ ಅಂಗಡಿ ಮಾಲಿಕರು ಒಪ್ಪಿದರು. ಆದರೆ ಕೆಲವೇ ಕೆಲವು 45 ಜನ ಒಪ್ಪದೇ ಕೋರ್ಟಿಗೆ ಹೋದರು ಅದರ ಪರಿಣಾಮವಾಗಿ ರಸ್ತೆ ಅಗಲಗೊಳಿಸುವುದು ನೆನೆಗುದಿಗೆ ಬಿದ್ದಿತು. ಆದರೆ ಅದರ ಪ್ರಯತ್ನವಂತೂ ಬಿಟ್ಟಿಲ್ಲ. ಜನರ ಆಶೀರ್ವಾದವೊಂದಿದ್ದರೆ ಅದನ್ನು ಪೂರ್ತಿಗೊಳಿಸುವೆನೆಂದು ಐಕ್ಯರಂಗದೊಂದಿಗೆ ಮಾತನಾಡುತ್ತಾ ತಿಳಿಸಿದ್ದಾರೆ.

100 ವರ್ಷಗಳ ಹಿಂದಿನ ಬಾಗೇಪಲ್ಲಿ ತಾಲ್ಲೂಕು ಕೇಂದ್ರವಾದ ಗುಮ್ಮನಾಯಕನ ಪಾಳ್ಯವನ್ನು ಒಂದು ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕೆಂದು ಸಕಲ ಪ್ರಯತ್ನಗಳನ್ನು ನಡೆಸಿ ಇಂದು ಒಂದು ಹಂತಕ್ಕೆ ತಂದು ನಿಲ್ಲಿಸಿದ್ದಾರೆ. ಮೂಲೆಗೆ ಬಿದ್ದಂತಹ ಒಂದು ಐತಿಹಾಸಿಕ ಕೇಂದ್ರವನ್ನು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಹೋಗಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡುವಲ್ಲಿ ಯಶಸ್ವಿಯಾದ ಬಾಗೇಪಲ್ಲಿಯ ಮೊದಲ ಶಾಸಕರು ಎಂದು ಹೆಸರು ಗಳಿಸಿದ್ದಾರೆ.

ಗುಮ್ಮನಾಯಕನ ಪಾಳ್ಯದಲ್ಲಿ ಕೃಷ್ಣ ದೇವರಾಯನ ಕಾಲದ ಸಾಮಂತ ರಾಜರು ರಾಜ್ಯಬಾರ ಮಾಡುತ್ತಿದ್ದರು. ಇದು ಏಳು ಸುತ್ತಿನ ಕೋಟೆ ಎಂದು ಪ್ರಸಿದ್ದವಾಗಿದೆ. ಜೊತೆಗೆ ಈ ಪಾಳೇಗಾರರ ವಂಶ 101 ದೇವರುಗಳ ವಂಶ ಎಂದೂ ಪ್ರಸಿದ್ದವಾಗಿ 101 ದೇವಸ್ಥಾನಗಳನ್ನು ನಿರ್ಮಾಣ ಮಾಡಿದೆ. ಇಂದಿಗೂ ಪಾಳುಬಿದ್ದ ಕೋಟೆ, ಅರಮನೆ, ದವಾಖಾನೆ, ಹಲವಾರು ದೇವಸ್ಥಾನಗಳು ಕುರುಹುಗಳಾಗಿ ಕಾಣಬರುತ್ತಿವೆ. ಶ್ರೀರಾಮ, ವೆಂಕಟ ರಮಣಸ್ವಾಮಿ, ನರಸಿಂಹಸ್ವಾಮಿ, ದೇವಾಲಯಗಳು ಪ್ರಸಿದ್ದವಾಗಿದೆ. ಸಿಹಿನೀರು ಕೆರೆ, ಕುಡಿಯುವ ನೀರಿಗಾಗಿ ಒಂದು ಚೊಕ್ಕಟವಾದ ಬಾವಿ ಕಟ್ಟಲಾಗಿದೆ. ನೋಡಲು ತುಂಬಾ ಮನೋಹರವಾದ ಆ ರಮ್ಯ ಸ್ಥಳವನ್ನು ಪ್ರವಾಸಿ ತಾಣವನ್ನಾಗಿ ಮಾಡಬೇಕೆಂಬ ಹಂಬಲ ಶಾಸಕರಲ್ಲಿ ಇದೆ ಎನ್ನುವುದಕ್ಕೆ ಅಲ್ಲಿನ ಅಭಿವೃದ್ಧಿಯೇ ಸಾಕ್ಷಿ. ಮೊದಲ ಬಾರಿಗೆ ಅಲ್ಲಿ ಹೋಗುವುದಕ್ಕೆ ರಸ್ತೆ ಸೌಕರ್ಯ ಅವಶ್ಯವೆಂದು ಜಿಲ್ಲಾಧಿಕಾರಿಗಳನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ತೋರಿಸಿ ಹಳೆ ರಸ್ತೆಯನ್ನು ಬಿಟ್ಟು ಹೊಸ ರಸ್ತೆಯನ್ನು ಮಾಡಲು 5 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿಸಲಾಯಿತು. ಅದೇ ರಸ್ತೆ ಪೂರ್ಣವಾಗಿ ಜಲ್ಲಿ ಮತ್ತು ಡಾಂಬರು ಹಾಕಲು 30 ಲಕ್ಷ ರೂಗಳನ್ನು ನಗುರ್ಲುದಿಂದ ಪಾಳ್ಯಕ್ಕೆ ಮಂಜೂರು ಮಾಡಿಸಿ ಕೆಲಸ ಪ್ರಗತಿಯಲ್ಲಿದೆ. ಅದರ ಜೊತೆಯಲ್ಲೇ ಮೊದಲು ಅಲ್ಲಿ ಸಸಿ ನೆಡುವ ಕಾರ್ಯಕ್ರಮದಿಂದ ಹಸಿರನ್ನು ಬೆಳೆಸಬೇಕೆಂದು ಅರಣ್ಯ ಇಲಾಖೆಯ ವತಿಯಿಂದ ಜಪಾನಿನ ಸಹಯೋಗದ Earrern pan project ದಿಂದ 2 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿಸಿ ಸಸಿಗಳನ್ನು ನೆಡಲಾಗುತ್ತಿದೆ. ಪಾರ್ಕ್ ಮಾಡಬೇಕೆನ್ನುವ ಆಲೋಚನೆಯಿದೆ. ಈಗಾಗಲೇ ಪ್ರವಾಸೋದ್ಯಮ ಇಲಾಖೆ ಭಗತ್ ಸಿಂಗ್ ಶೈಕ್ಷಣಿಕ ಮತ್ತು ಸಾಮಾಜಿಕ ದತ್ತಿಗೆ ಸಿಹಿನೀರು ಕೆರೆಯಲ್ಲಿ ದೋಣಿ ವಿಹಾರವನ್ನು ಮಾಡಲು ಅನುಮತಿ ಕೊಟ್ಟು ಉದ್ಘಾಟನೆಗೊಂಡಿದೆ.


(ಮುಂದುವರಿಯುವುದು)

ಕಾಂಗ್ರೈನ ಹತಾಶೆ

ಹತಾಶ ಕಾಂಗ್ರೆಸ್ಸಿಗರಿಗೆ, ದಾರಿ ಕಾಣದೇ, ದಿಕ್ಕುತೋಚದೇ ಕಾಂಗ್ರೆಸ್‌ನಲ್ಲಿದ್ದವರನ್ನೆ ಕೆಲವರು ಅನಾಮಿಕರನ್ನು ಪತ್ರಿಕೆಯುವರಿಗೆ ತೋರಿಸಿ ಸಿ.ಪಿ.ಐ(ಎಂ) ಮತ್ತು ಜನತಾದಳದವರೆಂದು ಕಾಂಗ್ರೆಸ್ಸಿಗೆ ಬರುತ್ತಿದ್ದಾರೆಂದು ಹೇಳಿಕೆ ನೀಡುವುದು ಚಪಲವಾಗಿಬಿಟ್ಟಿದೆ. 45 ವರ್ಷದ ಬಾಗೇಪಲ್ಲಿಯ ಕಾಂಗ್ರೆಸ್ಸಿನ ರಾಜಕೀಯವನ್ನು ಸಿ.ಪಿ.ಐ(ಎಂ) ಶಾಸಕರು [illegible] ವರ್ಷದಲ್ಲಿ ದ್ವಂಸಗೊಳಿಸಿದ್ದನ್ನು ತಡೆಯಲಾರದೆ, ಹತಾಶ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಕೆ.ಪಿ.ಸಿ.ಸಿ. ಉಪಾಧ್ಯಕ್ಷ ಸ್ಥಾನದಲ್ಲಿದ್ದು ಸಿ.ಪಿ.ಐ.(ಎಂ) ಪಕ್ಷಕ್ಕೆ ಸಂಬಂಧಪಿಲ್ಲದವರನ್ನು ಸಿ.ಪಿ.ಐ.(ಎಂ)ನವರು ಎಂದು [illegible] ಅವರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳುತ್ತಿದ್ದೇವೆಂದು [illegible] ಹುಸಿ ಸುಳ್ಳುಗಳ ಸರಮಾಲೆಯನ್ನು ಚುನಾವಣೆಯ ಮುಂದೆ ಬಿಡುಗಡೆ ಮಾಡುವುದು ಮುನಿರಾಜುರವರ ಸ್ಥಾನಕ್ಕೆ ತಕ್ಕದಲ್ಲವೆಂದು ಸಿ.ಪಿ.ಐ.(ಎಂ) ತಾಲ್ಲೂಕು ಸಮಿತಿ ಅಭಿಪ್ರಾಯಪಟ್ಟಿದೆ. ಜನರಿಗೆ 45 ವರ್ಷಗಳ ಅವದಿಯಲ್ಲಿ ಕಾಂಗ್ರೆಸ್ ಶಾಸಕರುಗಳು ಮತ್ತು ಮುನಿರಾಜುರವರು ಶಾಸಕರಾಗಿದ್ದಾಗ ನಡೆಸಿದ ಅಬಿವೃದ್ಧಿ ಕಾರ್ಯಗಳ ಬಗ್ಗ ತಿಳಿಸದೇ ಕ್ಷುಲ್ಲಕ ರಾಜಕೀಯ ಮಾಡುವುದನ್ನು ಬಿಡಬೇಕೆಂದು ಅದು ಹೇಳಿದೆ. ಅಲ್ಪಸಂಖ್ಯಾತರಿಗೆ ರಕ್ಷಣೆ ಒದಗಿಸುತ್ತೇವೆಂದು ಬುರುಡೆ ಬಿಟ್ಟ ಮಾತ್ರಕ್ಕೆ ಯಾರೂ ನಂಬುವ ಸ್ಥಿತಿಯಲ್ಲಿಲ್ಲ. ಮುಸ್ಲಿಂ ಬಾಂಧವರಿಗೆ ಯಾರು ಅಲ್ಪಸಂಖ್ಯಾತರ ರಕ್ಷಕರು ಎಂಬುದು ಚೆನ್ನಾಗಿ ಗೊತ್ತು ಹಿಂದಿನ ಚುನಾವಣೆಯ ಹಾಗೆ ಈ ಭಾರಿ ಕೂಡಾ ಮುಸ್ಲಿಂ ಬಾಂಧವರು ಸಿ.ಪಿ.ಐ(ಎಂ) ಪರವಾಗಿದ್ದಾರೆ. ಆದ್ದರಿಂದ ಕಾಂಗ್ರೆಸ್ ನಾಯಕರಿಗೆ ದಿಕ್ಕುತೋಚದೆ ಈ ರೀತಿ ವರ್ತಿಸುತ್ತಿದ್ದಾರೆ. ಕೋಮುವಾದಿಗಳ ವಿರುದ್ಧ ನಿರಂತರ ಯುದ್ಧವನ್ನೇ ಸಾರಿರುವುದು ಅಲ್ಪಸಂಖ್ಯಾತರಿಗೆ ಗೊತ್ತು. ಕೇವಲ ಹೇಳಿಕೆ ಕೊಡುವುದರ ಮುಖಾಂತರ ನಾವು ಅಲ್ಪಸಂಖ್ಯಾತರ ಪರ ಎಂದು ಹೇಳಿದರೆ ಅದಕ್ಕಿಂತ ಹಾಸ್ಯಾಸ್ಪದ ಇನ್ನೊಂದಿಲ್ಲ ಎಂದು ಹೇಳದೆ ವಿಧಿಯಿಲ್ಲ. ಬಾಗೇಪಲ್ಲಿ ಕ್ಷೇತ್ರ ಹಿಂದಿದ್ದಂತೆ ಯಾರೇ ಬಂದರೂ ಕಾಂಗ್ರೆಸ್‌ನಲ್ಲಿ ಗೆಲ್ಲಬಹುದು ಎಂಬುದನ್ನು ಸಿ.ಪಿ.ಐ.(ಎಂ) ಸುಳ್ಳಾಗಿಸಿರುವುದನ್ನು ಕಾಂಗ್ರೆಸ್ಸಿಗರು ಅರಗಿಸಿಕೊಳ್ಳಲಾರದೆ ಒದ್ದಾಡುತ್ತಿದ್ದಾರೆ. ಇಂತಹ ಹತಾಶಪ್ರಯತ್ನಗಳನ್ನು ಅವರು ಕೈಬಿಡಲಿ. ಇದರಿಂದ ಜನ ಮೋಸಹೋಗುವುದಿಲ್ಲ. ಸಿ.ಪಿ.ಐ.(ಎಂ)ನ ಧೋರಣೆ ಹಾಗೂ ಕೆಲಸದ ಆಧಾರದಲ್ಲಿ ಆಯ್ಕೆ ಮಾಡುತ್ತಾರೆ ಎಂಬುದನ್ನು ತಿಳಿದುಕೊಳ್ಳಲಿ.

ನಮ್ಮೆಲ್ಲರ ಪ್ರೀತಿಯ ಕಾಂ.ವಿಮಲಾ ರಣದಿವೆ ಇನ್ನಿಲ್ಲ

ಜಿ.ಎನ್.ನಾಗರಾಜ್



1930ನೇ ಇಸವಿ ಕರನಿರಾಕರಣೆ (ಉಪ್ಪಿನ ಸತ್ಯಾಗ್ರಹ) ಉಕ್ಕೇರಿದ ಉರುಬಿನ ಸಮಯ. 12-13 ವರ್ಷದ ಇಬ್ಬರು ಬಾಲಕಿಯರು- 5-6 ನೇ ತರಗತಿಗಳ ವಿದ್ಯಾರ್ಥಿನಿಯರು. ಕೋರ್ಟಿನಂದರ ಕಟಕಟೆಯಲ್ಲಿ ನಿಂತಿದ್ದಾರೆ. ನ್ಯಾಯಾಧೀಶ ದಸ್ತೂರ್ ರವರು ಈ ಬಾಲಕಿಯರಿಗೆ ಬುದ್ಧಿವಾದ ಹೇಳುತಿದ್ದಾರೆ. "ನೀವಿನ್ನೂ ಚಿಕ್ಕ ಹುಡುಗಿಯರು, ಪ್ರಪಂಚದ ಅರಿವಿಲ್ಲದವರು, ನೀವು ಮಾಡಿದ ಅಪರಾಧ ಒಪ್ಪಿಕೊಂಡು ಕ್ಷಮೆ ಕೇಳಿಬಿಡಿ ನಿಮ್ಮನ್ನು ಜೈಲಿಗೆ ಕಳುಹಿಸಲು ಮನಸ್ಸಿಲ್ಲ"

ಆದರೆ ಬಾಲಕಿಯರಿಂದ ಪ್ರತಿಭಟನೆ 'ನಾವು ಅಪರಾಧ ಮಾಡಿಲ್ಲ. ಕ್ಷಮೆಯಾಚನೆ ಕನಸಿನ ಮಾತಷ್ಟೇ ಮಾತ್ರವಲ್ಲ ಇದೇ ಕೃತ್ಯವನ್ನು ಮತ್ತೆ ಮತ್ತೆ ಮಾಡಲು ಹಿಂಜರಿಯುವುದಿಲ್ಲ' ಎಂದು ಘೋಷಿಸಿದರು. ಬಾಲಕಿಯರ ಈ ಧೀರ ಉತ್ತರ ನ್ಯಾಯಾಲಯದಲ್ಲಿದ್ದವರಿಗೆ ರೋಮಾಂಚನ ಉಂಟುಮಾಡಿತ್ತು. ಈ ಬಾಲಕಿಯರಲ್ಲಿ ಒಬ್ಬರು ವಿಮಲಾ ಸರ್ ದೇಸಾಯಿ ಮತ್ತೊಬ್ಬರು ಕುಸುಮ್ ಕಿರ್ಕರೆ. ಇವರು ಮಾಡಿದ ಅಪರಾಧವೆಂದರೆ ಕರನಿರಾಕರಣೆಯ ಚಳುವಳಿಯ ಭಾಗವಾಗಿ ಮುಂಬೈ ಕೋಟೆ ಪ್ರದೇಶದಲ್ಲಿದ್ದ ವಿದೇಶಿ ಬಟ್ಟೆ ಮಾರಾಟದ ಅಂಗಡಿಯ ಮುಂದೆ ಪಿಕೆಟಿಂಗ್ ನಡೆಸಿದ್ದು. ಈ ಬಾಲಕಿಯರ ದೃಢ ನಿಲುವಿನಿಂದ ಸಿಟ್ಟಿಗೆದ್ದ ನ್ಯಾಯಾಧೀಶರು ಆರು ತಿಂಗಳ ಕಾಲ ಸಶ್ರಮ ಶಿಕ್ಷೆ ವಿಧಿಸಿ ಯಾರವಾಡ ಜೈಲಿನ 'ಸಿ' ಕ್ಲಾಸ್ ವಿಭಾಗಕ್ಕೆ ಕಳುಹಿಸಿದರು. ಹೀಗೆ ಪಿಕೆಟಿಂಗ್ ಮಾಡುವ ಮೊದಲೇ ವಿಮಲಾರವರು ಕಾಂಗ್ರೆಸ್ ಸೇವಾದಳದ ಬಾಲಕಿಯರ ವಿಭಾಗದಲ್ಲಿ ಸ್ವಯಂ ಸೇವಕಿಯಾಗಿ ಸೇರಿದ್ದರು. ಸ್ವಾತಂತ್ರ್ಯ ಹೋರಾಟಕ್ಕೆ ಎಳೆ ವಯಸ್ಸಿನಲ್ಲಿಯೇ ಧುಮುಕಿದ್ದರು. ಆಗಲೇ ಹಲವು ಬಾರಿ ಸಭೆ, ಮೆರವಣಿಗೆಗಳಲ್ಲಿ ಪಿಕೆಟಿಂಗ್‌ಗಳಲ್ಲಿಯೂ ಭಾಗವಹಿಸಿದ್ದರು.

ಯರವಾಡ ಜೈಲಿನಲ್ಲಿ

ಯರವಾಡ ಅಂದು ಪ್ರಸಿದ್ಧ ಜೈಲು. ಗಾಂಧೀ, ಕಸ್ತೂರ್‌ಬಾ ಆದಿಯಾಗಿ ಅತ್ಯಂತ ಪ್ರಸಿದ್ಧರು ಜೈಲುವಾಸವನ್ನನುಭವಿಸಿದ ತಾಣ. ವಿಮಲಾರವರು ಇಲ್ಲಿರುವಾಗಲೇ ಅವರು ಪ್ರಸಿದ್ಧ ಕವಯಿತ್ರಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ್ತಿ ಸರೋಜಿನಿ ನಾಯ್ಡು ಹಾಗೂ ಕಮಲಾದೇವಿ ಚಟ್ಟೋಪಾಧ್ಯಾಯ ಇವರ ಭೇಟಿಯಾಯಿತು. ಆದರೆ 'ಸಿ' ವರ್ಗದಲ್ಲಿ ಸಶ್ರಮ ಶಿಕ್ಷೆ ವಿಧಿಸಲ್ಪಟ್ಟಿದ್ದ ಬಾಲಕಿ ವಿಮಲಾ ಪ್ರತಿದಿನವೂ 13-14 ಜನರ ಉಡುಪುಗಳನ್ನು ಹೊಲಿದು ಸಿದ್ಧಪಡಿಸಬೇಕಾಗಿತ್ತು. ಇದರ ಜೊತೆಗೆ ತಮ್ಮ ಶಾಲೆಯ ಅಧ್ಯಯನವನ್ನು ಸಾಗಿಸಿದರು. ಗಾಂಧೀ-ಇರ್‌ವಿನ್ ಒಪ್ಪಂದ ಆದಮೇಲೆ ಇವರನ್ನು ಜೈಲಿನಿಂದ ಬಿಡುಗಡೆ ಮಾಡಿದರು.

ಇವರು ಹೊರಗೆ ಬಂದರು ಖರೆ. ಆದರೆ ಭಾರತದ ಮೇಲಿನ ಬ್ರಿಟಿಷರ ನೊಗ ಕಳಚಿರಲಿಲ್ಲ. ಬ್ರಿಟಿಷ್ ಆಳರಸರ ಮರ್ದನ ಆಟಾಟೋಪ ನಿಂತಿರಲಿಲ್ಲ. ತಮ್ಮ ಹೋರಾಟಕ್ಕೆ ಪ್ರತಿಫಲ ಸಿಗಲಿಲ್ಲ ಎಂದು ನಿರಾಶೆಯಾಯಿತು. ನಮಗೆ ಮೋಸ ಮಾಡಿದರು ಎನ್ನಿಸಿತು. ಅಹಿಂಸಾಮಾರ್ಗದ ಜಪಮಾಡುವ ಬ್ರಿಟಿಷರೊಡನೆ ಒಪ್ಪಂದ ಮಾಡಿಕೊಂಡ ಗಾಂಧೀಜಿಯವರ ಮಾರ್ಗದಿಂದ ಭಾರತಕ್ಕೆ ಸ್ವಾತಂತ್ರ್ಯ ದೊರಕೀತು ಎಂಬ ನಂಬಿಕೆ ಸಡಿಲಿತು. ಇದು ಅಂದಿನ ಕೋಟ್ಯಾಂತರ ತರುಣರ ಭಾವನೆಯಾಗಿತ್ತು. ಕಾಂಗ್ರೆಸ್ಸಿನ ನಾಯಕ ಮಣಿಗಳೆನಿಸಿದ ನೆಹರೂ, ಸುಭಾಷ್ ಚಂದ್ರ ಬೋಸ್‌ರಂತಹ ಅನೇಕರನ್ನು ಗಾಂಧೀಜಿಯವರ ದಾರಿಯ ಬಗ್ಗೆ ಅತೃಪ್ತಿ ಕಾಡಿತ್ತು. ಗೆಳತಿಯರು ವೀರ ಸಾವರಕರ್ ರವರನ್ನು ಭೇಟಿ ಮಾಡಲು ನಿರ್ಧರಿಸಿದರು. ಅವರನ್ನು ರತ್ನಗಿರಿಯೊಳಗೇ ಇರಬೇಕೆಂದು ನಿರ್ಬಂಧಿಸಲಾಗಿತು.

ಈ ಬಾಲಕಿಯರು ರತ್ನಗಿರಿಗೇ ಹೋಗಿ ಸಾವರ್‌ಕರ್ ರವರನ್ನು ಭೇಟಿಯಾಗಿ ಮಾರ್ಗದರ್ಶನ ಪಡೆಯಲು ನಿರ್ಧರಿಸಿದರು. ಆದರೆ ಅಲ್ಲಿಯೂ ನಿರಾಶೆ ಕಾದಿತ್ತು. ತೀವ್ರವಾದ ಚಳುವಳಿಯಿಂದ ಭಾರತವನ್ನು ಆದಷ್ಟೂ ಬೇಗನೆ ವಿಮೋಚನೆಗೊಳಿಸಬೇಕೆಂದು ಬಯಸಿದ್ದ, ಕಾತರಿಸುತ್ತಿದ್ದ ಬಾಲಕಿಯರಿಗೆ ಸಾವರ್‌ಕರ್‌ರವರು "ನೀವಿನ್ನೂ ಚಿಕ್ಕ ಹುಡುಗಿಯರು" ಎಂದು ಹಿಂದಕ್ಕೆ ಕಳುಹಿಸಿದರು.

ಮಾರ್ಕ್ಸ್‌ವಾದದತ್ತ

ಆದರೆ ಅಷ್ಟರ ವೇಳೆಗೆ ಬಾಲಕಿಯ ಅಶಾಂತಿಗೆ ಮದ್ದು ಮನೆಯಲ್ಲಿಯೇ ತಯಾರಾಗಿತ್ತು. ತಮ್ಮ ಈ ಅನುಭವವನ್ನು ತಮ್ಮ ಅಣ್ಣ (ದಾಯಾದಿ) ಎಸ್.ಜಿ.ಸರ್‌ದೇಸಾಯರೊಂದಿಗೆ ಹೇಳಿಕೊಂಡರು. ಭಾರತದ ಪ್ರಥಮ ಕಮ್ಯೂನಿಸ್ಟ್ ಚಿಂತಕರಲ್ಲೊಬ್ಬರಾದ ಡಾ. ಅಧಿಕಾರಿಯವರ ಸಂಪರ್ಕ ಪಡೆದು ಕಮ್ಯೂನಿಸಂನತ್ತ ಆಕರ್ಷಿತರಾಗಿದ್ದ ಅಣ್ಣ ತಮ್ಮ ಈ ಸೋದರರಿಗೆ ಮಾಕ್ಸಿಂಗೋರ್ಕಿಯವರ 'ತಾಯಿ' ಕಾದಂಬರಿ ಹಾಗೂ ಎಮಿಲಿಬರ್ನ್ಸ್ ರವರ 'ಮಾರ್ಕ್ಸ್‌ವಾದ ಎಂದರೇನು?' ಎಂಬ ಪುಸ್ತಕಗಳನ್ನು ಓದಲು ಸಲಹೆ ನೀಡಿದರು. ಹೀಗೆ ಭಾರತದ ವಿಮೋಚನೆ ಬಗ್ಗೆ ಮೂಡಿದ್ದ ತಹತಹಕ್ಕೆ ಪರಿಹಾರ ಸಿಕ್ಕಿತು.

ಅಂದಿನಿಂದ ವಿಮಲಾ ಸರ್ ದೇಸಾಯ್‌ರ ಕಠಿಣತಮವಾದ ತ್ಯಾಗ ಬಲಿದಾನಗಳ ಹಾದಿಯಲ್ಲಿ ಪಯಣಿಸಿದರು. ದಾರಿ ಸರಿದಂತೆ ಬೆಳೆದರು. ಭಾರತದ ಮಹಿಳಾ ಚಳುವಳಿಗೆ, ಕಮ್ಯೂನಿಸ್ಟ್ ಚಳುವಳಿಗೆ ದಾರಿ ದೀಪವಾದರು.

ಮಾರ್ಕ್ಸ್‌ವಾದದ ಕೃತಿಗಳ ಅಭ್ಯಾಸದೊಂದಿಗೇ ತಮ್ಮ ಶಿಕ್ಷಣವನ್ನು ಮುಂದುವರೆಸಿದರು. ಪುಣೆಯಲ್ಲಿ ಪ್ರೌಢಶಾಲೆಯನ್ನು ಮುಗಿಸಿ ಮಹರ್ಷಿ ಕರ್ವೆ ವಿಶ್ವ ವಿದ್ಯಾನಿಲಯವನ್ನು ಸೇರಿದರು. ತರಗತಿಯ ಅಭ್ಯಾಸಗಳಲ್ಲಿ ಮಾತ್ರವೇ ಅಲ್ಲದೆ ಪಠ್ಯೇತರ ಚಟುವಟಿಕೆಗಳಲ್ಲಿ ನಾಟಕ, ಚರ್ಚೆ ಸ್ಪರ್ಧೆಗಳಲ್ಲಿ ಭಾಗವಹಿಸಿ ಮೆಚ್ಚುಗೆ ಗಳಿಸಿದರು. 1935-36 ರ ವೇಳೆಗೆ ಅರ್ಥಶಾಸ್ತ್ರದಲ್ಲಿ ಜಿ.ಎ.(ಗ್ರಾಜುಯೇಟ್ ಆಫ್ ಆರ್ಟ್ಸ್) ಪದವಿಪಡೆದರು.

ನಂತರ ಬಹಳ ಚಿಕ್ಕಂದಿನಲ್ಲಿಯೇ ತೀರಿಹೋಗಿದ್ದ ತಮ್ಮ ತಂದೆಯ ಸ್ಥಾನದಲ್ಲಿ ತಮ್ಮ ತಂಗಿಯನ್ನು ಸಾಕಿಸಲಹಲು ಮುಂಬೈಯಲ್ಲಿ ಹೈಸ್ಕೂಲೊಂದರ ಅಧ್ಯಾಪಕಿಯಾಗಿ ಕೆಲಸಕ್ಕೆ ಸೇರಿದರು. ಅಲ್ಲಿ ತಮ್ಮ ವೃತ್ತಿಯೊಡನೆ ಮಾರ್ಕ್ಸ್‌ವಾದದ ಅಧ್ಯಯನವನ್ನು ಮುಂದುವರೆಸಿದರು. ಮಾರ್ಕ್ಸ್‌ವಾದಿ ಅಧ್ಯಯನ ಶಿಬಿರಗಳು, ಚರ್ಚಾಗೋಷ್ಠಿಗಳಲ್ಲಿ ಭಾಗವಹಿಸಿದರು. ಇದೇ ಸಂದರ್ಭದಲ್ಲಿ ಅವರು "ಸ್ತ್ರೀ" ಎಂಬ ಪತ್ರಿಕೆಯಲ್ಲಿ ಅಂದು ತನ್ನ ಧೈರ್ಯ ಸಾಹಸ, ನಿಷ್ಠೆಗಳಿಂದ ಸ್ಪೇನ್‌ನ ಫ್ಯಾಸಿಸ್ಟ್ ದಬ್ಬಾಳಿಕೆಯ ವಿರುದ್ಧ ಸೆಣಸಿದ ಲಾಮೂಪಾಸನೋರಿಯಾ ಎಂಬ ಕ್ರಾಂತಿಕಾರಿ ಮಹಿಳೆಯ ಬಗ್ಗೆ ತಮ್ಮ ಮೊದಲ ಲೇಖನ ಬರೆದು ಪ್ರಕಟಿಸಿದರು. ಇದು ಆ ವೇಳೆಗಾಗಲೇ ಕಾಂ. ವಿಮಲಾ ಪಡೆದಿದ್ದ ಉನ್ನತಮಟ್ಟದ ಅಂತರರಾಷ್ಟ್ರೀಯ ತಿಳುವಳಿಕೆಯ ಕುರುಹಾಗಿತ್ತು. ನಂತರ ಪತ್ರಿಕೆಗಳಲ್ಲಿ ಅನೇಕ ಲೇಖನಗಳನ್ನು ಬರೆದರು.

ಚಿತ್ರನಟಿಯಾಗಿ

ಮರಾಠಿ ಸಾಂಸ್ಕೃತಿಕರಂಗದಲ್ಲಿ ಮಹಿಳೆಯರು ನಾಟಕ- ಸಿನಿಮಾಗಳಲ್ಲಿ ಪಾತ್ರ ಮಾಡುವ ಬಗ್ಗೆ ದೊಡ್ಡ ವಿವಾದವೆದ್ದಿತ್ತು. ಆಗ ಮಾಮಾವರೇಶ್ ಕರ್ ಎಂಬ ಪ್ರಸಿದ್ಧ ಮರಾಠಿ ಸಾಹಿತಿ ವಿಮಲಾರವರನ್ನು ಪ್ರಗತಿಪರ ಆಶಯವುಳ್ಳ ಮರಾಠಿ ಹಾಗೂ ಹಿಂದೀ ಎರಡೂ ಭಾಷೆಗಳಲ್ಲಿ ಏಕಕಾಲಕ್ಕೆ ಚಿತ್ರಿಕರಿಸಿದ ಸಿನಿಮಾವೊಂದರಲ್ಲಿ ಪಾತ್ರವಹಿಸಲು ಆಹ್ವಾನಿಸಿದರು. ಪಕ್ಷದ ಸಂಗಾತಿಗಳೊಡನೆ ಚರ್ಚಿಸಿದಾಗ ಅವರು ನೀಡಿದ ಉತ್ತೇಜನದಿಂದ ಚಿತ್ರದಲ್ಲಿ ಪಾತ್ರವಹಿಸಲೊಪ್ಪಿದರು. ಹಿಂದಿಯಲ್ಲಿ 'ಸಾಥಿ'ಯಾಗಿ ಮರಾಠಿಯಲ್ಲಿ 'ಸೌಗಂಧಿ'ಯಾಗಿ ಬಿಡುಗಡೆಯಾದ ಈ ಚಿತ್ರ ಕುರುಡು ನಂಬಿಕೆಗಳ ವಿರುದ್ಧ ಸಿಡಿದೇಳುವ ಸ್ವಾತಂತ್ರ್ಯ ಚಳುವಳಿಯತ್ತ ಜನರನ್ನು ಸೆಳೆಯುವ ಚಿತ್ರ. ಇದರಲ್ಲಿ ಸಾಮಾಜಿಕ ಕಾರ್ಯಕರ್ತೆಯ ಪಾತ್ರದಲ್ಲಿ ಕಾಣಿಸಿಕೊಂಡ ವಿಮಲಾ ಕೀಟಲೆ ಮಾಡಿದ ಹುಡುಗನಿಗೆ ತಿರುಗಿನಿಂತು ಬಾರಿಸುವ ದಿಟ್ಟೆಯಾಗಿ ನಟಿಸಿದರು. ಈ ಸಿನಿಮಾದಲ್ಲಿ ಪ್ರಸಿದ್ಧ ಅಭಿನೇತ್ರಿ ದುರ್ಗಾ ಖೋಟೆ ನಾಯಕಿ ಪಾತ್ರವಹಿಸಿದ್ದರು.

ಆಗಿನ ಸಂದರ್ಭದಲ್ಲಿ ಮಹಿಳೆಯರು ಸಾಂಸ್ಕೃತಿಕ ರಂಗದಲ್ಲಿ ಭಾಗವಹಿಸುವುದನ್ನು ಸಮರ್ಥಿಸಿ ಲೇಖನಗಳನ್ನು ಬರೆದರು. ಎರಡು ವರ್ಷಗಳಲ್ಲಿ 6 ಚಲನಚಿತ್ರಗಳಲ್ಲಿ ಪಾತ್ರವಹಿಸಿದರು.

ನಂತರ ಒಳ್ಳೆಯ ಅಭಿರುಚಿಯ ನಾಟಕ ಪ್ರದರ್ಶನಕ್ಕಾಗಿ ಪ್ರಸಿದ್ಧರಾಗಿದ್ದ, ಮರಾಠಿ ರಂಗಭೂಮಿಯ ಬೆಳವಣಿಗೆಯಲ್ಲಿ ಪ್ರಮುಖಪಾತ್ರ ವಹಿಸಿದ ಎಂ.ಜಿ. ರಂಗ್ನೇಕರ್ ಹಾಗೂ ಜ್ಯೋತ್ಸ್ನಾ ಬೋಲೆಯವರ 'ನಾಟ್ಯ ನಿಕೇತನ' ಎಂಬ ನಾಟಕ ತಂಡದಲ್ಲಿ ಪಾತ್ರವಹಿಸಲಾರಂಭಿಸಿದರು. ಈ ನಾಟಕ ತಂಡ ಮುಂಬಯಿಯಲ್ಲಿ ಮಾತ್ರವಲ್ಲದೆ ಇತರ ನಗರಗಳಲ್ಲಿಯೂ ಪ್ರವಾಸ ಮಾಡುತ್ತಾ ನಾಟಕಗಳನ್ನು ಪ್ರದರ್ಶಿಸುತ್ತಿತ್ತು. ಈ ರೀತಿ ಸಿನಿಮಾ ಹಾಗೂ ನಾಟಕಗಳಲ್ಲಿ ಪಾತ್ರವಹಿಸಿ ಗಳಿಸಿದ ಹಣದಲ್ಲಿ ತಮ್ಮ ತಮ್ಮ ತಂಗಿಯರನ್ನೂ ಸಲಹುವುದರೊಂದಿಗೆ ಪಕ್ಷಕ್ಕೂ ಹೇರಳವಾಗಿ ಹಣ ನೀಡುತ್ತಿದ್ದರು. ಒಂದು ಸಿನಿಮಾದ ಪಾತ್ರಕ್ಕಾಗಿ ಅಂದು ನೀಡಿದ 20,000 ರೂ ಸಂಭಾವನೆಯನ್ನು ಚಿಕ್ಕನ್ನು ಪಕ್ಷದ ಅಂದಿನ ಪ್ರಧಾನ ಕಾರ್ಯದರ್ಶಿ ಪಿ.ಸಿ. ಜೋಷಿಯವರಿಗೆ ನೀಡಿದರು. ಇಂದು ಈ ಹಣದ ಬೆಲೆ ಎಷ್ಟು ದಶ ಲಕ್ಷಗಳಾಗಬಹುದೆಂಬುದನ್ನು ಲೆಕ್ಕಿಸಿದರೆ ನಿಧಿಯ ಮೌಲ್ಯ ಅರಿವಾಗುತ್ತದೆ.

ಮುಂಬೈ ಕಾರ್ಮಿಕ ಚಳುವಳಿಯತ್ತ

1938-39 ರ ಸಂದರ್ಭ, ಬಾಂಬೆಯಲ್ಲಿ ದೊಡ್ಡ ಕಾರ್ಮಿಕ ಹೋರಾಟದ ಅಲೆಗಳು. ಆಗ ಪಿ.ಸಿ.ಜೋಷಿಯವರು ಹೋರಾಟಗಳನ್ನು ವರದಿ ಮಾಡಲು ವಿಮಲಾರವರ ಸಹಾಯವನ್ನು ಬಯಸಿದ್ದರು. ವಿಮಲಾ ಹೋರಾಟಗಳ ಹತ್ತಿರದ ಸಂಪರ್ಕ ಪಡೆದು ಕಾರ್ಮಿಕರೊಂದಿಗೆ ಬೆರೆತರು. 1939 ರಲ್ಲಿ ಪಕ್ಷದ ಸದಸ್ಯೆಯಾದರು. ಈ ಎಲ್ಲಾ ಕೆಲಸದ ನಡುವೆ ಆಗ ಅವರದ್ದು ಪಕ್ಷದ ಕಛೇರಿಯಲ್ಲಿಯೇ ವಾಸ.

ಪುಟ 11 ನೋಡಿ

ಸರಳ, ತ್ಯಾಗಮಯ ಜೀವನ

ದೇಶದ ಮಹಿಳಾ ಕಮ್ಯುನಿಸ್ಟ್ ಮುಖಂಡರಲ್ಲಿ ಪ್ರಮುಖರಾದ ಕಾಮ್ರೇಡ್ ವಿಮಲ ರಣದಿವೆ ತನ್ನ ಸರಳ ಜೀವನ ಹಾಗೂ ಆಂದೋಲನಕ್ಕಾಗಿ ಯಾವುದೇ ತ್ಯಾಗಕ್ಕೆ ಸದಾಸಿದ್ಧ ಎಂಬ ಸ್ವಭಾವದಿಂದಾಗಿ ಪಕ್ಷದ ಹಾಗೂ ಕಾರ್ಮಿಕ ಆಂದೋಲನದ ಕಾರ್ಯಕರ್ತರಿಗೆಲ್ಲಾ ಅಚ್ಚು ಮೆಚ್ಚಿನವರಾಗಿದ್ದ ಸಮರ್ಪಿತ ಮುಖಂಡರು ಎಂದು ಆ ವೇಳೆಗೆ ನವದೆಹಲಿಯಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಕೇಂದ್ರ ಸಮಿತಿ ಶ್ರದ್ಧಾಂಜಲಿ ಅರ್ಪಿಸಿದೆ. ಇದೇ ರೀತಿ ಅವರು ದುಡಿದ, ಕಟ್ಟಿದ, ಮಾರ್ಗದರ್ಶನ ನೀಡಿದ ಸಾಮೂಹಿಕ ಸಂಘಟನೆಗಳು ತಮ್ಮ ಅಗಲಿದ ನೇತಾರರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿವೆ.

ಈಗಾಗಲೇ 'ಐಕ್ಯರಂಗ'ದಲ್ಲಿ ವರದಿಯಾಗಿರುವಂತೆ ಸಿಪಿಐ(ಎಂ) ನ ಹಾಗೂ ದೇಶದ ಕಾರ್ಮಿಕ ಆಂದೋಲನದ ಹಿರಿಯ ಮುಖಂಡರೂ, ಸಿಪಿಐ(ಎಂ) ನ ಕೇಂದ್ರ ಸಮಿತಿಯ ಸದಸ್ಯರೂ ಆಗಿದ್ದ ಕಾಮ್ರೇಡ್ ವಿಮಲ ರಣದಿವೆಯವರು ಜುಲೈ 24 ರಂದು ಮುಂಬೈಯಲ್ಲಿ ನಿಧನರಾದರು. ಎರಡು ವರ್ಷಗಳಿಂದ ಅನಾರೋಗ್ಯ ದಿಂದಿದ್ದ ಅವರ ವಯಸ್ಸು 84 ವರ್ಷ.

ದೇಶದ ಮಹಿಳಾ ಕಮ್ಯುನಿಸ್ಟ್ ಮುಖಂಡರಲ್ಲಿ ಅಗ್ರಪಂಕ್ತಿಯಲ್ಲಿದ್ದ ವಿಮಲಾ ರಣದಿವೆ 1988 ರಲ್ಲಿ ನಡೆದ ಸಿಪಿಐ(ಎಂ)ನ 13ನೇ ಮಹಾಧಿವೇಶನದಲ್ಲಿ ಕೇಂದ್ರ ಸಮಿತಿಗೆ ಆಯ್ಕೆಗೊಂಡರು. ಸಿಐಟಿಯುನ ಕಾರ್ಯದರ್ಶಿಗಳಲ್ಲಿ ಒಬ್ಬರೂ, ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಂಚಾಲಕರೂ, ಅಖಿಲ ಭಾರತ ತೋಟ ಕಾರ್ಮಿಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯೂ ಹಾಗೂ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷರೂ ಆಗಿ ವಿವಿಧ ಜನವಿಭಾಗಗಳ ಆಂದೋಲನಗಳಿಗೆ ಆಕೆ ಮಾರ್ಗದರ್ಶನ ನೀಡಿದ್ದರು.

ವಿಮಲಾ ರಣದಿವೆ ತನ್ನ ಸಂಪೂರ್ಣ ಜೀವನವನ್ನು ಕಾರ್ಮಿಕ ವರ್ಗದ ಆಂದೋಲನಕ್ಕೆ ಮತ್ತು ಕಮ್ಯುನಿಸ್ಟ್ ಪಕ್ಷಕ್ಕೆ ಮುಡುಪಿಟ್ಟರು, ತನ್ನ ಸರಳ ತ್ಯಾಗಮಯ ಜೀವನದಿಂದ ಎಲ್ಲಾ ಸಂಗಾತಿಗಳಿಗೆ ಅಚ್ಚು ಮೆಚ್ಚಿನವರಾಗಿದ್ದರು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಶ್ರದ್ಧಾಂಜಲಿ ಅರ್ಪಿಸುತ್ತಾ ಅವರ ಪುತ್ರ ಉದಯ್ ರಣದಿವೆ ಹಾಗೂ ಕುಟುಂಬದ ಇತರ ಸದಸ್ಯರಿಗೆ ತನ್ನ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ಕಾಮ್ರೇಡ್ ವಿಮಲಾ ದೀ (ವಿಮಲಕ್ಕ) ಎಂದು ಅಕ್ಕರೆಯಿಂದ ಸಂಗಾತಿಗಳು ಕರೆಯುತ್ತಿದ್ದ ಅವರು ಕಾರ್ಮಿಕ ವರ್ಗದ ಆಂದೋಲನಕ್ಕೆ ನೀಡಿದ ವಿಶಿಷ್ಟ ಕಾಣಿಕೆಗಳನ್ನು ನೆನಪಿಸಿಕೊಳ್ಳುತ್ತಾ ಸಿಐಟಿಯು ತನ್ನ ಶ್ರದ್ಧಾಂಜಲಿ ಅರ್ಪಿಸಿದೆ. 1970 ರಲ್ಲಿ ಕಾಮ್ರೇಡ್ ವಿಮಲಾದೀ ಅಖಿಲ ಭಾರತ ತೋಟ ಕಾರ್ಮಿಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯಾದರು, 1973 ರಲ್ಲಿ ಸಿಐಟಿಯು ಜನರಲ್ ಕೌನ್ಸಿಲ್‌ನ ಸದಸ್ಯರಾದರು, 1977 ರಲ್ಲಿ ಸಿಐಟಿಯು ಕಾರ್ಯದರ್ಶಿಯಾಗಿ ಚುನಾಯಿತರಾದರು. ಸಿಐಟಿಯು ದುಡಿಯುವ ಮಹಿಳೆಯರನ್ನು ಸಂಘಟಿಸುವ ಮುತುವರ್ಜಿ ವಹಿಸಿದಾಗ ಕಾಮ್ರೇಡ್ ವಿಮಲಾದೀ ಆ ಹೊಣೆ ಹೊತ್ತುಕೊಂಡರು. ಅವರ ಅವಿಶ್ರಾಂತ ಪ್ರಯತ್ನಗಳಿಂದಾಗಿ ಅಖಿಲ ಭಾರತ ಅಂಗನವಾಡಿ ಕಾರ್ಮಿಕರ ಒಕ್ಕೂಟ ಒಂದು ಪ್ರಮುಖ ಸಂಘಟನೆಯಾಗಿ ಬೆಳೆಯಿತು. ಅವರು ಈ ಒಕ್ಕೂಟದ ಸ್ಥಾಪಕ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ನಂತರ ಅಧ್ಯಕ್ಷರಾಗಿ ಮಾರ್ಗದರ್ಶನ ನೀಡಿದರು.

ಕಾಮ್ರೇಡ್ ವಿಮಲಾ ರಣದಿವೆ ದುಡಿಯುವ ಮಹಿಳೆಯರ ಪತ್ರಿಕೆಗಳಾದ 'ವಾಯ್ಸ್ ಆಫ್ ವರ್ಕಿಂಗ್ ವುಮೆನ್'(ಇಂಗ್ಲೀಷ್) ಮತ್ತು 'ಶಾಮ್‌ಕಾಜೀ ಮಹಿಳಾ' (ಹಿಂದಿ) ಸಂಪಾದಕರಾಗಿಯೂ ದುಡಿದರು.

ಸಿಐಟಿಯು ನಿಯೋಗದ ಸದಸ್ಯರಾಗಿ ಅವರು ಚೀಣಾಕ್ಕೆ ಭೇಟಿ ನೀಡಿದರು.

ಕಾಮ್ರೇಡ್ ವಿಮಲಾ ರಣದಿವೆಯವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಯಾವ ಧ್ಯೇಯಸಾಧನೆಗೆ ತನ್ನ ಇಡಿ ಬದುಕನ್ನು ಮುಡಿಪಿಟ್ಟರೋ ಅದನ್ನು ಮುಂದುವರೆಸಲು ಪಣ ತೊಡುವುದಾಗಿ ಸಿಐಟಿಯು ಹೇಳಿದೆ.

ಎಸ್.ಎಫ್.ಐ. ಹಾಗೂ ಅಖಿಲ ಭಾರತ ಕಿಸಾನ್ ಸಭಾ ಕೂಡಾ ಪ್ರತ್ಯೇಕ ಹೇಳಿಕೆಗಳನ್ನು ನೀಡಿ ಕಾಮ್ರೇಡ್ ವಿಮಲಾ ರಣದಿವೆಯವರಿಗೆ ಶ್ರದ್ಧಾಂಜಲಿ ಅರ್ಪಿಸಿದೆ. ಅವರ ನಿಧನದಿಂದ ಕಾರ್ಮಿಕ ವರ್ಗ-ರೈತಾಪಿ ವರ್ಗ ಐಕ್ಯತೆಯ, ಕೋಮುಸೌಹಾರ್ದದ ಒಬ್ಬ ಮಹಾನ್ ಪ್ರತಿಪಾದಕರನ್ನು ಕಳೆಕೊಂಡಂತಾಗಿದೆ ಎಂದು ಎಐಕೆಎಸ್ ಸಂತಾಪ ವ್ಯಕ್ತಪಡಿಸಿದೆ.

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ, ಸಿಐಟಿಯು ಎಸ್.ಎಫ್.ಐ., ಡಿವೈಎಫ್‌ಐ ಹಾಗೂ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮಿತಿಗಳು ಕೂಡಾ ಪ್ರತ್ಯೇಕ ಹೇಳಿಕೆಗಳಲ್ಲಿ ಕಾಮ್ರೇಡ್ ವಿಮಲಾ ರಣದಿವೆಯವರ ಕೊಡುಗೆಗಳನ್ನು ನೆನಪಿಸಿಕೊಳ್ಳುತ್ತಾ ಶ್ರದ್ಧಾಂಜಲಿ ಅರ್ಪಿಸಿವೆ.

ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಸಮ್ಮೇಳನದ ಬಹಿರಂಗಸಭೆಯಲ್ಲಿ ಇನ್ನಿಬ್ಬರು ಪ್ರಮುಖ ಮಹಿಳಾ ಮುಖಂಡರಾದ ಅಹಲ್ಯಾ ರಂಗ್ನೇಕರ್ ಮತ್ತು ಕನಕ್ ಮುಖರ್ಜಿಯವರೊಂದಿಗೆ



ಪಿ.ಯು. ಶುಲ್ಕ ಏರಿಕೆ: ಬೀದಿಗಿಳಿದ ವಿದ್ಯಾರ್ಥಿಗಳು

ವಿದ್ಯಾರ್ಥಿಗಳು ಬೀದಿಗಿಳಿದಿದ್ದಾರೆ, ಹೋರಾಟಕ್ಕೆ ಮುಂದಾಗಿದ್ದಾರೆ. ಇದಲ್ಲದೆ ಅವರಿಗೆ ಬೇರೆ ದಾರಿಯೇ ಇಲ್ಲವಾಗಿದೆ. ಸರ್ಕಾರವು ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಜೀವನವನ್ನು ಮೊಟಕುಗೊಳಿಸಲು ಯತ್ನಿಸುತ್ತಿದೆ. ಶಿಕ್ಷಣವನ್ನು ಮುಂದುವರಿಸಲಾಗದಂತಹ ದುಸ್ಥಿತಿಗೆ ಅವರನ್ನು ದೂಡುತ್ತಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಪಿ.ಯು.ಸಿ. ಗೆ ಸಂಬಂಧಪಟ್ಟ ವಿವಿಧ ರೀತಿಯ ಶುಲ್ಕಗಳನ್ನು ಎರಡು ಪಟ್ಟು ಹೆಚ್ಚಿಸಿ ವಿದ್ಯಾರ್ಥಿಗಳನ್ನು ಕಂಗಾಲುಗೊಳಿಸಿದೆ.

ಹೋರಾಟಕ್ಕೆ ಎಸ್.ಎಫ್.ಐ ನೇತೃತ್ವ

ಸರ್ಕಾರದ ಈ ದುರ್ನೀತಿಯನ್ನು ಭಾರತ ವಿದ್ಯಾರ್ಥಿ ಫೆಡರೇಷನ್ ಬಲವಾಗಿ ಖಂಡಿಸಿದೆ. ಕಂಗಾಲುಗೊಂಡ ವಿದ್ಯಾರ್ಥಿಗಳ ಅಸಹಾಯಕತೆಯನ್ನು ಹೋಗಲಾಡಿಸಿ ಪ್ರತಿಭಟನೆಯ ದಾರಿಗೆ ಅವರನ್ನು ಕೊಂಡೊಯ್ದಿದೆ.


"ರೇಷನ್ ಬೆಲೆ ಏರಿದೆ, ತರಕಾರಿ ಬೆಲೆ ಏರಿದೆ ಎಲ್ಲವೂ ಏರಿರುವಾಗ ಶುಲ್ಕ ಏರಬಾರದೆ?"

ಇದು ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರ ಪ್ರಶ್ನೆ. ಜುಲೈ 9 ರಂದು ಪಿ.ಯು. ಮಂಡಳಿಯ ಮುಂದೆ ಪ್ರತಿಭಟನೆ ನಡೆಸಿ ನಿರ್ದೇಶಕರೊಂದಿಗೆ ಚರ್ಚಿಸಿದಾಗ ಶುಲ್ಕ ಏರಿಕೆಯನ್ನು ಸಮರ್ಥಿಸಿಕೊಂಡ ನಿರ್ದೇಶಕರು ಹಲವಾರು ಹೊರೆಗಳನ್ನು ಹೊತ್ತಿರುವವರು ಈ ಹೊರೆಯನ್ನೂ [illegible] ಎಂದು ಪರೋಕ್ಷವಾಗಿ ಹೇಳಿದಂತಿತ್ತು.

ಈಗ ಪ್ರಕಟಿಸಿರುವಂತೆ ಪಿ.ಯು. ಬೋಧನಾ ಶುಲ್ಕ ರೂ. 50 ರಿಂದ 200 ಕ್ಕೆ ಏರಿದೆ(ಇದು ಸರ್ಕಾರಿ ಕಾಲೇಜುಗಳಲ್ಲಿ, ಖಾಸಗಿ ಕಾಲೇಜುಗಳಲ್ಲಿ ರೂ. 300 ರಿಂದ 400 ವರೆಗೆ ಏರಿದೆ), ಪ್ರಯೋಗ ಶಾಲೆ ಶುಲ್ಕ ರೂ. 60 ರಿಂದ 100ಕ್ಕೆ, ದಾಖಲಾತಿ ಶುಲ್ಕ ರೂ. 5 ರಿಂದ 10ಕ್ಕೆ, ಕ್ರೀಡಾ ಶುಲ್ಕ 30 ರಿಂದ 40 ಕ್ಕೆ ಇದಲ್ಲದೆ ಅಂಕ ಮರುಎಣಿಕೆ-ಮರು ಮೌಲ್ಯಮಾಪನ ಶುಲ್ಕ ಇತ್ಯಾದಿ ಹಲವಾರು ಶುಲ್ಕಗಳನ್ನು ಏರಿಸಿರುವುದು ಸಾಮಾನ್ಯ ಪೋಷಕರಿಗೆ ಕಡಿಮೆಯದ್ದೇನಲ್ಲ. ವಿದ್ಯಾರ್ಥಿಗಳ ಜೀವನದೊಂದಿಗೆ ಚೆಲ್ಲಾಟವಾಡುವುದು ಈ ಸರ್ಕಾರಗಳಿಗೆ, ಅಧಿಕಾರಿಗಳಿಗೆ ಮೋಜಿನ ವಿಷಯವಾದಂತಿದೆ.

ಶುಲ್ಕ ಏರಿಕೆ ಸಮಸ್ಯೆ ಸಾಲದೆಂದು, ಹೊಸ ಹೊಸ ಸಮಸ್ಯೆಗಳ ಸೃಷ್ಟಿ ಬೇರೆ. ಯಾವುದಾದರೂ ಪಿಯುಸಿ ವಿದ್ಯಾರ್ಥಿಯೊಬ್ಬ ತನ್ನ ವಿಷಯ ಸಂಯೋಜನೆ (Combination) ಬದಲಾವಣೆ ಮಾಡಿಕೊಳ್ಳಬೇಕಾದರೆ ಅಥವಾ ಕಾಲೇಜು ಬದಲಾವಣೆ ಮಾಡಿಕೊಳ್ಳಬೇಕಾದರೆ ಇನ್ನು ಮುಂದೆ ಆ ವಿದ್ಯಾರ್ಥಿಯು ಪಿಯು ಮಂಡಳಿಯ ರಾಜ್ಯ ನಿರ್ದೇಶಕರಿಂದಲೇ ಅನುಮತಿ ಪಡೆಯಬೇಕು. ಬೀದರ್ ಅಥವಾ ಗುಲ್ಬರ್ಗದಲ್ಲಿ ಓದುವ ವಿದ್ಯಾರ್ಥಿಯೊಬ್ಬ ಈ ಸಣ್ಣ ಕೆಲಸಕ್ಕೆ ನೂರಾರು ಕಿಲೋ ಮೀಟರುಗಳ ದೂರದ ಬೆಂಗಳೂರಿಗೆ ಬರಬೇಕು. ಹೀಗಿದೆ ಮಂಡಳಿಯ ಆಜ್ಞೆ.

ಜಿಲ್ಲಾ ಮಟ್ಟಗಳಲ್ಲಿ ಪಿಯುಸಿ ಶಿಕ್ಷಣಕ್ಕೆ ಸಂಬಂಧಿಸಿ ಉಪ ನಿರ್ದೇಶಕರುಗಳಿದ್ದಾರೆ. ಈ ಅಧಿಕಾರವನ್ನು ಜಿಲ್ಲಾ ಮಟ್ಟದ ಉಪ ನಿರ್ದೇಶಕರಿಗೆ ಕೊಟ್ಟರೆ ಪಿ.ಯು. ಮಂಡಳಿಯ ಗಂಟೇನು ಹೋಗಲಿದೆಯೋ? ಹೇಗಿದೆ ನೋಡಿ ಪಿ.ಯು. ಮಂಡಳಿಯ ಅಧಿಕಾರ ಕೇಂದ್ರೀಕರಣ, ಸುಧಾರಣೆ!



ಏರಿಸಿರುವ ಶುಲ್ಕಗಳನ್ನು ಕೂಡಲೇ ಹಿಂತೆಗೆದುಕೊಳ್ಳುವಂತೆ ಮತ್ತು ಕಾಲೇಜು ಹಾಗೂ ವಿಷಯ ಸಂಯೋಜನೆ ಬದಲಾವಣೆಯ ಅಧಿಕಾರವನ್ನು ಜಿಲ್ಲಾ ಮಟ್ಟದ ಉಪ ನಿರ್ದೇಶಕರಿಗೆ ನೀಡುವಂತೆ ಆಗ್ರಹಿಸಿ ಜುಲೈ 19 ರಿಂದ [illegible] ರಾಜ್ಯಾದ್ಯಂತ ಹಲವು ಕಾಲೇಜುಗಳ ಮುಂದೆ [illegible], ಸುತ್ತೋಲೆ ದಹನ, ಕಾಲೇಜು [illegible] ಪ್ರತಿಭಟನೆಗಳನ್ನು ಎಸ್.ಎಫ್.ಐ [illegible] ವಿದ್ಯಾರ್ಥಿಗಳ ಸಿಟ್ಟಿಗೆ ಧ್ವನಿ ನೀಡಿದೆ. [illegible] ನೇತೃತ್ವದ ವಿದ್ಯಾರ್ಥಿಗಳು ಹೋರಾಟದ [illegible] ಮುಕಿದ್ದಾರೆ.

[illegible]

ಬೆಂಗಳೂರಿನಲ್ಲಿ ಮಹಾರಾಣಿ ಕಾಲೇಜು, [illegible] ಕಾಲೇಜು, ಸರ್ಕಾರಿ ವಿಜ್ಞಾನ ಕಾಲೇಜು, ವಿ.ವಿ.ಪುರಂ ಕಾಲೇಜು ಮತ್ತು ದೊಡ್ಡಬಳ್ಳಾಪುರ ಕಾಲೇಜುಗಳಲ್ಲದೆ ಮತ್ತಿತರ ಕಾಲೇಜುಗಳ ವಿದ್ಯಾರ್ಥಿಗಳು ಎಸ್.ಎಫ್.ಐನ ಕರೆಗೆ ಓಗೊಟ್ಟು ಪ್ರತಿಭಟನೆಗೆ ಇಳಿದಿರುವುದನ್ನು ಸಹಿಸದ ಎ.ಬಿ.ವಿ.ಪಿ.ಗಳು ಜುಲೈ 22 ರಂದು ಎ.ಪಿ.ಎಸ್. ವಾಣಿಜ್ಯ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆಗಿಳಿಯುವ ಸಂದರ್ಭದಲ್ಲಿ ಅವರ ಮೇಲೆ ಹಲ್ಲೆ ನಡೆಸಿ, ಬೆದರಿಸಿದ್ದಾರೆ, ಎಸ್.ಎಫ್.ಐ. ನಾಯಕರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಆದರೂ ವಿದ್ಯಾರ್ಥಿಗಳು ಎದೆಗುಂದದೆ ಪ್ರತಿಭಟನೆಯನ್ನು ನಡೆಸಿಯೇ ತೀರಿದ್ದಾರೆ. ಹಿಂದೊಮ್ಮೆ ಇದೇ ಎ.ಬಿ.ವಿ.ಪಿ.ಗಳು ವಿದ್ಯಾರ್ಥಿ ನಾಯಕಿಯನ್ನು ಅಡ್ಡಗಟ್ಟಿ ಕರಪತ್ರಗಳನ್ನು ಕಸಿದುಕೊಂಡು ಸುಟ್ಟುಹಾಕಿ ಅವರನ್ನು ಬೆದರಿಸಿದ್ದೇ ಅಲ್ಲದೆ 'ಹಿಂದು ಧರ್ಮದ ಬಗ್ಗೆ ಅರಿವಿಲ್ಲದ, ಗೌರವವಿಲ್ಲದ ನೀನು ಇಲ್ಲ್ಯಾಕೆ ಇದ್ದೀಯಾ? ಪಾಕಿಸ್ತಾನಕ್ಕೆ ಹೋಗು" ಎಂದು ಅಪ್ಪಣೆ ಕೊಡಿಸಿದ್ದರು. ಒಂದು ಹೆಣ್ಣಿನೊಂದಿಗೆ ಗೌರವದಿಂದ ವರ್ತಿಸಲರಿಯದ ಇವರು ಧರ್ಮದ ಬಗ್ಗೆ ಭಾಷಣ ಬಿಗಿಯುತ್ತಾ ಪ್ರಜಾಸತ್ತಾತ್ಮಕ ಹೋರಾಟಗಳನ್ನು ಹತ್ತಿಕ್ಕಲು ಯತ್ನಿಸುತ್ತಾರೆ. ವಿದ್ಯಾರ್ಥಿಗಳನ್ನು ಧರ್ಮದ ಆಧಾರದಲ್ಲಿ ಒಡೆಯಲು ಯತ್ನಿಸುತ್ತಾರೆ. ನಿಜಕ್ಕೂ ಇವರ ಉದ್ದೇಶ ಏನು? ಇಂತಹವರಿಂದ ವಿದ್ಯಾರ್ಥಿ ಏಳ್ಗೆ ಸಾಧ್ಯವೇ?

ರಾಜ್ಯವ್ಯಾಪಿ [illegible] ಅಲೆ

ಪಿ.ಯು. ಮಂಡಳಿಯ ಶಿಕ್ಷಣ ವಿರೋಧಿ [illegible] ಹಿಂತೆಗೆಯುವಂತೆ ಒತ್ತಾಯಿಸಿ ಈಗಾಗಲೇ ಹೊಸಪೇಟೆ, ಹುಬ್ಬಳ್ಳಿ, [illegible]ಗಿ, ಹಾಸನ, ಉತ್ತರ ಕನ್ನಡ, [illegible], ತುಮಕೂರು, ಬಿಜಾಪುರ, [illegible], ಸುರಪುರ, ಶಾಪುರ, ಕುಂದಾಪುರ, ಕಾರ್ಕಳ ಮುಂತಾದೆಡೆ ವ್ಯಾಪಕ ಪ್ರತಿಭಟನೆಗಳು ನಡೆದಿವೆ. ಜುಲೈ 7 ರಂದು ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಎಸ್.ಎಫ್.ಐ. ಕರೆ ನೀಡಿದ್ದ ಪಿ.ಯು.ಸಿ. ಕಾಲೇಜ್ ಬಂದ್ ಯಶಸ್ವಿಯಾಗಿದ್ದು, ಮಂಗಳೂರು, ಬೆಳ್ತಂಗಡಿ, ಬಂಟ್ವಾಳ, ಮೂಡಬಿದರೆ ಮುಂತಾದ ಕಡೆಗಳಲ್ಲಿ ದೊಡ್ಡ ರೀತಿಯ ಪ್ರತಿಭಟನೆಗಳು ನಡೆದಿವೆ.

[illegible] ಕೇಂದ್ರ ಸರ್ಕಾರದ ಒತ್ತಡಕ್ಕೆ ರಾಜ್ಯ ಸರ್ಕಾರವೂ ಬಲಿಬಿದ್ದು ವಿದ್ಯಾರ್ಥಿ ವಿರೋಧಿ ನೀತಿ ಮುಂದುವರಿಸಿದ್ದರಿಂದ ಎಸ್‌ಎಫ್‌ಐ ರಾಜ್ಯ ಸಮಿತಿ ಮತ್ತೊಂದು ಸುತ್ತಿನ ಹೋರಾಟಕ್ಕೆ ತೀರ್ಮಾನಿಸಿತ್ತು. ಜುಲೈ 10 ರಿಂದ 22 ವರೆಗೆ ರಸ್ತೆ ತಡೆಗಳು, ಭೂತದಹನ, ಪ್ರದರ್ಶನ, ಶುಲ್ಕ ಏರಿಕೆ ಸುತ್ತೋಲೆ ದಹನ ಇತ್ಯಾದಿ. ದಿ. 23 ರಂದು 'ಪಿ.ಯು.ಸಿ. ಕಾಲೇಜ್ ಬಂದ್' ಹೋರಾಟದ ಕರೆಗೆ ರಾಜ್ಯಾದ್ಯಂತ ವಿದ್ಯಾರ್ಥಿ ಸಮುದಾಯ ಉತ್ತಮವಾಗಿ ಸ್ಪಂದಿಸಿದ್ದಾರೆ. ವಿವಿಧ ಜಿಲ್ಲೆ-ತಾಲ್ಲೂಕುಗಳಿಂದ ಹೋರಾಟದ ವರದಿಗಳು ಬರುತ್ತಿವೆ.

ಜುಲೈ 23 ರಂದು ದಾವಣಗೆರೆಯ ಪಿಯು ಕಾಲೇಜ್ ಬಂದ್ ಸಂಪೂರ್ಣ ಯಶಸ್ವಿಯಾಗಿದ್ದು ಸಾವಿರಾರು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದಾರೆ. ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ, ಹುಣಸೂರು ತಾಲೂಕುಗಳಲ್ಲಿ ಕಾಲೇಜ್ ಬಂದ್ ಯಶಸ್ವಿಯಾಗಿದೆ. ಮಂಡ್ಯ, ರಾಮದುರ್ಗ, ಚಿಂತಾಮಣಿ, ಗುಡಿಬಂಡೆ, ಬಾಗೇಪಲ್ಲಿ, ಶಿಡ್ಲಘಟ್ಟ, ರಾಯಚೂರು, ಸಿಂಧನೂರು, ಗಂಗಾವತಿ, ಕೊಪ್ಪಳ, ಧಾರವಾಡ, ಶಿರಸಿ, ಕಾರವಾರ, ಹೊನ್ನಾವರ, ಸುರಪುರ, ಬೀದರ್, ಹುಮ್ನಾಬಾದ್ ಇತ್ಯಾದಿ ಕಡೆಗಳಲ್ಲಿ ವ್ಯಾಪಕ ಹೋರಾಟಗಳು ನಡೆದಿವೆ.

ಜುಲೈ 23 ರಂದು ಬೆಂಗಳೂರಿನಲ್ಲಿ ಪಿಯು ಮಂಡಳಿಯ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿ ಎಸ್.ಎಫ್.ಐ ನಿಯೋಗ ಮಂಡಳಿಯ ಜಂಟಿ ನಿರ್ದೇಶಕರನ್ನು ಕಂಡು ಮಾತುಕತೆ ನಡೆಸಿದಾಗ ಜಿಲ್ಲಾ ಕೇಂದ್ರದ ಉಪ ನಿರ್ದೇಶಕರಿಗೆ ಕಾಲೇಜು ಮತ್ತು ವಿಷಯ ಸಂಯೋಜನೆಯ ಬದಲಾವಣೆಗೆ ಅಧಿಕಾರ ನೀಡುವ ಕುರಿತು ಪರಿಶೀಲಿಸುವುದಾಗಿ ಭರವಸೆ ನೀಡಿರುವ ಪಿಯು ಮಂಡಳಿ ಶುಲ್ಕ ಏರಿಕೆ ಸಂಬಂಧವಾಗಿ ಸರ್ಕಾರದತ್ತ ಕೈತೋರುತ್ತಿದೆ.

ಆದರೆ ರಾಜ್ಯದ [illegible] ರಾಜಕೀಯ ಅನಿಶ್ಚಿತತೆ, ಗೊಂದಲಗಳಿಂದಾಗಿ [illegible] ವಿದ್ಯಾರ್ಥಿಗಳತ್ತ ಗಮನ ಹರಿಸದೆ ಜನ[illegible] ಹೆಸರಿನಲ್ಲೇ [illegible]ಯುವುದು, [illegible]ಟಿಸುವುದು, [illegible]ವುದು, ಮಾರಿ [illegible] ವಿದ್ಯಾರ್ಥಿಗಳು [illegible] ರಂಗವನ್ನು [illegible] ಜೀವನದೊಂದಿಗೆ [illegible] ನಡೆಸುತ್ತಿರುವ ಆಳುವ [illegible] ಛಲದೊಂದಿಗೆ ಹೋರಾಟ ಮುಂದುವರಿಸಿದ್ದಾರೆ. ರಾಜ್ಯ ಮಂತ್ರಿ ಮಹೋದಯರಿಗೆ ಈ ಬಗ್ಗೆ ಗಮನ ಹರಿಸಲು ಪುರುಸೊತ್ತಿದೆಯೇ ಎಂಬುದನ್ನು ಕಾದು ನೋಡಬೇಕಿದೆ.

- ಬಸಮ್ಮ

..............ಕಾಂ.ವಿಮಲಾ ರಣದಿವೆ ಇನ್ನಿಲ್ಲ

ಅಣ್ಣ ಕಾಂ. ಎಸ್.ಜಿ. ಸರ್‌ದೇಸಾಯರೊಂದಿಗೆ ಅವರ ಮನೆಯಲ್ಲಿ ವಾಸಿಸುತ್ತಿದ್ದ ಸಮಯದಿಂದಲೇ ಅವರೊಡನೆ ಚರ್ಚಿಸಲು ಬರುತಿದ್ದ ಸಹ ಸಂಗಾತಿ ಬಿ.ಟಿ.ರಣದಿವೆಯವರ ಪರಿಚಯ. ನಂತರದ ದಿನಗಳಲ್ಲಿ ಗಿರಣಿ ಕಾಮಗಾರ್ ಯೂನಿಯನ್ ಹೋರಾಟದಲ್ಲಿ ಇಬ್ಬರೂ ಭಾಗವಹಿಸುತ್ತಿದ್ದಾಗ ಹೆಚ್ಚು ಹತ್ತಿರವಾದರು. ಆ ಹೋರಾಟಗಳ ಸಂದರ್ಭದಲ್ಲಿ ಕಾಂ. ವಿಮಲಾರವರು ಅಂದಿನ ಮುಂಬೈಯಲ್ಲಿ ಸಭೆಯಿಂದ ಸಭೆಗೆ ಸೈಕಲ್ ತುಳಿಯುತ್ತಾ ಪ್ರಯಾಣ ಮಾಡುತ್ತಿದ್ದರು. ಪ್ರಾಯಶಃ ಮುಂಬೈಯಲ್ಲಿ ಸೈಕಲ್ ಉಪಯೋಗಿಸುತ್ತಿದ್ದ ಪ್ರಥಮ ಮಹಿಳೆ ವಿಮಲಾರವರೇ ಇರಬೇಕು. ಮಹಿಳೆಯರೇ ಒಂದು ಗುಂಪಾಗಿ ಕಾರ್ಮಿಕರ ಸಭೆಗಳಲ್ಲಿ ಕ್ರಾಂತಿ ಗೀತೆಗಳನ್ನು ಹಾಡಿ ಹುರಿದುಂಬಿಸುತ್ತಿದ್ದರು.

ಬಿ.ಟಿ.ರಣದಿವೆಯವರೊಂದಿಗೆ ವಿವಾಹ

1939ರಲ್ಲಿ ಒಂದು ದಿನ ಇದಕ್ಕಿದ್ದಂತೆ ಬಂದ ಬಿ.ಟಿ.ರಣದಿವೆಯವರು ತ್ವರೆಯಿಂದ ಅಂದೇ ಮದುವೆಯಾಗಬೇಕೆಂದು ಇಚ್ಛೆ ವ್ಯಕ್ತಪಡಿಸಿದರು. ಕಾಂ. ಲಾಲಾ ರಂಗ್ನೇಕರ್, ಬಿ.ಟಿ.ಆರ್.ರವರ ಸೋದರ, ಹಾಗೂ ಈಗ ಪಾಕೀಸ್ತಾನದಲ್ಲಿರುವ ಕಾಂ. ಬುಖಾರಿಯವರ ಸಾಕ್ಷಿಯಲ್ಲಿ ಅಂದೇ ಮದುವೆಯನ್ನು ನೋಂದಾಯಿಸಲಾಯಿತು. ಉಕ್ಕೇರಿದ ಕಾರ್ಮಿಕ ಹೋರಾಟವನ್ನು ಸದೆ ಬಡಿಯಲು, ಕಮ್ಯೂನಿಸ್ಟರನ್ನು ಬಂಧಿಸುವ ಹಂಚಿಕೆಯನ್ನು ಬ್ರಿಟಿಷ್ ಸರ್ಕಾರ ಮಾಡಿತ್ತು. ಹಾಗೂ ಎರಡನೇ ವಿಶ್ವಯುದ್ಧ ಸಮಯವಾದ್ದರಿಂದ ಎಂದು ಬಂಧನವಾಗುವುದೋ ಯಾವಾಗ ಬಿಡುಗಡೆಯಾಗುವುದೋ ಎಂಬ ಅನಿಶ್ಚಯತೆ ಇದ್ದುದೆ ಈ ತ್ವರೆಗೆ ಕಾರಣ. ಮದುವೆಯಾದ ಕೆಲದಿನಗಳಲ್ಲಿಯೇ ಕಾಂ.ಬಿ.ಟಿ.ಆರ್ ಭೂಗತರಾದರು.

ಕಾರ್ಮಿಕ ಹೋರಾಟಗಳ ಸಂದರ್ಭದಲ್ಲಿಯೇ 1939 ರಲ್ಲಿ ದುಡಿಯುವ ಮಹಿಳೆಯರ ಸಂಘಟನೆಯನ್ನು ಆರಂಭಿಸಿದರು. ತಮ್ಮ ನಾಡಿನ ಕ್ರಾಂತಿರಾಣಿಯೆಂದು ಹೆಸರಾಗಿದ್ದ ಅಹಲ್ಯಾ ರಂಗ್ನೇಕರ್‌ರವರೊಡಗೂಡಿ ಮಹಿಳಾ ಕಾರ್ಮಿಕರ ಬೀದಿ ಬದಿಯ ಸಭೆಗಳನ್ನು ನಡೆಸುತ್ತಿದ್ದರು. ಆಗ ಪತ್ರಿಕೆಯೊಂದು "ಚಿತ್ರತಾರೆಯೊಬ್ಬರು ಸಭೆಗಳಲ್ಲಿ ಭಾಷಣ ಮಾಡುತ್ತಾರೆ, ಕಮ್ಯೂನಿಸ್ಟರೊಬ್ಬರನ್ನು ಮದುವೆಯಾಗಿದ್ದಾರೆ" ಎಂದೆಲ್ಲಾ ಬರೆಯುತ್ತಿದ್ದವು. ಆಗಲೇ ಅಖಿಲ ಭಾರತ ಮಹಿಳಾ ಸಮ್ಮೇಳನ ಸಂಘಟನೆಯನ್ನು ಬೆಳೆಸಲು ಶ್ರಮಿಸಿದರು. ಅದರ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು. 1939 ರಲ್ಲಿ ಮದುವೆಯಾದ ಮೇಲೆ 1948 ವರೆಗೆ ಪಕ್ಷದ ಕಛೇರಿಯಲ್ಲಿಯೇ ವಾಸ ಈ ದಂಪತಿಗಳದು. ಅವರ ಪುತ್ರ ಉದಯ್ ಹುಟ್ಟಿದ್ದು ಪಕ್ಷದ ಕಛೇರಿಯಲ್ಲಿದ್ದಾಗಲೇ. ಆಗ ಪಿ.ಸಿ. ಜೋಷಿ, ಡಾ. ಅಧಿಕಾರಿ, ಸುಂದರಯ್ಯ, ರಣದಿವೆಯವರ ಕುಟುಂಬಗಳೆಲ್ಲಾ ಪಕ್ಷದ ಕಛೇರಿಯಲ್ಲಿಯೇ ವಾಸ. ಪಕ್ಷದ ಕಛೇರಿಯಲ್ಲಿದ್ದ ಕಮ್ಯೂನಿಸ್ಟ್-ಸಾರ್ವತ್ರಿಕ ಭೋಜನ ಶಾಲೆಯಲ್ಲಿಯೇ ಊಟ. ಸುಂದರಯ್ಯನವರ ಪತ್ನಿ ಲೀಲಾರವರ ತಾಯಿಯದೇ ಊಟದ ವ್ಯವಸ್ಥೆ. ಲೀಲಾರವರ ತಂದೆ ಪಕ್ಷದ ಸೇವಾದಳದ ಕ್ಯಾಪ್ಟನ್, ಲೀಲಾರವರು ಪಕ್ಷದ ಕಛೇರಿಯ ಬೆರಳಚ್ಚುಗಾರ್ತಿ.

ಮುಂದೆ ಎರಡನೇ ಮಹಾಯುದ್ಧದಲ್ಲಿ ಹಿಟ್ಲರ್, ಮುಸೋಲಿನಿ ಜಪಾನ್‌ನ ಫ್ಯಾಸಿಸ್ಟ್‌ಕೂಟದ ವಿರುದ್ಧ ಬ್ರಿಟನ್, ಅಮೇರಿಕಾ, ರಷ್ಯಾಗಳ ಕೂಟವನ್ನು ಪಕ್ಷ ಬೆಂಬಲಿಸಿದಾಗ ದೇಶದಲ್ಲೆಲ್ಲಾ ಅಪಪ್ರಚಾರದ ಸುರಿಮಳೆ. ಈ ಪ್ರವಾಹದಲ್ಲಿ ಎದುರಾಗಿ ಈಜಿ ಎದುರಿಸಿದವರಲ್ಲಿ ಕಾಂ. ವಿಮಲಾ ಕೂಡ ಒಬ್ಬರು.

ಕಾಂಗ್ರೆಸ್ ಪಕ್ಷ 'ಚಲೇಜಾವ್ ' ಚಳುವಳಿಗೆ ಕರೆ ನೀಡಿದ್ದ ಸಂದರ್ಭದಲ್ಲಿ, ಎರಡನೇ ಮಹಾಯುದ್ಧವನ್ನು 'ಪೀಪಲ್ಸ್ ವಾರ್' (ಸ್ವಜನತಾ ಯುದ್ಧ) ಎಂದು ಕರೆದ ಪಕ್ಷ ತನ್ನ ನಿಲುವನ್ನು ಜನರಿಗೆ ವಿವರಿಸುವುದಕ್ಕಾಗಿ ಪೀಪಲ್ಸ್ ವಾರ್ ಎಂಬ ಪತ್ರಿಕೆಯೊಂದನ್ನು ಹೊರತಂದಿತು. ಕಮ್ಯುನಿಸ್ಟರೆಲ್ಲಾ ದೇಶ ದ್ರೋಹಿಗಳು ಎಂದು ಎಲ್ಲಾ ಕಡೆ ಪ್ರಬಲ ಪ್ರಚಾರವಿದ್ದ ಆ ದಿನಗಳಲ್ಲಿ ಈ ಪತ್ರಿಕೆಯನ್ನು ಮಾರುವುದೇ ಒಂದು ಸಾಹಸ. ಎಷ್ಟೋ ಬಾರಿ ಪತ್ರಿಕೆಗಳನ್ನು ಮಾರುತ್ತಿದ್ದರವರನ್ನು ಥಳಿಸುವುದೂ, ಪತ್ರಿಕೆಗಳನ್ನು ಕಸಿದುಕೊಂಡು ಸುಡುವುದೂ ಇತ್ತು. ಅಂತಹ ಅಪಾಯಕಾರಿ ಪರಿಸ್ಥಿತಿಯಲ್ಲಿ ಕಾಂ.ವಿಮಲಾ ಹಾಗೂ ಗೆಳತಿಯರು ಈ ಪತ್ರಿಕೆಯನ್ನು ಮುಂಬೈಯ ಬೀದಿಗಳಲ್ಲಿ, ರೈಲು ನಿಲ್ದಾಣಗಳಲ್ಲಿ ಮಾರುತ್ತಿದ್ದರು. ಪೆಟ್ಟು ಕೊಡಲು ಬಂದವರಿಗೆ ತಿರುಗಿಸಿ ಏಟು ಕೊಡುತ್ತಿದ್ದು ಉಂಟು

ರಿನ್ ಅಥವಾ ನಾವಿಕ ದಂಗೆ

1946 ರಲ್ಲಿ ಎರಡನೇ ಮಹಾಯುದ್ದದ ನಂತರ ಬ್ರಿಟಿಷ್ ಸೈನ್ಯದಲ್ಲಿ ನಾವಿಕ ದಂಗೆ ಸ್ವಾತಂತ್ರ್ಯ ಸಮರದ ಇತಿಹಾಸದಲ್ಲಿ ದೊಡ್ಡ ತಿರುವು. ಆ ಸಂದರ್ಭದಲ್ಲಿ ಮುಂಬಯಿ ಸ್ವಾತಂತ್ರ್ಯಸಮರದ ಉತ್ತುಂಗ ಶಿಖರವನ್ನು ಮುಟ್ಟಿತ್ತು. ಆಗ ಬಾಂಬೆಯ ಮಹಿಳಾ ಕಾರ್ಮಿಕ ವರ್ಗವೂ ತನ್ನ ಧೀರಪಾತ್ರವನ್ನು ನಡೆಸಿತು. ಈ ಸಂದರ್ಭದಲ್ಲಿ ಕಾಂ. ವಿಮಲಾ ರಣದಿವೆ ಯವರು ಮಹಿಳಾ ಕಮ್ಯೂನಿಸ್ಟ್‌ರ ಫ್ರಾಕ್ಷನ್ ಸಮಿತಿಯ ಕಾರ್ಯದರ್ಶಿ. ಸಾವಿರಾರು ಮಹಿಳಾ ಕಾರ್ಮಿಕರು ಸದಸ್ಯರಾಗಿದ್ದ ಪರೇಲ್ ಮಹಿಳಾ ಸಂಘ ಮಹಿಳಾ ಗಿರಣಿ ಕಾರ್ಮಿಕರಿಗೆ ಸ್ಫೂರ್ತಿ ನೀಡಿ ನಾವಿಕರ ದಂಗೆಗೆ ಅಮೋಘ ಸೇವೆ ಸಲ್ಲಿಸಿದರು. ದಂಗೆಯೆದ್ದ ನಾವಿಕರಿಗೆ ಆಹಾರ ಸಿಗದಂತೆ ಬ್ರಿಟಿಷರು ಪ್ರತಿಬಂಧ ವಿಧಿಸಿದಾಗ ವಿಮಲಾ, ಅಹಲ್ಯಾ ರಂಗ್ನೇಕರ್, ಕುಸುಮ್ ರಣದಿವೆಯವರು(ಈ ಇಬ್ಬರೂ ರಣದಿವೆಯವರ ಸೋದರಿಯರು), ಕಮಲಧೋಂಡೆ ಮಹಿಳಾ ಕಾರ್ಮಿಕರ ಸಹಾಯದೊಂದಿಗೆ ಆಹಾರವನ್ನು ತಯಾರಿಸಿ ಪೋಲೀಸರ, ಸೈನ್ಯದ ಕಣ್ಣು ತಪ್ಪಿಸಿ ಸಾಗರದ ನಡುವಿನಲ್ಲಿದ್ದ ನಾವಿಕರಿಗೆ ಮುಟ್ಟಿಸುವ ಅಪಾಯಕಾರಿ ಕೆಲಸವನ್ನು ಕೈಗೊಂಡಿದ್ದರು. ಇಡೀ ಮುಂಬೈಯಲ್ಲಿ ಕರ್ಫ್ಯೂ ವಿಧಿಸಿ, ಪೋಲೀಸರ ಅಟ್ಟಹಾಸ ವಿಪರೀತವಾಗಿದ್ದಾಗಲೂ ವಿಮಲಾ ನಿರ್ಜನವಾಗಿದ್ದ ಬೀದಿಗಳಲ್ಲಿ ಸಂಚರಿಸಿ ಈ ಕೆಲಸವನ್ನು ಸಂಘಟಿಸುವುತ್ತಿದ್ದರು. ಸಭೆಗಳನ್ನು ನಡೆಸುತ್ತಿದ್ದರು.

ಸ್ವಾತಂತ್ರ್ಯದ ನಂತರ 1948 ರಲ್ಲಿ ಪಕ್ಷದ ಮೇಲೆ ನಿಷೇಧ ವಿಧಿಸಿದಾಗ ಕಾಂ. ವಿಮಲಾ ಎರಡು ವರ್ಷ ಬಂಧನಕ್ಕೊಳಗಾದರು. ಜೈಲಿನಲ್ಲಿ ಅಲ್ಲಿನ ಅಮಾನವೀಯ ಪರಿಸ್ಥಿತಿಯ ವಿರುದ್ಧ 18 ದಿನಗಳ ಉಪವಾಸ ಸತ್ಯಾಗ್ರಹ ಕೈಗೊಂಡರು. ಅದೇ ಸಮಯದಲ್ಲಿ ಬಿ.ಟಿ.ರಣದಿವೆಯವರೂ ಜೈಲಿನಲ್ಲಿದ್ದರು.

ಜೈಲಿನಿಂದ ಬಿಡುಗಡೆಯಾದ ನಂತರ ವಿಮಲಾ ಅತ್ಯಂತ ಕಷ್ಟದ ದಿನಗಳನ್ನು ಎದುರಿಸಬೇಕಾಯಿತು. ಸಂಸಾರವನ್ನು ಸಾಗಿಸಲು ಕೆಲಸಕ್ಕೆ ಸೇರಿ ದುಡಿದು ಸಂಪಾದನೆ ಮಾಡಬೇಕಾಯಿತು. 1946 ರಲ್ಲಿ ಅವರಿಗೆ ಒಬ್ಬ ಪುತ್ರ (ಉದಯ್) ಜನಿಸಿದ್ದ. ಇಡಿ ಕುಟುಂಬ ಒಬ್ಬ ಸಂಗಾತಿಯೊಬ್ಬರ ಮನೆಯಲ್ಲಿ . ಒಂದು ಫ್ಯಾಕ್ಟರಿಯಲ್ಲಿ ಗುಮಾಸ್ತಾಗಿ ಕೆಲಸಕ್ಕೆ ಸೇರಿದರು. ಇಂತಹ ಸಂದರ್ಭದಲ್ಲಿ ರದ್ದಿ ಪೇಪರ್ ಮಾರಿ ಜೀವನ ನಡೆಸಬೇಕಾದ ಪರಿಸ್ಥಿತಿ ಬಂದೊದಗಿತು.

1956-57 ರಲ್ಲಿ ಸಂಯುಕ್ತ ಮಹಾ ರಾಷ್ಟ್ರಕ್ಕಾಗಿ ದೊಡ್ಡ ಚಳುವಳಿಯ ಅಲೆ. ಅಂದು ಸಾವಿರಾರು ಮಹಿಳೆಯರನ್ನು ದೆಹಲಿಗೆ ಕರೆದೊಯ್ದು ಸತ್ಯಾಗ್ರಹ ಮಾಡಿದರು. ಈ ಹೋರಾಟದ ಸಂದರ್ಭದಲ್ಲಿ ಮತ್ತೆ ಜೈಲುವಾಸ ಮೂರು ಬಾರಿ, ಒಮ್ಮೆ ಆರುತಿಂಗಳು, ಮತ್ತೊಮ್ಮೆ ಎರಡು ತಿಂಗಳು ಮತ್ತೊಮ್ಮೆ 8 ದಿನ. ಹಾಗೆಯೇ 1963 ರಲ್ಲಿ, ಭಾರತ ಚೀನಾ ಯುದ್ದದ ಸಂದರ್ಭದಲ್ಲಿ 62ರಲ್ಲಿ ಒಮ್ಮೆ 1 1/2 ವರ್ಷ ಬಂಧನ ಮತ್ತೆ 64 ರಲ್ಲಿ ಒಂದು ವರ್ಷ.

ಮಹಿಳೆಯರ ಸಂಘಟನೆಯಲ್ಲಿ

ಪಕ್ಷದ ವಿಭಜನೆಯಾಗಿ ಕಲ್ಕತ್ತ ಕೇಂದ್ರ ಸಮಿತಿಯ ಕಛೇರಿಯಾದ ಮೇಲೆ ರಣದಿವೆ ಕುಟುಂಬ ಕಲ್ಕತ್ತಾಕ್ಕೆ ನೆಲೆ ಬದಲಿಸಿತು. ಇಲ್ಲಿ ಮಹಿಳೆಯರೇ ಪ್ರಧಾನವಾಗಿರುವ ಚಹಾ ತೋಟದ ಕಾರ್ಮಿಕರ ಸಂಘಟನೆಗಾಗಿ ಶ್ರಮಿಸಿದರು. ಬಂಗಾಲಿ ಕಲಿತು ಗಣ ತಾಂತ್ರಿಕ ಮಹಿಳಾ ಸಮಿತಿ (ಪ. ಬಂಗಾಳದ ಮಹಿಳಾ ಸಂಘಟನೆ)ಗಾಗಿ ದುಡಿದರು. ನಂತರ ಅವರ ಇಡೀ ಜೀವನ ದುಡಿಯುವ ಮಹಿಳೆಯರ ಸಂಘಟನೆಗಾಗಿ ಮುಡಿಪಾಯಿತು. ಸಿಐಟಿಯು ಸಂಘಟನೆಯ ಪ್ರವರ್ತಕರಲ್ಲೊಬ್ಬರಾಗಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಜನಕರಲ್ಲೊಬ್ಬರಾಗಿ ಕೆಲಸ ಮಾಡಿದರು.

ಅಖಿಲ ಭಾರತ ವ್ಯಾಪಿಯಾಗಿ ಅಂಗನವಾಡಿ ಕಾರ್ಯಕರ್ತೆಯರ ಸಂಘಕಟ್ಟಿ ಅವರನ್ನೂ ಸರ್ಕಾರಿ ನೌಕರರೆಂದು ಪರಿಗಣಿತವಾಗಲು ಅವರ ಮೇಲಿನ ದಬ್ಬಾಳಿಕೆಗಳನ್ನು ಸೆಣಸುವ ಶಕ್ತಿ ನೀಡಲು ದುಡಿದರು.

ಬಾಲ್ಯದಲ್ಲಿ ತಂದೆಯನ್ನು ಕಳೆದುಕೊಂಡು ತಮ್ಮ ಕುಟುಂಬವನ್ನು ಸಾಕಲು ಹೆಣಗಿದರೂ ನಂತರ ಬಂದ ಅವಕಾಶಗಳಿಂದ ಅತ್ಯಂತ ವೈಭವೋಪೇತ ಬದುಕನ್ನು ಸಾಗಿಸುವ ಅವಕಾಶವನ್ನು ತೊರೆದು ಉಪವಾಸ, ಜೈಲುವಾಸಗಳ ಸಂಕಷ್ಟಗಳಿಗೆ ಜೀವನವನ್ನು ಆರಿಸಿಕೊಂಡ ಕಾಂ ವಿಮಲಾ ರಣದಿವೆ ಒಬ್ಬ ಅಪೂರ್ವ ಕ್ರಾಂತಿಕಾರಿ. ಭಾರತದ ಕಮ್ಯೂನಿಸ್ಟ್ ಚಳುವಳಿಯ ಕಾರ್ಯಕರ್ತರಿಗೊಂದು ಮಾದರಿ.

ಅತ್ಯಂತ ಸರಳವಾಗಿ ಜೀವಿಸಿದ ಎಂದೂ ಅಹಂಕಾರ ಪಡದೆ ಸೌಜನ್ಯ ಮೂರ್ತಿಯಾಗಿದ್ದ ಈ ತ್ಯಾಗಮಯಿ ಇನ್ನಿಲ್ಲ. ಆದರೆ ಅವರ ಬದುಕಿನ ಹಲವು ಆದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳೋಣ.

ಸಿನಿಮಾ

ಸೌಹಾರ್ದದ ಅನಿವಾರ್ಯತೆಯನ್ನು ಬಿಂಬಿಸುವಲ್ಲಿ ಸೋತ

ಹಿಂದುಸ್ತಾನ್ ಕಿ ಕಸಮ್



ಭಾರತ ಪಾಕಿಸ್ತಾನ ಒಂದಾಗಬೇಕು, ಸಹಬಾಳ್ವೆ ನಡೆಸುವಂತಾಗಬೇಕು, ನೆರೆಹೊರೆಯ ದೇಶಗಳಾಗಿ ಸ್ನೇಹದಿಂದಿರಬೇಕು, ಆಗ ಎರಡೂ ರಾಷ್ಟ್ರಗಳೂ ಬಲಿಷ್ಠ ರಾಷ್ಟ್ರಗಳಾಗಲು ಸಾಧ್ಯ. ಇದು 'ಹಿಂದುಸ್ತಾನ್ ಕಿ ಕಸಮ್' ಚಿತ್ರದ ಆಶಯ.

ಪಾಕಿಸ್ತಾನಿ ಸೇನೆಯು ಭಾರತ-ವಿರೋಧಿ ಚಟುವಟಿಕೆಗಳನ್ನು ಸಂಗ್ರಹಿಸಿ ಭಾರತೀಯ ಸೇನೆಗೆ ಮುಟ್ಟಿಸುವ ಸಂದರ್ಭದಲ್ಲಿ ಅನೇಕ ಅಧಿಕಾರಿಗಳ ಕೊಲೆಯಾಗುತ್ತಿರುತ್ತದೆ. ಇದು ಹೇಗೆ, ಯಾರಿಂದ ಎಂಬುದು ಭಾರತೀಯ ಸೇನೆಗೆ ತಿಳಿಯದ ಕಗ್ಗಂಟಾಗಿರುತ್ತದೆ. ಆದರೆ ಕಥೆಗಾರನಾದ ಅಜಯ್ (ಅಜಯ್ ದೇವಗನ್)ನ ಕಥೆಗಳಲ್ಲಿ ಈ ಅಧಿಕಾರಿಗಳ ಕೊಲೆಯ ರಹಸ್ಯ ಬಯಲಾಗುತ್ತಿರುತ್ತದೆ. ಸೇನಾಧಿಕಾರಿಗಳು ಆತನನ್ನು ಬಂಧಿಸಿ ವಿಚಾರಣೆಗೊಳಪಡಿಸಿದಾಗ ತಾನು ಕನಸಿನಲ್ಲಿ ಕಾಣುವುದನ್ನು ಕಥೆಯಾಗಿಸುವುದಾಗಿ ಹೇಳುವುದನ್ನು ನಂಬದ ಆತನನ್ನು ಮನಶಾಸ್ತ್ರಜ್ಞರ ಬಳಿಗೆ ಕರೆದೊಯ್ದು ವಶೀಕರಣಕ್ಕೊಳಪಡಿಸಿದಾಗ ಬಾಲ್ಯದ ನೆನಪುಗಳಿಂದ ಚಡಪಡಿಸುತ್ತಾನೆ. ನಂತರ ತಾಯಿಯನ್ನು ವಿಚಾರಿಸಿದಾಗ ನಿಜ ಸಂಗತಿ ತಿಳಿಯುತ್ತದೆ.

ಯುದ್ಧ ವಿರಾಮ ಸಂದರ್ಭದಲ್ಲಿ ಭಾರತೀಯ ಸೇನೆ ಸಂತೋಷಾಚರಣೆಯಲ್ಲಿರುವಾಗ ಪಾಕ್ ಸೇನೆ ಯುದ್ಧ ವಿರಾಮ ಘೋಷಣೆಯನ್ನು ಉಲ್ಲಂಘಿಸಿ ಧಾಳಿ ಮಾಡುತ್ತದೆ. ಆ ಸಂದರ್ಭದಲ್ಲಿ ಅಜಯ್‌ನ ತಂದೆ ಮರಣ ಹೊಂದುತ್ತಾರೆ. ಆತನ ಇಬ್ಬರು ಅವಳಿ-ಜವಳಿ ಮಕ್ಕಳಲ್ಲಿ ಅಜಯ್ ತಾಯಿಯ ಬಳಿ ಸೇರಿದರೆ ರಾಜುವನ್ನು ಪಾಕ್ ಸೈನಿಕನೊಬ್ಬ ಅಪಹರಿಸುತ್ತಾನೆ. ಮುಂದೇ ಆತನೇ ಭಾರತ ವಿರೋಧಿಯಾಗಿ ಸೇನಾಧಿಕಾರಿಗಳ ಹತ್ಯೆಯಲ್ಲಿ ತೊಡಗಿರುತ್ತಾನೆ. ಈತನ ಕಾರ್ಯಚಟುವಟಿಕೆಗಳೇ ಅಜಯ್‌ನ ಕನಸಿನಲ್ಲಿ ವ್ಯಕ್ತಗೊಳ್ಳುತ್ತಿರುತ್ತವೆ.

ಭಾರತ ಮತ್ತು ಪಾಕ್‌ನ ನಡುವೆ ಉತ್ತಮ ಬಾಂಧವ್ಯ ಬಯಸುವ ಪಾಕ್‌ನ ಪ್ರಧಾನಿ ಶಾಂತಿ ಸಂಧಾನಕ್ಕಾಗಿ ಭಾರತಕ್ಕೆ ಹೊರಟಾಗ ಭಾರತದೊಂದಿಗೆ ಸಹಬಾಳ್ವೆಯನ್ನು ಸಹಿಸದ ಅಲ್ಲಿಯ ಸೇನೆ ರಾಜುವನ್ನು ಪ್ರಧಾನಿಯ ಹತ್ಯೆಗೆ ನೇಮಿಸುತ್ತದೆ. ಚಿಕ್ಕಂದಿನಿಂದಲೂ ಆತನಿಗೆ ಸುಳ್ಳು ಸುದ್ದಿಗಳನ್ನು ಹೇಳಿ ಭಾರತ ವಿರೋಧಿ ಮುಸ್ಲಿಮನನ್ನಾಗಿ ಆತನನ್ನು ಸೇನೆ ರೂಪಿಸಿರುತ್ತದೆ.

ಆದರೆ ಕೊನೆಯ ಹಂತದಲ್ಲಿ ರಾಜುವಿಗೆ ತನ್ನ ಹುಟ್ಟಿನ ಅರಿವಾಗಿ ತನ್ನ ಸಹೋದರ ಅಜಯ್‌ನೊಂದಿಗೆ ಪಾಕ್‌ನ ಪ್ರಧಾನಿಯ ರಕ್ಷಣೆಗೆ ನಿಲ್ಲುತ್ತಾನೆ. ಅತ್ಯಂತ ಚಾಣಾಕ್ಷತನದಿಂದ ಪ್ರಧಾನಿಯನ್ನು ರಕ್ಷಿಸಿ ಪಾಕ್ ಸೇನೆಯ ಸಂಚನ್ನು ವಿಫಲಗೊಳಿಸುತ್ತಾನೆ. ಇದು ಚಿತ್ರದ ಒಟ್ಟು ಕಥೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪಾಕ್ ಸೇನೆ ಭಾರತದೊಂದಿಗೆ ಉತ್ತಮ ಬಾಂಧವ್ಯವನ್ನು ಬಯಸುವುದಿಲ್ಲವಾದರೂ ಅಲ್ಲಿಯ ಎಲ್ಲಾ ಮುಸ್ಲಿಮರು ಭಾರತದೊಂದಿಗೆ ಘರ್ಷಣೆ ಬಯಸುವುದಿಲ್ಲ ಮತ್ತು ಭಾರತದ ಮುಸ್ಲಿಮರೆಲ್ಲರೂ ಭಾರತ ವಿರೋಧಿಯಾಗಿರುವುದಿಲ್ಲವೆಂಬುದು. ಉದಾಹರಣೆಗೆ ರಾಜುವಿನ ಮುಸ್ಲಿಂ ಪ್ರೇಯಸಿ (ಮೊನಿಷಾ) ಆತನ ಚಟುವಟಿಕೆಗಳಿಗೆ ಸಹಕರಿಸದೆ "ಮುಸ್ಲಿಮಳಾಗಿ ಹುಟ್ಟಿದ್ದರೂ ಬದುಕುತ್ತಿರುವ ಈ 'ಹಿಂದುಸ್ಥಾನದ ಮೇಲಾಣೆ' ಈ ಮಣ್ಣಿಗೆ ದ್ರೋಹ ಬಗೆಯಲಾರೆ" ಎಂದು ಆತನನ್ನು ಪೋಲೀಸರಿಗೆ ಒಪ್ಪಿಸಲೋದಾಗ ಆತನಿಂದ ಹತಳಾಗುವುದು, ಅಜಯ್‌ನ ಮುಸ್ಲಿಂ ಸ್ನೇಹಿತ ಹಲವಾರು ಮಕ್ಕಳ ರಕ್ಷಣೆಗಾಗಿ ಪಾಕ್ ಸೇನೆ ಇರಿಸಿದ ಬಾಂಬ್ ಮೇಲೆ ಮೇಲೆ ಬಿದ್ದು ಪ್ರಾಣ ಕಳೆದುಕೊಳ್ಳುವುದು ಇವೆಲ್ಲವೂ ನಿರ್ದೇಶಕರ ಆಶಯವನ್ನು, ಇಚ್ಛೆಯನ್ನು ವ್ಯಕ್ತಪಡಿಸುತ್ತವೆ. ಇದು ನಿಜಕ್ಕೂ ಮೆಚ್ಚುವಂತ ಅಂಶವಾಗಿದೆ.

ಆದರೆ ನಿರ್ದೇಶಕರು ಅವಳಿ ಮಕ್ಕಳ ಸಿದ್ಧ ಫಾರ್ಮುಲಾದೊಂದಿಗೆ ವ್ಯಾಪಾರೀ ದೃಷ್ಟಿಕೋನದಿಂದ ಎಲ್ಲಾ ರೀತಿಯ ಮಸಾಲೆಗಳನ್ನು ತುಂಬುವ ಆತುರದಲ್ಲಿ ಚಿತ್ರದ ಗಂಭೀರತೆಯನ್ನು ಹಾಳುಮಾಡಿದ್ದಾರೆ. ಸ್ನೇಹದ, ಸಹಬಾಳ್ವೆಯ ಆಶಯವನ್ನು ಪ್ರೇಕ್ಷಕನ ಮನಸ್ಸಿ… ನಾಟುವಂತೆ ನಿರೂಪಿಸುವಲ್ಲಿ ಎಡವಿದ್ದಾರೆ. ದೇಶಪ್ರೇ… ಭಾಷಣಗಳನ್ನು ಬಿಗಿಯಲೆಂದೇ ಅಮಿತಾಬ್‌ರ ಪಾತ್ರ… ಸೃಷ್ಟಿಸಿದಂತಿದೆ.

ವೀರುದೇವಗನ್ ಈ ಮೊದಲು ಸಾಹ… ನಿರ್ದೇಶಕರಾಗಿದ್ದವರು. ಈಗ ಚಿತ್ರ ನಿರ್ದೇ… ಕೈ ಹಾಕಿ ಚಿತ್ರ ನಿರೂಪಣೆಯ ಅನುಭವವಿಲ್ಲ… ರಿಂದಾಗಿಯೋ ಏನೋ ಸಾಹಸ ದೃಶ್ಯಗ… ಕಾಳಜಿ ವಹಿಸಿ ತಮ್ಮ ನಿಜ ಉದ್ದೇಶವ… ಪ್ರೇಕ್ಷಕನಿಗೆ ಮನದಟ್ಟು ಮಾಡಿಸುವ… ಸೋತಿದ್ದಾರೆ.

ಭಾರತದ ಪ್ರತಿಯೊಬ್ಬ ಮುಸ್ಲಿಮ… ಭಾರತ- ವಿರೋಧಿಯಾಗಿರುವುದಿಲ್ಲ (ಕಾರ್ಗಿ… ಕಾರ್ಯಾಚರಣೆ ಯಲ್ಲಿ ಅನೇಕ ಭಾರತೀ… ಮುಸ್ಲಿಂ ಸೈನಿಕರು ಸತ್ತಿದ್ದಾರೆ) ಪಾಕ್‌ನ ಪ್ರತಿಯೊಬ್ಬ… ಭಾರತ ವಿರೋಧಿಯಾಗಿರುವ ದಿಲ್ಲ. ಅಲ್ಲಿಯ ಸೇನೆ… ಪಾತ್ರ, ದೇಶದ ಆಡಳಿತದ ಮೇಲಿನ ಹಿಡಿತ ಹೆ… ಎಂಬುದು ನಿಜ. ಆದರೆ ಅಲ್ಲಿಯ ಆಳುವ ಮಂದಿ ಕೂ… ಭಾರತ ದ್ವೇಷದ ಮೇಲೆಯೇ ಅಧಿಕಾರ ಸೂ… ಹಿಡಿದಿದ್ದಾರೆ. ಅದಕ್ಕಾಗಿಯೇ ದ್ವೇಷವನ್ನು ನಿರಂತರವಾ… ಪೋಷಿಸುತ್ತಿ ದ್ದಾರೆ ಎಂಬ ಸತ್ಯ ಚಿತ್ರದಲ್ಲಿ ಹೊ… ಹೊಮ್ಮುವುದಿಲ್ಲ. ಇಂತಹ ಸಂದರ್ಭದಲ್ಲಿ ಎರಡು… ದೇಶಗಳ ಸಂಬಂಧಗಳನ್ನು ಸರಿಯಾಗಿ ವಿಶ್ಲೇಷಿಸಿ… ನೆರೆಹೊರೆಯವರಾಗಿ ಸ್ನೇಹದಿಂದ ಉತ್ತ… ಬಾಂಧವ್ಯದಿಂದರಬೇಕಾದ ಅಗತ್ಯತೆಯನ್ನು ಪ್ರೇಕ್ಷಕನಿ… ಮನದಟ್ಟು ಮಾಡಿಸುವಲ್ಲಿ ಯಶಸ್ವಿ ಯಾಗಿದ್ದರೆ ಇದೊಂ… ಉತ್ತಮ ಚಿತ್ರವಾಗುತ್ತಿತ್ತು.

- ಎಂ.ಆರ…

ಬೆಕ್ಕು ಹೊರಟಿತು ಪ್ರಯಾಗ ಸ್ನಾನಕ್ಕೆ

ಸಿಕ್ಕಿದ ಯಾವುದೋ ಒಂದು ಮಾಲೆ
ತೆಗೆದು ಅದನ್ನು ಕಂಠದಲ್ಲಿ ಧರಿಸಿ
ಮತ್ತು ಬಳಿದುಕೊಂಡು ಹಣೆಯಲ್ಲಿ ವಿಭೂತಿ
ಧರಿಸಿಕೊಂಡು ಭೈರಾಗಿಯ ಮುಖವಾಡ,
ತನ್ನ ಹಿಂದಿನ ಪಾಪ ಕಳೆಯಲು
ಬೆಕ್ಕು ಹೋಯಿತು ಪ್ರಯಾಗ ಸ್ನಾನ ಮಾಡಲು।

ಇಲಿಗಳಿಗೆ ಹೇಳಿತು 'ಅಯ್ಯಾ ಪ್ರಿಯರೇ,
ಪಾಪ ಮಾಡಿದೆ ನಾನು ನೂರಾರು,
ಕೇಳಿದೊಡನೆ ದೇವ ಈಶ್ವರನ ಹೆಸರು
ಬಿಟ್ಟುಕೊಟ್ಟೆ ಎಲ್ಲಾ ಮೊದಲಿನ ಕೆಲಸ
ಈಗ ಹಿಡಿಯಿರಿ ನೀವು ನನ್ನ ಕೈಯ
ಹೋಗೋಣ ಪ್ರಯಾಗ ನಮ್ಮ ಸಂಗಾತ।

ಇಲಿಗಳು ಮಾಡದೇ ಯೋಚನೆ-ವಿಚಾರ
ಅದರೊಡನೆ ಹೋಗಲು ಮಾಡಿದವು ತಯ್ಯಾರ
ಬಲುದೂರ ತಲುಪಿದವು ಸೇತುವೆಯ ಹತ್ತಿರ
ಬೆಕ್ಕು ತಿಂದಿತು ಒಂದೊಂದಾಗಿ ಇವರ,
ಹಸಿವು ನೀಗಿಸಿತು ಈ ಪ್ರಕಾರ 'ಬಿಲ್ಲಿ'
ಇಲಿಗಳದ್ದು ಎಲ್ಲ ಆಯಿತು ಸಫಾಯಿ!

ಇದು ಒಂದು ಹಿಂದಿ ಹಾಡಿನ ಕನ್ನಡ ಭಾವಾನುವಾದ. ಉತ್ತರ ಕನ್ನಡ ಜಿಲ್ಲೆಯ ಯಮುನಾ ಗಾಂವ್ಕರ್ ಕಳುಹಿಸಿಕೊಟ್ಟಿದ್ದಾರೆ. ಈಗಿನ ರಾಜಕೀಯ ಸಂದರ್ಭದಲ್ಲಿ ಅರ್ಥಪೂರ್ಣವಾದದ್ದು, ಸಮಾಜವಾದಿ ಪಟೇಲರೂ ಈ ಇಲಿಗಳ ಸಾಲು ಸೇರಿದರೆ?



ವಿಜ್ಞಾನಿ ಸಿ.ಎನ್.ಆರ್. ರಾವ್ ಮತ್ತು ಕನ್ನಡ ಭಾಷೆ

ಅಂತರರಾಷ್ಟ್ರೀಯ ವಿಜ್ಞಾನಿ ಸಿ.ಎನ್.ಆರ್. ರಾವ್ ಅವರು ಈವರೆಗೆ ಬಿಜಿವಿಎಸ್‌ನ ರಾಜ್ಯ ಸಮಿತಿಯ ಅಧ್ಯಕ್ಷರಾಗಿದ್ದರು. ಮೊನ್ನೆ ಮೊನ್ನೆ ಬೆಂಗಳೂರಿನಲ್ಲಿ ನಡೆದ ಭಾರತಜ್ಞಾನವಿಜ್ಞಾನ ಸಮಿತಿಯ ಸರ್ವಸದಸ್ಯರ ಸಭೆಗೆ ಬಂದು ಮಾತನಾಡಿದರು. 10 ನಿಮಿಷದ ಅವರ ಚಿಕ್ಕ ಭಾಷಣದಲ್ಲಿ ಕೆಲವು ಮುಖ್ಯ ಕಾಳಜಿಗಳನ್ನು ಗುರುತಿಸಬಹುದಾಗಿತ್ತು.

1. ಭಾಷಾಮಾಧ್ಯಮ, ಮಾತೃಭಾಷೆಯ ಶಿಕ್ಷಣದ ಬಗ್ಗೆ ಒಂದೆರಡುವಾರದ ಹಿಂದೆ ಈ ಪತ್ರಿಕೆಯಲ್ಲಿ ದೀರ್ಘಲೇಖನವೊಂದು ಪ್ರಕಟ ಆಗಿತ್ತು. ಕನ್ನಡ ಭಾಷೆಯ ಜಾರಿಯ ಸಮಸ್ಯೆಗಳ ಕುರಿತು ಇಲ್ಲಿ ಚರ್ಚೆ ನಡೆದಿತ್ತು. ಕನ್ನಡದ ಬಳಕೆಯ ಬಗ್ಗೆ ಚರ್ಚೆ ಬಂದಾಗೆಲ್ಲಾ ಆಧುನಿಕ ವಿಜ್ಞಾನ, ತಂತ್ರಜ್ಞಾನಗಳ ಬಗ್ಗೆ ಸಮರ್ಪಕವಾಗಿ ಮಾತೆನಾಡುವಷ್ಟು, ಬರೆಯುವಷ್ಟು ಕನ್ನಡ ಸಮೃದ್ದ ಭಾಷೆ ಅಲ್ಲ ಎಂದು ಕೆಲವರು ಹೇಳಿದರೆ, ಇನ್ನು ಕೆಲವರು ಇದು ಸರ್ಕಾರಿ ಶಾಲೆಯಲ್ಲಿ ಮಾತ್ರ ಬೋಧಿಸಲು ಅನುಕೂಲವಾದ ಭಾಷೆ ಎನ್ನುತ್ತಾರೆ.

ಇಂದು ಕರ್ನಾಟಕದ ಅನೇಕ ಕಡೆಗಳಲ್ಲಿ, ಅದರಲ್ಲೂ ಬೆಂಗಳೂರೆಂಬ ಮಾಯಾನಗರಿಯಲ್ಲಿ ಇಂಗ್ಲೀಷ್ ಮಾತಾಡುವುದೊಂದು ಪ್ಯಾಶನ್ ಆಗಿದೆ. ಒಂದು ರೀತಿಯಲ್ಲಿ ಇಂಗ್ಲೀಷ್ ಇಲ್ಲಿ ಪ್ರತಿಷ್ಟೆಯ ಪ್ರಶ್ನೆ. ಕನ್ನಡದಲ್ಲಿ ಮಾತನಾಡುವುದು ಅವಮಾನಕಾರಿಯೆಂದು, ಇಂಗ್ಲೀಷನ್ನು ಮಾತನಾಡುವ ಹಠ ಕೆಲವರದು. ಅಪರಿಚಿತರು ಸಿಕ್ಕಿದರಂತೂ ಮುಗಿದೇ ಹೋಯಿತು ಇನ್ನು ತರಕಾರಿ ಮಾರುವವನೂ, ಬೀಡಾ ಕಟ್ಟಿಕೊಡು ವವನೂ, ಸರಿಯಾಗಿ ಬಾರದ ಇಂಗ್ಲೀಷ್‌ನಲ್ಲಿಯೇ ವ್ಯವಹರಿಸಲು ಪ್ರಯತ್ನಿಸುತ್ತಾನೆ.

ಇಂಥವರ ಮಧ್ಯೆ ಅಂತರಾಷ್ಟ್ರೀಯ ವಿಜ್ಞಾನಿ ಸಿ.ಎನ್.ಆರ್.ರಾವ್ ಅವರು ಶುದ್ಧವಾದ ಕನ್ನಡದಲ್ಲಿ (ಶುದ್ಧ ಎಂದು ಯಾಕೆ ಹೇಳಿದೆನೆಂದರೆ 4-5 ಪದದ ಒಂದು ವಾಕ್ಯದಲ್ಲಿ 3-4 ಇಂಗ್ಲೀಷ್ ಪದವನ್ನೇ ಬಳಸಿ ಕನ್ನಡ ಮಾತನಾಡುವವರ ಪರಂಪರೆಯೇ ಇದೆ) ಮಾತನಾಡಿ ಎಲ್ಲರನ್ನು ಬೆರಗುಗೊಳಿಸಿದರು ಅನ್ನುವುದಕ್ಕಿಂತ ಅನೇಕರಿಗೆ ಆತ್ಮೀಯರಾದರು ಮತ್ತು ಕೆಲವರಿಗೆ 'ಆಘಾತ' (ಇಷ್ಟು ದೊಡ್ಡ ವಿಜ್ಞಾನಿ ಆದರೂ ಇಂಗ್ಲೀಷ್‌ನಲ್ಲಿ ಮಾತನಾಡಲಿಲ್ಲವೆಂಬ ಆಘಾತ) ಉಂಟು ಮಾಡಿದರು ಎನ್ನುವುದು ಹೆಚ್ಚು ಸತ್ಯ.

ನಮ್ಮ ಜ್ಞಾನ ಕ್ಷೇತ್ರದಲ್ಲಿ ನಮ್ಮ ಭಾಷೆಯ ಬಗ್ಗೆ ಇರುವ ಅವೈಜ್ಞಾನಿಕ ತಿಳುವಳಿಕೆಯ ಫಲ ಈ ಭಾಷಾಗೊಂದಲ. ಆದರೆ ಸಿ.ಎನ್.ಆರ್ ಅವರು ಕರ್ನಾಟಕದ ವಿಜ್ಞಾನ ಸಂಘಟನೆಯ ಸದಸ್ಯರನ್ನು ಉದ್ದೇಶಿಸಿ ಮಾತನಾಡುವಾಗ ಕನ್ನಡದಲ್ಲಿಯೇ ಮಾತನಾಡುವುದು ಸೂಕ್ತ ಎನ್ನುವ ವೈಜ್ಞಾನಿಕ ತೀರ್ಮಾನಕ್ಕೆ ಬಂದಿರುವುದು ಇಲ್ಲಿ ಉಲ್ಲೇಖಾರ್ಹ. ಜಗತ್ತಿನ ನೂರಾರು ರಾಷ್ಟ್ರಗಳೊಂದಿಗೆ ಇಂಗ್ಲೀಷ್‌ನಲ್ಲಿಯೇ ವ್ಯವಹರಿಸಿ ಭಾಷಾ ನೈಪುಣ್ಯತೆಯನ್ನುಗಳಿಸಿದ ಇವರು, ಕನ್ನಡದಲ್ಲೂ ಅಷ್ಟು ಸುಂದರವಾಗಿ ಮಾತನಾಡಿದ್ದು ನಮ್ಮ ರಾಜ್ಯದ ಹಲವರಿಗೆ ಮಾದರಿಯಾಗಿತ್ತು ಎನ್ನುವ ಕಾರಣಕ್ಕಾಗಿ ಇಲ್ಲಿ ದಾಖಲಿಸಿದ್ದೇನೆ.

2 ದೇಶದ ಕೆಲವು ಮುಖ್ಯ ಸಮಸ್ಯೆಗಳ ಕಡೆಗೆ ಅವರು ಗಮನಸೆಳೆದರು. "ನಮ್ಮ ದೇಶ ಅವಮಾನಪಡಬೇಕಾದದ್ದು ಸಾಕ್ಷರತೆಯ ವಿಷಯದಲ್ಲಿ. ಇನ್ನೂ 50 ರಿಂದ 55 ಶೇಖಡಾ ಜನರು ಅಕ್ಷರಸ್ಥರಾಗಲು ಸಾಧ್ಯವಾಗಲಿಲ್ಲ. ಇನ್ನು ಯಾವಾಗ ನಾವು ಅವರಿಗೆ ಅಕ್ಷರ ಕೊಡುತ್ತೇವೆ. ಮಹಿಳೆಯರ ಸ್ಥಿತಿಯಂತೂ ಇನ್ನೂ ಶೋಚನೀಯ. ಬಿ.ಜಿ.ವಿ.ಎಸ್. ಅನೇಕ ಪುಸ್ತಕಗಳನ್ನು ಪ್ರಕಟಿಸುತ್ತಿದೆ, ಸರಿ, ಇದು ಯಾರಿಗಾಗಿ? ಅಕ್ಷರ ಬಲ್ಲವರಿಗಾಗಿ ಅಲ್ಲವೆ? ಈ ಅಕ್ಷರಬರದ ಬಹು ಸಂಖ್ಯಾತರ ಬಗ್ಗೆ ವಿಜ್ಞಾನ ಸಂಘಟನೆಗಳು ಯೋಚಿಸಬೇಕು. ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಹಿಂದೆಲ್ಲಾ ಸಾಕ್ಷರತೆಯ ಬಗ್ಗೆ ಬಿ.ಜಿ.ವಿ.ಎಸ್. ಆಂದೋಲನವನ್ನು ನಡೆಸಿತ್ತು. ಈಗ ಇದು ಕಡಿಮೆ ಆಗಿದೆ "ಎನ್ನುವ ಮೂಲಕ ಇವರು ಬಿ.ಜಿ.ವಿ .ಎಸ್. ನಂತಹ" ಸಂಘಟನೆಗಳು ಹೋಗಬೇಕಾದ ಮಾರ್ಗವನ್ನು ಸರಿಯಾಗಿ ಗುರುತಿಸಿದರು. 'ಸಾಕ್ಷರತೆ' ಎಂದರೆ ಕೇವಲ ಓದಲು ಮತ್ತು ಬರೆಯಲು ಕಲಿಸುವುದು… ಅಲ್ಲ. ಅದು ವೈಜ್ಞಾನಿಕ ಸಾಕ್ಷರತೆ ಆಗಿರಬೇಕೆಂ… ಸಿ.ಎನ್.ಆರ್. ಅವರ ಪ್ರತಿಪಾದನೆ. ಈ ಮೌಢ್ಯ… ಕಂದಾಚಾರ ಕೇವಲ ವಿದ್ಯೆಯಿಂದ ಹೋಗುವುದಿ… (ಅದರಲ್ಲೇ ಹೆಚ್ಚಿದೆ) ವೈಜ್ಞಾನಿಕ ಅರಿವ… ಮೂಡಿಸುವ ಕ್ರಿಯೆ ಆಗಬೇಕಾಗಿದೆ. ಹೀಗಾದ… ಮಾತ್ರ ನಾವು ಏನನ್ನಾದರೂ ಸಾಧಿಸಬಹುದ… ಎಂದು ವಿದ್ಯಾವಂತರೆನಿಸಿಕೊಂಡವರಲ್ಲಿ ಮ… ಮಾಡಿರುವ ಮೌಢ್ಯದ ಬಗ್ಗೆ ವಿಷಾ… ವ್ಯಕ್ತಪಡಿಸಿದರು.

ಅನಂತರ ಅವರು ಗಮನ ಸೆಳೆದ… ಕುಡಿಯುವ ನೀರಿನ ಬಗ್ಗೆ. "ನಮ್ಮ ದೇಶದಲ್ಲಿ 75 ಕಾಯಿಲೆಗಳು ಬರುವುದು ಅಶುದ್ಧ ನೀರಿನಿಂ… ಒಳ್ಳೆಯ ನೀರು ಕುಡಿಯಲು ಈ ದೇಶದ… ಸಿಗುತ್ತಿಲ್ಲ. ಒಳ್ಳೆಯ ಗಾಳಿ ಕೂಡ ಸಿಗುತ್ತಿ… ಒಳ್ಳೆಯ ನೀರನ್ನು ಕೊಡುವುದು ಸರ್ಕಾರದ ಹ… ಆದರೆ ಅದಕ್ಕೆ ಜನರು ತೆರಿಗೆ ಕೊಡಬೇಕಾಗಿ… ತಮ್ಮ ಹಕ್ಕನ್ನು ಹಣ ಕೊಟ್ಟು ಪಡೆಯಬೇಕಾ… ದುರಂತ ಇಲ್ಲಿದೆ" ಎಂದು ವಿಷಾದ ವ್ಯಕ್ತಪಡಿ… ದರು. ಮುಂದಿನ ವರ್ಷ ಇಡೀ ಜಗತ್ತಿನಲ್ಲಿ ಒಳ್ಳೆ… ನೀರನ್ನು ಬಳಸುವ ಬಗ್ಗೆ ಆಂದೋಲನವ… ಹಮ್ಮಿಕೊಳ್ಳಲು ಮೂರನೇ ಜಗತ್ತಿನ ರಾಷ್ಟ್ರ… ವಿಜ್ಞಾನಿಗಳ ಸಂಘ (ಇದಕ್ಕೆ ಮುಂದಿನ ವರ್ಷದಿ… ಸಿ.ಎನ್.ಆರ್. ರಾವ್ ಅವರು ಅಧ್ಯಕ್ಷ… ನಿರ್ಧರಿಸಿದೆ. ನೀವೆಲ್ಲ ಅದರಲ್ಲಿ ಪಾಲ್ಗೊಳ್ಳಬೇ… ಎಂದು ವಿನಂತಿಸಿದರು.

ಅಂದರೆ ಮೂರನೇ ಜಗತ್ತಿನ ರಾಷ್ಟ್ರ… ಪರಿಸರಕ್ಕೆ ಸಂಬಂಧಿಸಿದ ವಿಜ್ಞಾನಿಗಳ ಸಂಘ… ಅಧ್ಯಕ್ಷರಾಗಿ ಕೆಲಸ ವಹಿಸಿಕೊಳ್ಳುತ್ತಿರು… ಸಿ.ಎನ್.ಆರ್. ರಾವ್ ಅವರು ಈ ವ… ಬಿ.ಜಿ.ವಿ.ಎಸ್.ನ ಅಧ್ಯಕ್ಷರಾಗಿರುವು… ಸಂಘಟನೆಗೊಂದು ಹೆಮ್ಮೆ.

- ವಿಠ್ಠಲ ಭಂಡಾ…

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ